
ಪುಸ್ತಕ ಪ್ರಪಂಚ

ಜನವರಿ - ೧೯೭೮

50



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ-೪

ಜನವರಿ-೧೯೯೮

ಮುಖ ಚಿತ್ರ
ಶಿವರಾಮ ಕಾರಂತರು

ಕೃಪೆ : ನೇತ್ರರಾಜು

ಸಂಪಾದಕ ಮಂಡಳಿ :

ಪ್ರಧಾನ ಸಂಪಾದಕರು
ಡಾ|| ದೇ. ಜವರೇಗೌಡ

ಸಂಪಾದಕ
ಚಂದ್ರಶೇಖರಾರಾಧ್ಯ

ಸದಸ್ಯರು

ಕೋಣಂದೂರು ಲಿಂಗಪ್ಪ
ಅಧ್ಯಕ್ಷರು
ಹೆಚ್. ಎಸ್. ಮಹದೇವ ಪ್ರಸಾದ್
ಉಪಾಧ್ಯಕ್ಷರು
ವೈ. ಎನ್. ಶಂಕರೇಗೌಡ
ಖಜಾಂಚಿ
ಆರ್. ಎಲ್. ಮಂಗಳೂರ್
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ರಾ. ನಂ. ಶ್ರೀನಿವಾಸಮೂರ್ತಿ
ಡಾ|| ಪ್ರಧಾನ್ ಗುರುದತ್ತ
ಪರಮಶಿವ ನಡುಬೆಟ್ಟ
ಡಾ|| ಹಾ. ತಿ. ಕೃಷ್ಣೇಗೌಡ
ಸಿ. ನಾಗಣ್ಣ
ಲತಾ ರಾಜಶೇಖರ್

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಅಮರರಾದ ಕಾರಂತರು

ಸಾಹಿತ್ಯ ಕ್ಷೇತ್ರದ ತ್ರಿವಿಕ್ರಮರೂ, ಸರ್ವಂಕಷ ಪ್ರತಿಭಾಸಂಪನ್ನರೂ, ಜ್ಞಾನ ವಿಜ್ಞಾನ ಕ್ಷೇತ್ರದ ಸಾಮ್ರಾಟರೂ, ಮನುಕುಲದ ಮಹಾಮೇರುವೂ, ವೈಚಾರಿಕ ದಾರ್ಶನಿಕರೂ ಮಹಾಪುರುಷ ಸರಸ್ವತಿಯೂ ಆದ ಶಿವರಾಮ ಕಾರಂತರು ನಿಸರ್ಗ ಧರ್ಮಕ್ಕೆ ಮಣಿದು ೯–೧೨–೯೭ ರಂದು ತಮ್ಮ ೯೬ ನೆಯ ವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದರೆಂಬ ವಾರ್ತೆಯಿಂದಾಗಿ ನಾಡಿನ ಎಲ್ಲೆಡೆಗಳಲ್ಲಿ ಮಂಕು ಕವಿದಿದೆ. ಅವರ ಪಾರ್ಥಿವ ಶರೀರ ಪಂಚಭೂತಗಳಲ್ಲಿ ವಿಲೀನಗೊಂಡರೂ, ಅವರ ಚೈತನ್ಯಮಾತ್ರ ನಾಡು ನುಡಿ ಜನರಿಗೆ ಆಶಾಕಿರಣವಾಗಿ, ಆಶೀರ್ವಾದ ಶಕ್ತಿಯಾಗಿ ಸರ್ವವ್ಯಾಪಿಯಾಗಿ ಸೂಕ್ಷ್ಮ ರೂಪದಲ್ಲಿರುತ್ತದೆಂಬುದಂತು ನಿಜ. ಅವರಿನ್ನೂ ಬದುಕಿದ್ದರೆ ಅವರ ಚಿಂತನಾನುಭವಗಳ ನಿತ್ಯಸುಗ್ಗಿ ನಿರಂತರ ಜ್ಞಾನ ಸ್ನಾನ ಭಾರತೀಯರಿಗೆ ದೊರೆಯುತ್ತಿತ್ತೆಂಬುದರಲ್ಲಿ, ಅನ್ಯಾಯಕ್ಕೆ ವಿರುದ್ಧ ಸೆಟೆದೆದ್ದು ನಿಂತು ಜನರಿಗೆ ರಕ್ಷಾ ಕವಚದಂತಿದ್ದ ಧೀರ ಪುರುಷನ ನಿರ್ಗಮನದಿಂದ ನಾಡಿನಲ್ಲಿ ತಾತ್ಕಾಲಿಕ ವಾಗಿ ಶೂನ್ಯ ತುಂಬಿಕೊಂಡಿದೆಯೆಂಬುದರಲ್ಲಿ ಸಂದೇಹವಿಲ್ಲ. ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಶಿವರಾಮರೂಪಿಯಾಗಿದ್ದ ಅವರಿಗೆ ಸಾವೆಂದರೇನು? ಶಿಲ್ಪದಲ್ಲಿ ಶಿಲ್ಪಿ ಹುದುಗಿರುವಂತೆ, ಚಿತ್ರದಲ್ಲಿ ಚಿತ್ರಕಾರ ಜಾಗ್ರತವಾಗಿರುವಂತೆ ತಮ್ಮ ಕೃತಿಗಳಲ್ಲಿ ಅವರು ಜೀವಂತವಾಗಿದ್ದಾರೆ. ಅವರು ದಿಟಕ್ಕೂ ಚಿರಂಜೀವಿಗಳು ಕಾಲದೇಶಾತೀತವಾದ ಕೃತಿಗತ ಜ್ಞಾನಾನುಭವ ಸಂಪತ್ತಿಗೆ ವಾರಸುದಾರರಾದ ನಾವು ಮತ್ತು ಮುಂದಿನ ಪೀಳಿಗೆಯ ಜನ ಭಾಗ್ಯಶಾಲಿಗಳಲ್ಲವೆ?

ಬದುಕಿನಲ್ಲಂತೂ ಸಾವಿನಲ್ಲಿಯೂ ಕಾರಂತರು ಪುಣ್ಯಪುರುಷರು. ಶ್ರೀಯವರೊಮ್ಮೆ ನಮ್ಮ ಮನೆಗೆ ಬಂದಿದ್ದಾಗ 'ನಿಮ್ಮ ಆರೋಗ್ಯದ ಗುಟ್ಟೇನು ಅಂತ ಕೇಳಿದೆ?' 'ದೇವರ ಕೃಪೆ ಅಥವಾ ನನ್ನ ಹುಷಾರಿ ಕಾರಣ ಅಂತ ನಾನು ಹೇಳೋಲ್ಲ. ಅದೆಲ್ಲ ನಿಸರ್ಗಧರ್ಮ' ಎಂದರು. ಅನೇಕರು ತಿಂಗಳುಗಟ್ಟಳೆ ನರಳಿ ನರಳಿ ಸಾಯುತ್ತಾರೆ. ಅಂಥವರನ್ನು ನೋಡಲಾಗದು. ಕಾರಂತರು ನರಳದೆ, ಇತರರಿಗೆ ನೋವು ಕೊಡದೆ ತೀರಿಕೊಂಡರು. ೨–೧೨–೯೭ ರಂದು ಆಸ್ಪತ್ರೆ ಸೇರಿದರು. ಮುಂದಿನ ಒಂದೆರಡು ದಿನಗಳಲ್ಲಿ ಪ್ರಜ್ಞೆ ತಪ್ಪಿತು. ನರಳಲಿಲ್ಲ; ಮತ್ತೆ ಪ್ರಜ್ಞೆ ಬರಲಿಲ್ಲ. ಅವರಾಗಲೇ ಇಹಲೋಕವನ್ನು ಬಿಡಲು ಸಜ್ಜಾಗುತ್ತಿದ್ದಿರಬೇಕು. ಅವರ ನಡೆನುಡಿಗಳಲ್ಲಿ ಗಾಂಭೀರ್ಯ ಕಾಠಿನ್ಯ ಅಹಂಕಾರವನ್ನು ಕಾಣುವವರಿದ್ದಾರೆ. ಅವರನ್ನು ಸರಿಯಾಗಿ ಅರ್ಥಮಾಡಿ ಕೊಳ್ಳದ ಸಂದರ್ಭದಿಂದಾಗಿ ಸಂಭವಿಸುವ ತಪ್ಪದು. ಅವರ ಗಾಂಭೀರ್ಯದ ಹಿಂದೆ

ವಿನೋದವಿದೆ, ಕಾಠಿನ್ಯದ ಹಿಂದೆ ಮಾರ್ದವತೆ ಇದೆ, ಅಹಂಕಾರದ ಹಿಂದೆ ಆತ್ಮಪ್ರತ್ಯಯವಿದೆ ಎಂಬುದನ್ನು ಹಲವರು ಬಲ್ಲರು. ಹಲವುಸಲ ನಾನವರನ್ನು ಭೇಟಿ ಮಾಡಿದ್ದೇನೆ, ಅವರ ಮನೆಗೆ ಹೋಗಿದ್ದೇನೆ. ಒಂದು ಸಲವೂ ಅವರಲ್ಲಿ ಮೇಲ್ಕಾಣಿಸಿರುವ ದೌರ್ಬಲ್ಯಗಳನ್ನು ಕಂಡಿಲ್ಲ. ಆತಿಥ್ಯದಲ್ಲಿ. ಉಪಚಾರದಲ್ಲಿ, ಸಭ್ಯತೆಯಲ್ಲಿ ಅವರು ಯಾರಿಗೂ ಕಡಮೆಯಲ್ಲ. ಊಟದ ಸಮಯದಲ್ಲಿ ಊಟ ಮಾಡಬೇಕು, ತಿಂಡಿ ಸಮಯದಲ್ಲಿ ತಿಂಡಿ ತಿನ್ನಬೇಕು, ಉಳಿದ ಸಮಯದಲ್ಲಿ ಏನನ್ನಾದರೂ ಸ್ವೀಕರಿಸಲೇಬೇಕು. ಆ ಸಮಯದ ಅವರ ಹಾಸ್ಯ ವಿನೋದಗಳು ಊಟದ ಜತೆಗೆ ಸೊಗಸಾದ ವ್ಯಂಜನಗಳಾಗುತ್ತವೆ. ಅವರ ಜತೆಯಲ್ಲಿದ್ದಾಗ ರಾಜಕೀಯ ಭ್ರಷ್ಟಾಚಾರ ಹಾದರಗಳನ್ನು ಟೀಕಿಸುತ್ತಾರೆ, ಸಾಹಿತ್ಯ ಕ್ಷೇತ್ರದ ಚೌರ್ಯ ಅನುಭವ ದಾರಿದ್ರ್ಯವನ್ನು ಅಣಕಿಸುತ್ತಾರೆ, ಸಮಾಜದಲ್ಲಿ ಕಾಣುವ ಅನೈತಿಕತೆಯನ್ನು ದೂಷಿಸುತ್ತಾರೆ. ನಾಡು ನುಡಿಗಳ ಮೇಲಣ ಪ್ರೇಮದಿಂದ ಅವರ ನುಡಿ ಖಾರವಾಗಬಹುದು. ಅವರು ವ್ಯವಸ್ಥೆಯ ಬಗ್ಗೆ ಖಂಡನೆಯ ಖಡ್ಗವೆತ್ತುತ್ತಾರೆಯೇ ಹೊರತು ವ್ಯಕ್ತಿಗಳ ಮೇಲಲ್ಲ. ನೇರವಾದ ವ್ಯಕ್ತಿನಿಂದೆಯನ್ನು ಅವರ ಬಾಯಿಂದ ಕೇಳಿಲ್ಲ. 'ನ್ಯಾಯನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ, ಶರಣನಾರಿಗಂಜುವುದಿಲ್ಲ' ಎಂಬ ಬಸವಣ್ಣನವರ ಜಾಯಮಾನ ಅವರದು.

ಶಿಸ್ತು ಅವರ ಹುಟ್ಟುಗುಣವೆಂಬುದಕ್ಕೆ ಅನೇಕ ನಿದರ್ಶನಗಳನ್ನೊದಗಿಸಬಹುದು. ಮೂವತ್ತು ವರ್ಷಗಳ ಹಿಂದಿನ ಮಾತು. ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟಿನ ಪರಿಷ್ಕರಣ ಕಾರ್ಯ ನಡೆಯುತ್ತಿತ್ತು. ಡಾ|| ಎಸ್. ವಿ. ರಂಗಣ್ಣನವರು ಪ್ರಧಾನ ಸಂಪಾದಕರು ; ನಾನು ಸಮಿತಿಯ ಅಧ್ಯಕ್ಷ. ಕಾರಂತರು ಸದಸ್ಯರು. ಅವರ ನೇತೃತ್ವದಲ್ಲಿ ಆ ಕಾರ್ಯ ನಡೆಯುತ್ತಿತ್ತೆಂದೇ ಹೇಳಬೇಕು. ಆಗವರಿಗೆ ೬೫ ವರ್ಷ. ತಿಂಗಳಿಗೊಮ್ಮೆ ಸಮಿತಿ ಸೇರುತ್ತಿತ್ತು. ಬೆಳಗ್ಗೆ ೧೧ ಗಂಟೆಗೆ ಕುಳಿತರೆ ಸಂಜೆ ಐದರ ತನಕ ನಡೆಯುತ್ತಿತ್ತು. ಮಧ್ಯಾಹ್ನ ತಿಂಡಿಯ ಸಮಯ ಬಿಟ್ಟರೆ ಯಾರೂ ಆಸನ ಬಿಟ್ಟೇಳುತ್ತಿರಲಿಲ್ಲ. ಕಾರಂತರಂತು ಕೊನೆಯತನಕ ನೆಟ್ಟಗೆ ಕೂರುತ್ತಿದ್ದರು. ನಡುವೆ ಎಂದೂ ಆಕಳಿಸಿದ್ದಿಲ್ಲ, ಕೈಮುರಿದದ್ದಿಲ್ಲ, ಕಣ್ಣುಮುಚ್ಚಿದ್ದಿಲ್ಲ. ಪ್ರಾಯಶಃ ಅವರಷ್ಟು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದವರು ಮತ್ತೊಬ್ಬರಿರುತ್ತಿರಲಿಲ್ಲ. ಪ್ರತಿಯೊಂದು ಆಂಗ್ಲ ಪದಕ್ಕೂ ಹತ್ತಾರು ಅರ್ಥಗಳನ್ನು ಮೊದಲೇ ಬರೆದುಕೊಂಡು ಬರುತ್ತಿದ್ದರು, ಇಲ್ಲವೇ ಹರಳು ಹುರಿದಂತೆ ಸ್ಥಳದಲ್ಲಿ ನಾಲ್ಕಾರು ಪದಗಳನ್ನು ಎಸೆಯುತ್ತಿದ್ದರು. ಒಮ್ಮೊಮ್ಮೆ ರಂಗಣ್ಣನವರಂಥ ಪ್ರಕಾಂಡ ಪಂಡಿತರಿಗೂ ಸವಾಲಾಗುತ್ತಿದ್ದರು. ಯಾರಾದರೂ ಬೇಸರ ತೋರಿದರೆ ಒಂದೇ ಕ್ಷಣ ಹಾಸ್ಯದ ಚಟಾಕಿ ಎಸೆದು ಮುಂದೆ ಹೋಗೋಣ ಎನ್ನುತ್ತಿದ್ದರು. ತಾವೊಬ್ಬರು ಚುರುಕು ಬುದ್ಧಿಯವರೆಂಬ ಅಹಂಭಾವ

ಅವರ ಬಾಯಿಂದ ಎಂದೂ ಹೊರಬಿದ್ದದ್ದಿಲ್ಲ. ಅವರೊಂದಿಗೆ ಕೆಲಸಮಾಡುವುದೆಂದರೆ ಸಂತೋಷದ, ವಿದ್ಯಾರ್ಜನೆಯ, ಜ್ಞಾನೋಪಾಸನೆಯ ಹಬ್ಬವೇ ಸೈ.

೨೯-೪-೧೯೯೭ರಂದು ನಾನು ಮಡದಿಯೊಡನೆ ಉಡುಪಿಗೆ ಹೋಗಿದ್ದಾಗ, ಆ ದಿನ ಸಂಜೆ ಪ್ರೊ|| ಹೆರಂಜೆ ಕೃಷ್ಣಭಟ್ಟರ ಕೃಪೆಯಿಂದ ಕಾರಂತರನ್ನು ನೋಡಲೆಂದೇ ಸಾಲಿಗ್ರಾಮಕ್ಕೆ ಹೊರಟಿದ್ದೆ. ನಮ್ಮನ್ನು ಕಂಡುದೆ ತಡ ಆರಾಮ ಕುರ್ಚಿಯಲ್ಲಿ ಕುಳಿತಿದ್ದ, ಮನೆಯುಡುಪನ್ನು ಧರಿಸಿದ್ದ ಕಾರಂತರು ಜಗ್ಗನೆದ್ದು ಬಾಗಿಲಿಗೆ ಬಂದು 'ಬನ್ನಿ, ಬನ್ನಿ' ಎಂದು ಬಾಯ್ತುಂಬ ಕರೆದರು. ನಾವು ಒಳಗೆ ಕಾಲಿಡುವಷ್ಟರಲ್ಲಿ ಹಸಿತವದನದ ಮಾಲಿನಿಮಲ್ಯರೂ ಬಂದು ಹಾರ್ದಿಕವಾಗಿ ಸ್ವಾಗತಿಸಿದರು. 'ಯಾವಾಗ ಬಂದಿರಿ? ಎಲ್ಲಿ ಉಳಿದಿದ್ದೀರಿ? ನಿಮ್ಮ ಕಡೆ ಎಲ್ಲ ಕ್ಷೇಮತಾನೆ? ಬಾಯಾರಿಕೆಗೆ ಏನು ತೆಗೆದುಕೊಳ್ಳುತ್ತೀರಿ? ಬೊಂಡ ಆಗಬಹುದಲ್ಲವೆ?' ಎಂದು ತಡಬಡೆಯಿಲ್ಲದೆ ಮಾಲಿನಿಯವರ ಕಡೆಗೆ ನೋಡಿದರು. ಏನೂ ಬೇಕಿಲ್ಲ ಎಂದರೂ ಬಿಡಲಿಲ್ಲ. 'ವಿರಾಮವಾಗಿರುವಂತೆ ಕಾಣುತ್ತಿದೆಯಲ್ಲ' ಎಂದು ನಾನು ಮಾತು ತೆಗೆದೆ. 'ಕೈಕಾಲುಗಳಿಗೆ ವಿರಾಮವಾದರೂ ತಲೆಗೆ ವಿರಾಮವುಂಟೆ? ಎಂದವರು ಕೇಳಿದರು. 'ಊರ ಹೊರಗೆ ಹೋಗುವುದನ್ನು ತಪ್ಪಿಸಿದಂತೆ ಕಾಣುವುದಿಲ್ಲ' 'ಪ್ರವಾಸವೇ ನನಗೆ ಟಾನಿಕ್ಕು; ಅದರಿಂದ ನನಗೆ ಸ್ಫೂರ್ತಿ ಬರುತ್ತದೆ, ಅನುಭವ ಹೆಚ್ಚುತ್ತದೆ, ಆರೋಗ್ಯ ಕುದುರುತ್ತದೆ, ಉತ್ಸಾಹ ಉಕ್ಕುತ್ತದೆ.'

'ಈ ವಯಸ್ಸಿನಲ್ಲಿ ನಿಮ್ಮನ್ನು ನೋಡಿಕೊಳ್ಳಲು ಮಾಲಿನಿಯವರು ಸಿಕ್ಕಿದ್ದು ಚಲೋ ಆಯಿತು' ಎಂದು ನಾನು ಮಾತು ಮುಂದುವರಿಸಿದೆ. 'ನಾನೇನು ನೋಡ್ಕೊಳ್ತೀನೆ? ನಾನು ಕಚೇರಿಗೆ ಬೆಳಿಗ್ಗ ೯ ಗಂಟೆಗೆ ಹೋದರೆ, ಬರುವಾಗ ಸಂಜೆಯಾಗಿರುತ್ತದೆ. ಮುಂಜಾನೆ ಬೇಗ ಎದ್ದು ಅಡುಗೆ ಮಾಡಿ, ಇವರಿಗೂ ಇಟ್ಟು ನಾನೂ ಒಯ್ಯುತ್ತೇನೆ. ಥರ್ಮಪ್ಲಾಸ್ಕ್‌ನಲ್ಲಿ ಕಾಫಿಯನ್ನೂ, ಗಾಜಿನ ಪಾತ್ರೆಯಲ್ಲಿ ಹಣ್ಣಿನ ರಸವನ್ನು ಅಣಿ ಮಾಡಿಟ್ಟಿರುತ್ತೇನೆ. ರಾತ್ರಿ ಇವರು ತಿನ್ನುವುದೇ ಕಡಿಮೆ' ಎಂದು ಮಾಲಿನಿ ಉತ್ತರಿಸಿದರು.

'ನಿಮಗೆ ಅವರು, ಅವರಿಗೆ ನೀವು ದೊರೆಯಲಾಗಿ ಇಬ್ಬರೂ ಪುಣ್ಯವಂತರು. ಕಾರಂತರಂಥವರ ಸೇವೆಮಾಡುವ ಭಾಗ್ಯ ದೊರೆತದ್ದು ಅದೃಷ್ಟವೇ ಸರಿ. ಅದರಿಂದಾಗಿ ಮಾಲಿನಿಮಲ್ಯರು ಪುಣ್ಯವಂತೆ. ಮಾಲಿನಿಯವರಿಲ್ಲದಿದ್ದರೆ, ಕಾರಂತರ, ನಂತರ ಚೆದರಿ ಹೋಗಿದ್ದ ಅವರ ಸಾಹಿತ್ಯ ಹಾಳಾಗುತ್ತಿತ್ತು. ಶ್ರದ್ಧಾಭಕ್ತಿ ಶ್ರಮದಿಂದ ಅದನ್ನೆಲ್ಲ ಸಮಗ್ರವಾಗಿ ಅಶೇಷವಾಗಿ ಕಾಪಿಡುತ್ತಿದ್ದಾರೆ. ಅದು ಆನಂದದ ವಿಷಯವಾದರೂ ಶ್ರಮದಾಯಕಕಾರ್ಯ. ಕೂಲಿ ಕಂಬಳಕ್ಕೆ, ಸಂಬಳಕ್ಕೆ, ವ್ಯಾಪಾರಕ್ಕೆ ಮಾಡುವಂಥ

ಕೆಲಸವಲ್ಲ; ಪ್ರೀತಿಯಿಂದ, ಸಂತೋಷದಿಂದ, ಹೆಮ್ಮೆಯಿಂದ, ಸಮರ್ಪಣ ಭಾವದಿಂದ, ತ್ಯಾಗಮನೋಭಾವದಿಂದ, ಮಾಡತಕ್ಕ ಯಜ್ಞಕಾರ್ಯ. ಅದು ಬರಿಯ ಕತ್ತೆ ಕೆಲಸವೂ ಅಲ್ಲ, ಯಾಂತ್ರಿಕ ಕಾರ್ಯವೂ ಅಲ್ಲ; ಅಪಾರ ಬುದ್ಧಿಯನ್ನಪೇಕ್ಷಿಸುವ ಮಾಟ. ಕಾರಂತ ಕೃತಿಗಳ ಸಾರಸಂಗ್ರಹದ ಉಜ್ಜುಗ ಸಾಮಾನ್ಯವಾದದ್ದಲ್ಲ. ಆದ್ದರಿಂದಲೇ ಕಾರಂತರು ಅದೃಷ್ಟವಂತರೆಂದು ಹೇಳಿದ್ದು. ಅಂಥ ಶಿಷ್ಯೆ ಯಾವ ಸಾಹಿತಿಗೂ ದೊರೆತಂತೆ ನನಗೆ ನೆನಪಿಲ್ಲ. ನ್ಯಾಯವಾಗಿ ಯಾವುದಾದರೂ ವಿಶ್ವವಿದ್ಯಾನಿಲಯ ಅವರಿಗೆ ಗೌರವ ಡಾಕ್ಟೊರೇಟ್ ಪದವಿ ನೀಡಬಹುದು....' ನಾನಿನ್ನೂ ಮಾತು ಮುಗಿಸಿರಲಿಲ್ಲ. ಅಷ್ಟರಲ್ಲಿಯೇ ಕಾರಂತರು 'ಹೌದು, ಈಕೆ ಈ ಎಲ್ಲ ಕೆಲಸವನ್ನು ಮುಗಿಸುವ ಹೊತ್ತಿಗೆ ಡಾಕ್ಟರ್ ಬಳಿ ಹೋಗಬೇಕಾದೀತು' ಎಂದು ಹಾಸ್ಯಲಹರಿ ಹರಿಸಿದರು. ನಾವು ಮೇಲೆದ್ದು ಹೊರಡಲಣಿಯಾದೆವು. ಅವರು ನಮ್ಮೊಡನೆ ಬಂದು ಕಾರು ಹತ್ತಿಸಿ, ಕೈ ಕಣ್ಣುಗಳ ಭಂಗಿಯಲ್ಲಿ ಪ್ರೀತಿ ಸಭ್ಯತೆಯನ್ನು ಹೊರಹೊಮ್ಮಿಸಿ, ಕಾರು ಹೊರಡುತ್ತಲೆ ವಾಪಸಾದರು. ಅವರ ಸಂದರ್ಶನದ ಕಾಲವನ್ನು ಮೊದಲೇ ತಿಳಿಸಿ ಹೋದದ್ದಾದರೆ, ಆ ಸಮಯಕ್ಕೆ ಸರಿಯಾಗಿ ಆಹ್ವಾನಿಸಲು ಬಾಗಿಲಲ್ಲವರು ಕಾದಾರು! ಸೌಜನ್ಯದಲ್ಲಿ ಅವರು ಯಾರಿಗೂ ಕಡಮೆಯಿಲ್ಲ.

ಕಾರಂತರ ಸಾಧನೆ ಸಿದ್ಧಿಗಳ ವ್ಯಾಪ್ತಿ ವೈವಿಧ್ಯಗಳು ಅಪಾರ ಅಪೂರ್ವವೆಂದು ಹೇಳುವುದಾದರೆ ಅಪ್ಪಟ ದಿಟವನ್ನು ನುಡಿದಂತಾಗುತ್ತದೆಯೆ ಹೊರತು ಕ್ಲೀಷೆಯಾಗದು. ಮಹಾಪ್ರತಿಭಾಶಾಲಿಯೊಬ್ಬ ಹತ್ತು ಜನ್ಮಗಳಲ್ಲಿ ಮಾಡಬಹುದಾದ ಕೆಲಸವನ್ನು ಒಂದೇ ಜನ್ಮದಲ್ಲಿ ಮಾಡಿ ಪೂರೈಸಿದ್ದಾರೆ ಎಂದರೆ ಅತಿಶಯೋಕ್ತಿಯಾಗದು. ನಾಟಕವೆ, ಕಾದಂಬರಿಯೆ, ಕತೆಯೆ, ವಿಜ್ಞಾನವೆ, ಯಕ್ಷಗಾನವೆ, ವೈಚಾರಿಕತೆಯೆ, ಶಿಕ್ಷಣವೆ, ಪತ್ರಿಕೋದ್ಯಮವೆ, ನಿಘಂಟೇ, ಪ್ರವಾಸಕಥನವೆ, ಖಾದಿ ಪ್ರಚಾರವೆ, ಪರಿಸರ ರಕ್ಷಣೆಯೆ, ಭಾಷಣ ಕಲೆಯೆ—ಹೀಗೆ ನೆನೆಸಿಕೊಳ್ಳುತ್ತಿದ್ದರೆ ಅವರ ಕಾರ್ಯಕ್ಷೇತ್ರದ ಪಟ್ಟಿ ಉದ್ದವಾಗುತ್ತದೆ. ಎಲ್ಲ ವಿಧದಿಂದಲೂ ಅವರ ಬದುಕು ಪೂರ್ಣ. ಕಾಯಕವೇ ಪೂಜೆ ಎನ್ನುವುದಾದರೆ, ಅವರು ನಾಸ್ತಿಕರಲ್ಲ, ಕಟ್ಟಾಣಿಯ ಆಸ್ತಿಕರೆನ್ನಬೇಕಾಗುತ್ತದೆ. ಸತ್ಯಕ್ಕೆ ಧೈರ್ಯಕ್ಕೆ ಪ್ರಾಮಾಣಿಕತೆಗೆ, ಮಿಗಿಲಾಗಿ ಜ್ಞಾನಕ್ಕೆ ಪರ್ಯಾಯ ನಾಮ ಕಾರಂತರೆಂದೇ ಹೇಳಬಹುದು. ಮಾನವ ಏರಬಹುದಾದ ಎತ್ತರಕ್ಕೆ ಅವರೂ ಒಂದು ಆದರ್ಶ ಹಾಗೂ ನಿದರ್ಶನ!

ದೇಜಗೌ

ವಯಸ್ಕ ಶಿಕ್ಷಣ ತಜ್ಞ ದಿ|| ರಜತಾದ್ರಿಯವರು

ಎರಡು ದಶಕಗಳ ಹಿಂದಿನ ಮಾತು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ತನ್ನ ಸಾಧನೆ ಸಿದ್ಧಿಗಳಿಂದಾಗಿ ಪ್ರಯೋಗ ಸಂಶೋಧನಾದಿ ವಿವಿಧ ಚಟುವಟಿಕೆಗಳಿಂದಾಗಿ ದೇಶವಿದೇಶಗಳ ತಜ್ಞರ ಗಮನವನ್ನು ಸೆಳೆದಿತ್ತು. ಅಷ್ಟೇ ತೀವ್ರಗತಿಯಿಂದ ಅದು ಮುಂದುವರಿದಿದ್ದರೆ, ಅದು ರಾಷ್ಟ್ರೀಯ ಕೇಂದ್ರವಾಗಿ ಪರಿವರ್ತನೆಗೊಳ್ಳುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ. ಅದರ ಹಿಂದಿನ ವೈಭವವನ್ನೀಗ ನೆನೆಸಿಕೊಂಡದ್ದಾದರೆ, ಬೋಳಿ ತುರುಬನ್ನೂ, ತಬ್ಬಲಿ ತಾಯಿಯನ್ನೂ, ಮುಪ್ಪು ಯೌವನವನ್ನೂ ನೆನೆಸಿಕೊಂಡಂತಾಗುತ್ತದೆ. ದೇಶದ ಮುಂಚೂಣಿಯಲ್ಲಿದ್ದ ವಯಸ್ಕರ ಶಿಕ್ಷಣ ಹಳಿ ತಪ್ಪಿದ್ದಕ್ಕೆ ಕಾರಣ ಹಲವು. ಅವುಗಳ ಉಲ್ಲೇಖ ಇಲ್ಲಿ ಅಪ್ರಕೃತ. ಒಂದೇ ಒಂದು ಕಾರಣವನ್ನು ಕೊಡಬಹುದಾದರೆ, ಅದರ ಬಗೆಗಿನ ಸರ್ಕಾರ ದಿವ್ಯನಿರ್ಲಕ್ಷ್ಯವೆಂದೇ ಹೇಳಬಹುದಾಗಿದೆ.

ಅದಿರಲಿ, ಅಂದಿನ ಆ ಸಂಸ್ಥೆಯ ವೈಭವಪೂರ್ಣ ಮೆರವಣಿಗೆಗೆ ಆಗಿನ ನೇತಾರರು ಮತ್ತು ಕಾರ್ಯಕರ್ತರೇ ಕಾರಣರೆಂಬುದನ್ನು ಮರೆಯುವಂತಿಲ್ಲ. ಕಾಂಗ್ರೆಸ್ ಮೊದಲುಗೊಂಡು ಎಲ್ಲ ಸಂಸ್ಥೆಗಳ ಹಣೆಬರಹವೂ ಅಷ್ಟೇ. ಅವುಗಳ ಪ್ರಗತಿ ಯಾವನೋ ಒಬ್ಬ ತ್ಯಾಗಿಯ ಅಥವಾ ಮಹಾತ್ಮನ ತ್ಯಾಗ ತಪಸ್ಸುಗಳನ್ನವಲಂಬಿಸಿರುತ್ತದೆ. ಬಿ.ಎಂ.ಶ್ರೀ, ಬಾಲಕೃಷ್ಣಯ್ಯ, ಟಿ. ಮಾದಯ್ಯಗೌಡ, ಭದ್ರಯ್ಯಾದಿ ಅಧ್ಯಕ್ಷರಿಗೆ ಹಣ ಮುಖ್ಯವಾಗಿರಲಿಲ್ಲ, ಸೇವೆಯೊಂದೇ ಪ್ರಧಾನವಾಗಿತ್ತು. ದೇಶದ ಪ್ರಗತಿಗೆ, ಮೌಢ್ಯನಿವಾರಣೆಗೆ, ದಾರಿದ್ರ್ಯ ನಿರ್ಮೂಲನಕ್ಕೆ ಮೇಲಾಗಿ ಪ್ರಜಾಪ್ರಭುತ್ವದ ಯಶಸ್ಸಿಗೆ ನಿರಕ್ಷರತಾ ವಿನಾಶವೆ ಕಾರಣವೆಂದವರು ನಂಬಿದ್ದರು. ಅದಕ್ಕಾಗಿ ಅವರು ಉಚಿತ ಸೇವೆಯನ್ನು ಸಲ್ಲಿಸಿದರು. ಅಂತೆಯೇ ಕಾರ್ಯಕರ್ತರು ಅಲ್ಪ ಪ್ರತಿಫಲವನ್ನು ಪಡೆದು, ಅಹರ್ನಿಶಿ ತ್ರಿಕರಣಶುದ್ಧಿಯಾಗಿ ದುಡಿದು, ಆ ಸಂಸ್ಥೆಯ ಏಳಿಗೆಗೆ ಮತ್ತು ದಿಗಂತವ್ಯಾಪ್ತಿ ಕೀರ್ತಿಗೆ ಕಾರಣರಾದರು. ಅವರಲ್ಲಿ ಹಲವರು ವಯಸ್ಕ ಶಿಕ್ಷಣದ ತಾತ್ತ್ವಿಕ ವಿಚಾರಗಳ ನೆಲೆಬೆಲೆಗಳಲ್ಲಿ ಪಾರಂಗತರಾಗಿದ್ದರಲ್ಲದೆ, ಅದನ್ನು ಕುರಿತ ಪ್ರಯೋಗ ಸಂಶೋಧನೆಗಳಲ್ಲಿ ವಿಚಕ್ಷಣರಾಗಿದ್ದರು. ವಿದ್ಯಾಪೀಠಗಳನ್ನು ನಡೆಸುತ್ತ, ನಿರಕ್ಷರರೊಡನೆ ಒಡನಾಡುತ್ತ, ಸೂಕ್ಷ್ಮವೀಕ್ಷಣಾ ಸಾಮರ್ಥ್ಯದ ಮೂಲಕ ಅವರ ಸ್ಪಂದನ ಪ್ರತಿಸ್ಪಂದನ ಪ್ರತಿಕ್ರಿಯೆಗಳನ್ನರಿಯುತ್ತ, ಅವುಗಳ ಹಿನ್ನೆಲೆಯಲ್ಲಿ ಬೋಧನಾಕ್ರಮವನ್ನು ರೂಪಿಸಿಕೊಂಡು, ಪಠ್ಯಸಾಮಗ್ರಿಗಳನ್ನು ತಯಾರಿಸುತ್ತಿದ್ದರು. ಸೀಮೆಎಣ್ಣೆ ಲಾಂದ್ರದ ಮಂಕು ಬೆಳಕಿನಲ್ಲಿ ನಡೆಯುತ್ತಿದ್ದ ತರಗತಿಗಳೇ ಅವರಿಗೆ ಪ್ರಯೋಗಶಾಲೆಗಳಾಗಿದ್ದುವು.

ಹಾಗೆ ಅನುಗಾಲ ನಿಸ್ಪೃಹತೆಯಿಂದ ದುಡಿದು, ವಯಸ್ಕರ ಶಿಕ್ಷಣದ ತಳಹದಿಯನ್ನು ಭದ್ರಪಡಿಸಿ, ಅನೇಕ ಹಳ್ಳಿಗರಿಗೆ ವಿದ್ಯಾದಾನ ಮಾಡಿ, ಸಮಾಜಸೇವೆಯ ಆನಂದವನ್ನು ಪಡೆದವರಲ್ಲಿ, ನೇತಾರರನ್ನು ಹೊರತುಪಡಿಸಿದರೆ ನಾನು ಕಂಡಂತೆ ಇಬ್ಬರು ಮುಖ್ಯರು ವಯಸ್ಕರ ಶಿಕ್ಷಣ ಸಮಿತಿ ತನ್ನ ಪ್ರಾಗ್ರೂಪದಲ್ಲಿ ಬಳಕೆಗೆ ಬಂದಂದಿನಿಂದ ಅದರೊಡನೆ ನಿಕಟ ಸಂಬಂಧವನ್ನಿಟ್ಟುಕೊಂಡಿರುವುದರಿಂದ, ಅದರ ಬೆಳವಣಿಗೆಯನ್ನು ನೋಡಿರುವೆನಾದ್ದರಿಂದ ಧೈರ್ಯವಾಗಿ ನಾನು ಆ ಬಗ್ಗೆ ಮಾತಾಡಬಹುದಾಗಿದೆ. ಇಬ್ಬರು ಮುಖ್ಯರೆಂದರೆ, ಬೇರೆಯವರು ಅಮುಖ್ಯರೆಂದಲ್ಲ. ಜೀವನದ ಕೊನೆಯ ಕ್ಷಣಗಳ ತನಕ ವಯಸ್ಕರ ಶಿಕ್ಷಣದ ಬಗ್ಗೆ ಹುಚ್ಚು ಅಂಟಿಸಿಕೊಂಡವರು ಅವರಿಬ್ಬರು. ನಿವೃತ್ತರಾದ ನಂತರವೂ ಅವರ ನರನಾಡಿಗಳಲ್ಲಿ ಆ ಹುಚ್ಚುತನ ಹರಿಯುತ್ತಿತ್ತು, ಮಿಡಿಯುತ್ತಿತ್ತು. ಅದು ಅವರ ಕಾಯಕವಾಗಿತ್ತು. ನಿಂತಲ್ಲಿ ಕುಳಿತಲ್ಲಿ ಹೋದಲ್ಲಿ ಬಂದಲ್ಲಿ ಯಾವಾಗಲೂ ನಿರಕ್ಷರತಾ ಸಮಸ್ಯೆಯೇ ಅವರ ಮನಸ್ಸನ್ನು ಕಲಕುತ್ತಿತ್ತು; ಯಾರೇ ಎದುರಾಗಲಿ, ಅವರಿಗಿಷ್ಟವಿರಲಿ, ಇಲ್ಲದಿರಲಿ ಬೇಸರವಿಲ್ಲದೆ ಆ ವಿಷಯವನ್ನು ಕುರಿತು ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ಆ ಬಗ್ಗೆ ಲೇಖನಗಳನ್ನು ಗ್ರಂಥಗಳನ್ನು ಬರೆಯುತ್ತಿದ್ದರು. ಅದೇ ಅವರ ಬದುಕಾಗಿತ್ತು, ಜಗತ್ತಾಗಿತ್ತು; ಘಂಟಾಕರ್ಣನಂತೆ ಆ ಒಂದನ್ನೇ ಮನಸ್ಸಿನಲ್ಲಿ ತುಂಬಿಕೊಂಡಿರುತ್ತಿದ್ದರು. ಆ ಇಬ್ಬರಲ್ಲೊಬ್ಬರು ಟಿ. ಆರ್. ನಾಗಪ್ಪನವರು, ಮತ್ತೊಬ್ಬರು ಎಸ್. ರಜತಾದ್ರಿಯವರು. ಕೆಲವು ತಿಂಗಳ ಹಿಂದೆ ನಾಗಪ್ಪನವರು ಗತಿಸಿದರು. ಇದೇತಾನೆ ೧೨-೧೨-೯೭ ರಂದು ತಮ್ಮ ಎಪ್ಪತ್ತಾರನೆಯ ವಯಸ್ಸಿನಲ್ಲಿ ರಜತಾದ್ರಿಯವರು ತಮಗಿಲ್ಲಿ ಬೆಲೆ ಇಲ್ಲವೆಂದು, ನಿರಕ್ಷರರಿಗೆ ಗತಿಯಿಲ್ಲವೆಂದು ಕೈಲಾಸವನ್ನು ಸೇರಿದರು.

ನಿವೃತ್ತ್ಯಾನಂತರ ಸಂಸಾರದ ದಂದುಗದಲ್ಲಿ ಸಿಕ್ಕಿಕೊಂಡು ನರಳುವವರೆ, ಕೃಷಿ ವ್ಯಾಪಾರ ವಾಣಿಜ್ಯಾದಿ ಉದ್ಯೋಗಗಳಲ್ಲಿ ತೊಡಗಿಸಿಕೊಂಡು ಸ್ವಾರ್ಥವನ್ನು ಸಾಧಿಸುವವರೆ, ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುವ ಹಂಬಲವುಳ್ಳವರೆ, ಕ್ಲಬ್ಬು ಪಬ್ಬುಗಳಲ್ಲಿ ಕಾಲಯಾಪನೆ ಮಾಡುತ್ತ ಸೋಮಾರಿತನದಿಂದ ದೇಶಕ್ಕೆ ಮಾರಿಗಳಾಗಿರುವವರೆ ಹೆಚ್ಚು. ಇಸ್ಪೀಟಾಟ ಕುದುರೆಜೂಜು ಕಾಲಹರಟೆಗಳಲ್ಲಿ ಕಾಲನಿಗೆ ಸವಾಲಾಗಿ ಹುಚ್ಚರಂತೆ ವರ್ತಿಸುವವರೂ ಇದ್ದಾರೆ. ಬೆರಳೆಣಿಕೆಯ ಮಂದಿ ತೀರ್ಥಯಾತ್ರೆ ಪೂಜೆ ಧ್ಯಾನ ಪುರಾಣ ಪುಣ್ಯಕಥೆಗಳ ಶ್ರವಣದಲ್ಲಿ ತಲ್ಲೀನರಾಗಿದ್ದು ಯಮದೂತರ ಆಗಮನಕ್ಕಾಗಿ ಕಾಯಬಹುದು. ಕಾಲಹರಣ ಮಾಡದೆ ಉಸಿರಿರುವತನಕ ಜ್ಞಾನಾನುಭವಗಳ ಆರ್ಜನೆಯಲ್ಲಿ, ಅವುಗಳನ್ನು ದೇಶ ಸಮಾಜಗಳ ಒಳಿತಿಗಾಗಿ ಬಳಸುವಲ್ಲಿ ಸದಾ ತೊಡಗಿರಬೇಕೆಂಬುದೇ ಮಾನವಜನ್ಮದ ಘನೋದ್ದೇಶ.

ಶ್ರೀ ಎಸ್. ರಜತಾದ್ರಿ

೧೯೨೧ - ೧೯೯೭



ಶ್ರೀಯುತರ ಕೃತಿಗಳು:

(ಮುಂದಿನ ಪುಟದಲ್ಲಿ)

ಎಸ್. ರಜತಾದ್ರಿಯವರ ಕೃತಿಗಳು

೧. ಡೆನ್ಮಾರ್ಕ್ — ಪರಿಚಯ
೨. ನೈಟಿಂಗೇಲ್ ಮತ್ತು ಇತರ ಕಥೆಗಳು
೩. ಪಶ್ಚಿಮದ ಹೊಂಬೆಳಕು — (ಯೂರೋಪ್ ರಾಷ್ಟ್ರಗಳ ಪ್ರವಾಸ)
೪. ಅದೃಷ್ಟ ಶಿಲ್ಪ — (ಶೀಲ ನಿರ್ಮಿತಿ)
೫. ವಯಸ್ಕರ ಶಿಕ್ಷಣ ವಿಚಾರಧಾರೆ
೬. ಗಣಿತದಲ್ಲಿ ಮನರಂಜನೆ — (ನವ ಸಾಕ್ಷರರಿಗಾಗಿ)
೭. ರಾಜಾರಾಮ ಮೋಹನರಾಯ — (ಜೀವನ)
೮. ನಾವು ಮತ್ತು ನಮ್ಮ ಪರಿಸರ — (ಶಿಕ್ಷಣ)
೯. ನವಭಾರತ ನಿರ್ಮಾಪಕರು — (ಜೀವನ ಚರಿತ್ರೆ)
೧೦. ನಾಟಕ ಕಲೆ
೧೧. ಅಕ್ಷರ ವೈದ್ಯ — (ಪ್ರಚಾರ ನಾಟಕ)
೧೨. ಗ್ರುಂಟ್ವಿಗ್ ಮಹಾಶಯ — (ಜೀವನ ಮತ್ತು ತತ್ತ್ವ)
೧೩. ಭಾರತದಲ್ಲಿ ವಯಸ್ಕರ ಶಿಕ್ಷಣ
೧೪. ಕಲಿಯುವವರ ಮತ್ತು ಸಮುದಾಯ ಪ್ರೇರಣೆ — (ಸಾಕ್ಷರತೆ)
೧೫. ಅನುಭವತರಂಗ — (ಸ್ವಶಿಕ್ಷಣ)
೧೬. ಭಾವತರಂಗ — (ಸ್ವಶಿಕ್ಷಣ)
೧೭. ನಾವು ಭಾರತೀಯರು — (ನವಸಾಕ್ಷರರಿಗಾಗಿ)
೧೮. ಅಕ್ಷರ ಕ್ರಾಂತಿ — (ಪ್ರಚಾರ ನಾಟಕ)
೧೯. ನೆನಪಿನ ತೆರೆಗಳು — (ಅಚ್ಚಿನಲ್ಲಿ)
೨೦. ನವಕರ್ನಾಟಕ — (ಅಚ್ಚಿನಲ್ಲಿ)
೨೧. ಪಠ್ಯ ಪುಸ್ತಕ ರಚನೆ — (ಸಾಕ್ಷರತಾ ಸಾಹಿತ್ಯ)
೨೨. ರಾಗ ವಿರಾಗ —(ಕಾದಂಬರಿ)
೨೩. ಡೆನ್ಮಾರ್ಕ್ ಹಾಲು-ಜೇನಿನ ನಾಡು

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ
ಏವಂತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇನರೇ

ಎಂದು ಉಪನಿಷತ್ ಸಾರುತ್ತದೆ. ಮನುಷ್ಯ ಕೆಲಸ ಮಾಡುತ್ತ ನೂರುವರ್ಷ ಬದುಕ ಬೇಕೆಂಬುದು ಇದರ ತಾತ್ಪರ್ಯ.

ತೊರೆದಾತ್ಮೀಯ ಹಿತಂಗಳಂ ಪರಹಿತಂ ಮಾಳ್ಪಾತನೇ ಉತ್ತಮಂ
ನರರೊಳ್ಪಂ ಸ್ವಹಿತಂಗಳಂ ಬಿಡದೆ ತಾಮಾಳ್ಪಾತನೇ ಮಧ್ಯಮಂ
ನರರೊಳ್ ರಕ್ಕಸನಾತನನ್ಯಹಿತಮಂ ಪೊಯ್ವಂ ಸ್ವಕಾರ್ಯಾತುರಂ
ಬರಿದೇ ಲೋಕಹಿತಂಗಳಂ ಕಿಡಿಸುವಂಗೇನೆಂಬರೋ ತಿಳಿಯದೋ

ಎಂಬ ಭರ್ತೃಹರಿಯ ಶ್ಲೋಕವೂ ಮನುಷ್ಯನ ಜೀವಿತೋದ್ದೇಶವನ್ನು ಸೂಚಿಸುತ್ತದೆ. ರಜತಾದ್ರಿಯವರು ನಿವೃತ್ತರಾದ ನಂತರವೂ ಸ್ವಹಿತವನ್ನು ಮರೆತು, ಸಂಸಾರಕ್ಕೆ ತಿಲಾಂಜಲಿಯಿತ್ತು, ತಾವು ನಂಬಿದ ತತ್ತ್ವವನ್ನು ಆಚರಣೆಯಲ್ಲಿ ಮುಂದುವರಿಸುತ್ತ ಭರ್ತೃಹರಿಯ ಪ್ರಕಾರ ನರೋತ್ತಮರೆನಿಸಿಕೊಳ್ಳುತ್ತಾರೆ. ಸ್ವಕಾರ್ಯಧುರಂಧರರಲ್ಲದ, ಪರಹಿತರತರಾದ ಮಂದಿ ನಿವೃತ್ತರಲ್ಲಿ ತುಂಬ ಕಡಿಮೆ.

ರಜತಾದ್ರಿಯವರನ್ನು ನಾನು ಮೊದಲು ನೋಡಿದ್ದು ಶಿವಾರಗುಡ್ಡದ ವಿದ್ಯಾಪೀಠದಲ್ಲಿ. ಅವರಲ್ಲಿ ಆಚಾರ್ಯರಾಗಿದ್ದಾಗ ಮೇಲಿಂದ ಮೇಲೆ ಅಲ್ಲಿಯ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಲು ನನ್ನನ್ನು ಕರೆಸುತ್ತಿದ್ದರು. ಪಶುಪಾಲನೆಯಲ್ಲಿ, ಕೋಳಿ ಸಾಕಣೆಯಲ್ಲಿ, ಒಕ್ಕಲುತನದಲ್ಲಿ ಆ ವಿದ್ಯಾಪೀಠ ಸುತ್ತಮುತ್ತಣ ಹಳ್ಳಿಗಳಿಗೆ ಮಾತ್ರವಲ್ಲ, ಆಗಿನ ಇಡೀ ಮೈಸೂರಿಗೆ ಮಾದರಿಯಾಗಿತ್ತು. ಕಣ್ಣಿಗೆ ನಿದ್ದೆ ಬರುವತನಕ ಆ ಪೀಠದಲ್ಲಿ ಪ್ರತಿನಿತ್ಯ ಏನಾದರೂ ಕಾರ್ಯಕ್ರಮ ಇದ್ದೇ ಇರುತ್ತಿತ್ತು. ಸ್ವಾತಂತ್ರ್ಯ ಸಂಗ್ರಾಮದ ಅನುಭವವಿದ್ದ ಇಳಿಯ ಮುಳಿಯ ಖಾದಿಯನ್ನು ಧರಿಸುತ್ತಿದ್ದ ಅವರಿಗೆ ಗಾಂಧೀಜಿಯ ರಚನಾತ್ಮಕ ಕಾರ್ಯಗಳಲ್ಲಿ ಶ್ರದ್ಧೆಯಿದ್ದದ್ದರಿಂದ ವಿದ್ಯಾಪೀಠದ ಆಚಾರ್ಯ ಪದವಿ ಅವರಿಗೆ ಹೇಳಿ ಮಾಡಿಸಿದಂತಿತ್ತು. ಜಿಲ್ಲಾ ಕಾರ್ಯಕರ್ತರಾಗಿ, ಸಂಶೋಧನಾ ಸಹಾಯಕರಾಗಿ, ಸಂಪಾದಕರಾಗಿ, ವಯಸ್ಕರ ಶಿಕ್ಷಣದ ಎಲ್ಲ ಮಗ್ಗಲುಗಳನ್ನು ಅಮೂಲಾಗ್ರವಾಗಿ ತಿಳಿದುಕೊಂಡಿದ್ದರು.

ವಿದ್ಯಾಪೀಠಗಳಲ್ಲಿ ಗಳಿಸಿದ ಅನುಭವ ಅವರನ್ನು ಡೆನ್ಮಾರ್ಕ್, ಸ್ವೀಡನ್ ಮತ್ತು ಯೂರೋಪ್ ರಾಷ್ಟ್ರಗಳಿಗೆ ಕರೆದೊಯ್ಯುತ್ತದೆ. ಅಲ್ಲಿಯ ಜನತಾಶಾಲೆಗಳನ್ನು, ವಯಸ್ಕ ಶಿಕ್ಷಣ ಪದ್ಧತಿಯನ್ನು ಚೂಲಮೂಲವಾಗಿ ಅಧ್ಯಯನ ಮಾಡುತ್ತಾರೆ. ಅಲ್ಲಿ ತಾವು ಕಲಿತ ವಿದ್ಯೆಯಿಂದ ಗಳಿಸಿದ ಅನುಭವದಿಂದ ತಮ್ಮ ಜನ್ಮ ಸಾರ್ಥಕವಾಯಿತೆಂದು

ಉದ್ಗಾರ ತೆಗೆಯುತ್ತಾರೆ. ಇಂಡಿಯಾದಲ್ಲಿ ತಮ್ಮ ಭಾವನೆಗಳನ್ನು ಆಲೋಚನೆಗಳನ್ನು ಮಾರಲು ಅವರು ತಯಾರಾಗಿದ್ದರೂ ಕೊಳ್ಳುವವರು ಯಾರು ? ಸ್ವಸಂತೋಷಕ್ಕಾಗಿ ತಮ್ಮ ಅನುಭವಗಳನ್ನು ನೆರೆಯವರೊಡನೆ ಹಂಚಿಕೊಳ್ಳುವ ಸಲುವಾಗಿ ಡೆನ್ಮಾರ್ಕಿನ ಪರಿಚಯ, ಗ್ರುಂಟ್ವಿಗ್ ಮಹಾಶಯ (ಜೀವನ ಮತ್ತು ತತ್ವ), ಪಶ್ಚಿಮದ ಹೊಂಬೆಳಕು (ಯೂರೋಪ್ ರಾಷ್ಟ್ರಗಳ ಪ್ರವಾಸ), ಡೆನ್ಮಾರ್ಕ್–ಹಾಲು ಜೇನಿನ ನಾಡು–ಇವೇ ಮೊದಲಾದ ಗ್ರಂಥಗಳನ್ನು ಪ್ರಕಟಿಸುತ್ತಾರೆ. 'ಅಯ್ಯ ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು ; ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ' ಎನ್ನುವ ಮಹಾದೇವಿಯಕ್ಕನ ಪರಿಯೇ ಇವರ ಪರಿ.

ವಯಸ್ಕ ಶಿಕ್ಷಣ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದಾಗಿನಿಂದ ತಮ್ಮ ಅನುಭವಗಳು ಮತ್ತು ಪ್ರಯೋಗಗಳು ಗಾಳಿಯಲ್ಲಿ ತೂರಿಹೋಗಬಾರದೆಂದು, ಲಿಖಿತರೂಪದಲ್ಲಿ ಅವನ್ನು ಪ್ರಕಟಿಸುತ್ತಾರೆ. ಅವು ಸಾಮಾನ್ಯವಾಗಿ ವಯಸ್ಕರಿಗಾಗಿ ಹಾಗೂ ಸಾಕ್ಷರರಿಗಾಗಿ ಬರೆದುವಾದರೂ ಸಂಬಂಧಪಟ್ಟ ತಜ್ಞರೂ ಸಾಮಾನ್ಯರೂ ಅವನ್ನು ಓದಬಹುದಾಗಿದೆ. ನೈಟಿಂಗೇಲ್ ಮತ್ತು ಇತರ ಕಥೆಗಳು, ವಯಸ್ಕ ಶಿಕ್ಷಣ ವಿಚಾರಧಾರೆ, ಗಣಿತದಲ್ಲಿ ಮನರಂಜನೆ, ರಾಜಾರಾಮಮೋಹನರಾಯ, ನವಭಾರತ ನಿರ್ಮಾಪಕರು, ನಾವು ಮತ್ತು ಪರಿಸರ, ನಾಟಕ ಕಲೆ, ಅಕ್ಷರ ವೈದ್ಯ (ನಾಟಕ), ಅನುಭವತರಂಗ (ಸ್ವಶಿಕ್ಷಣ) ನಾವು ಭಾರತೀಯರು, ಅಕ್ಷರಕ್ರಾಂತಿ (ನಾಟಕ), ನವಕರ್ನಾಟಕ, ರಾಗವಿರಾಗ (ಕಾದಂಬರಿ) ವೇ ಮೊದಲಾದ ಇಪ್ಪತ್ತಮೂರು ಕೃತಿಗಳನ್ನು ರಚಿಸಿದ್ದಾರೆ. ಈ ಗ್ರಂಥಗಳ ಶೀರ್ಷಿಕೆಗಳಿಂದಲೇ ಅವರ ಮನೋಧರ್ಮ ಅಭಿರುಚಿ ಅನುಭವ ವೈವಿಧ್ಯವನ್ನು ಗ್ರಹಿಸಬಹುದಾಗಿದೆ. ಇವು ಮುಖ್ಯವಾಗಿ ವಯಸ್ಕ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಹಲವುಕಾಲ ಉಳಿಯುವ ಅಮೂಲ್ಯ ಕೊಡುಗೆಗಳು.

ನಿವೃತ್ತಾನಂತರ ಕಾನೂನು ಪದವೀಧರರಾಗಿ, ಕೆಲವು ಕಾಲ ಕೋರ್ಟುಗಳಿಗೂ ಹೋಗುತ್ತಿದ್ದುದುಂಟು. ಆದರೆ ವಯಸ್ಕ ಶಿಕ್ಷಣದ ಮಂದಗತಿಯನ್ನು ತೀವ್ರವಾಗಿ ಮನಸ್ಸಿಗೆ ತೆಗೆದುಕೊಂಡು, ಐದಾರು ವರ್ಷಗಳ ಹಿಂದೆ ಮೈಸೂರಿನಲ್ಲಿ ಇಂಡೋ–ಡ್ಯಾನಿಷ್ ಸಾಂಸ್ಕೃತಿಕ ಸಂಘವನ್ನು ರಚಿಸಿ, ನನ್ನನ್ನು ಅದರ ಅಧ್ಯಕ್ಷತೆಗೆ ಎಳೆದುಕೊಳ್ಳುತ್ತಾರೆ. ಜಾಗ್ರತ್ ಸ್ವಪ್ನಸುಷುಪ್ತ್ಯವಸ್ಥೆಗಳಲ್ಲೆಲ್ಲ ಅವರಿಗೆ ಅದರದೇ ತೊಳಲೆ, ತವಲು. ನಡೆದೋ, ಸೈಕಲ್ ಮೇಲೆಯೋ, ಬಸ್ಸುಗಳಲ್ಲಿಯೊ, ಬಲ್ಲವರ ಮನೆಗೆ ಹೋಗಿ ಏಕಾಕಿಯಾಗಿ ಸಂಘವನ್ನು ಸಂಘಟಿಸುತ್ತಾರೆ. ವಯಸ್ಕ ಶಿಕ್ಷಣ ತರಗತಿಗಳನ್ನು ಪ್ರಾರಂಭಿಸುತ್ತಾರೆ; ಡೆನ್ಮಾರ್ಕ್ ದೇಶಗಳೊಡನೆ ಪತ್ರವ್ಯವಹಾರ ನಡೆಸುತ್ತಾರೆ. ಅವರು ನಡೆಸುತ್ತಿದ್ದ ಶಾಲೆಗಳು ಕೇವಲ ಬೆರಳೆಣಿಕೆಯಷ್ಟಿರಬಹುದು. ಆದರೆ ಗುಣಮಟ್ಟದಲ್ಲಿ


ಸರ್ಕಾರ ನಡೆಸುವ ಶಾಲೆಗಳಿಗಿಂತ ಅವು ತೀರ ವಿಭಿನ್ನವಾದುವೆಂದು ಹೇಳಬೇಕಾಗಿದೆ. ಅದಕ್ಕೆ ಕಾರಣ ಆ ಶಿಕ್ಷಣದಲ್ಲಿ ಅವರಿಗಿದ್ದ ತಜ್ಞತೆ, ಪ್ರಾಮಾಣಿಕತೆ ಮತ್ತು ವಿಚಕ್ಷಣತೆ; ತಾವು ಮಾಡಿಕೊಂಡ ಸಂಕಲ್ಪವನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕೆಂಬ ಚಪಲ.

ನಾಡಿನ ದುರ್ದೈವವೆಂದರೆ, ಸರ್ಕಾರವಾಗಲಿ ಶಿಕ್ಷಣ ಸಂಸ್ಥೆಗಳಾಗಲಿ ಅಂಥ ತಜ್ಞರ ಪರಿಣತಿಯನ್ನು ಬಳಸಿಕೊಳ್ಳದಿದ್ದುದು. ಬಳಸಿಕೊಳ್ಳದಿದ್ದುದಕ್ಕೆ ತಮ್ಮ ಮಾತೇ ನಡೆಯಬೇಕೆಂಬ ಚಲ ಮತ್ತು ಅತಿರೇಕಗಳೇ ಕಾರಣವೆಂದು ಕೆಲವರು ಹೇಳುತ್ತಾರೆ. ನಿಜ, ಬುದ್ಧಿವಂತರಲ್ಲಿ ಅಂಥ ಅತಿರೇಕಗಳು ಸಹಜ. ಅಷ್ಟಕ್ಕೇ ಅವರನ್ನು ಮರೆತರೆ, ನಷ್ಟ ದೇಶಕ್ಕೆ, ಸಮಾಜಕ್ಕೆ ಹೊರತು ಅವರಿಗಲ್ಲ. ನಾನವರನ್ನು ತುಂಬ ಹತ್ತಿರದಿಂದ ಬಲ್ಲೆ. ಜನ ಹೇಳುವ ಯಾವ ಅತಿರೇಕವೂ ನನ್ನ ಗಮನಕ್ಕೆ ಬಂದಿಲ್ಲ. ಚಲ ಇದೆ, ನಿಜ. ಚಲವಿಲ್ಲದಿದ್ದರೆ ಯಾವ ಕೆಲಸವೂ ನಡೆಯುವುದಿಲ್ಲ. ಜೀವನದಲ್ಲಿ ಚಲವಿರಬೇಕೆಂದು ಬಸವಣ್ಣನವರೇ ಹೇಳುತ್ತಾರೆ. ಅವರು ವಿನಯವಂತರೂ ಅಹುದು, ಸಭ್ಯರೂ ಅಹುದು. ಅಪರ ವಯಸ್ಸಿನಲ್ಲಿಯೂ ತಾವು ನೆಚ್ಚಿದ ತತ್ತ್ವವನ್ನು ಅನುಷ್ಠಾನಕ್ಕೆ ತರಲು ತಮ್ಮ ಬಾಳಿನ ಏಕೈಕ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿ, ಆ ಯಜ್ಞಕಾರ್ಯದ ಮಧ್ಯದಲ್ಲಿಯೇ ಅವರು ತೀರಿಕೊಂಡದ್ದು ಅವರ ಬದುಕಿನ ಸಾರ್ಥಕತೆಯನ್ನು ಎತ್ತಿ ತೋರಿಸುತ್ತದೆ. ಸಮಾಜಸೇವಕರಿಗೆ, ಬುದ್ಧಿಜೀವಿಗಳಿಗೆ, ದೇಶಭಕ್ತರಿಗೆ, ಶಿಕ್ಷಣತಜ್ಞರಿಗೆ ಅವರ ಬದುಕು ಆದರ್ಶವಾಗಬೇಕಾಗಿದೆ.

ದೇಜಗೌ

ವಯಸ್ಕರ ಶಿಕ್ಷಣ ವಿಚಾರ

ಡಾ॥ ಕೆ. ಶಿವರಾಮ ಕಾರಂತ
ಸಾಲಿಗ್ರಾಮ, ಉಡುಪಿ ತಾಲ್ಲೂಕು



ಡಾ॥ ಶಿವರಾಮ ಕಾರಂತರ ಹುಚ್ಚು ಮನಸ್ಸಿನ ಹತ್ತು ಮುಖಗಳಲ್ಲಿ ವಯಸ್ಕ ಶಿಕ್ಷಣವೂ ಒಂದು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯೊಡನೆ ಕಾರಂತರ ಸಂಬಂಧ ಹಳೆಯದು. ಸಮಿತಿಗೆ ಆಗಾಗ ಮಾರ್ಗದರ್ಶನ ನೀಡಿ ನವಸಾಕ್ಷರರಿಗಾಗಿ ಹಲವು ಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಈ ಸಂಬಂಧವಾಗಿ 'ಪುಸ್ತಕ ಪ್ರಪಂಚ'ಕ್ಕೆ ಕೆಲವು ದಿನಗಳ ಹಿಂದೆ ಕಾರಂತರಿಂದ ಲೇಖನ ಒಂದನ್ನು ಕೋರಲಾಗಿತ್ತು. "ನಿಮ್ಮ ಕಾಗದ ಬಂದಿದೆ. ಲೇಖನ ಎರಡು ದಿನಗಳ ಒಳಗೆ ಕಳುಹಿಸುತ್ತೇನೆ." ಎಂದು ಸಾಲಿಗ್ರಾಮದಿಂದ ಕಾರಂತರ ಪತ್ರ ಬಂತು. ಇದರಂತೆ ಎರಡೇ ದಿನಗಳಲ್ಲಿ ಅವರ ವಯಸ್ಕರ ಶಿಕ್ಷಣ ವಿಚಾರ ಎಂಬ ಲೇಖನವೂ ತಲುಪಿತು. ಈ ಲೇಖನ ಪ್ರಕಟಿಸುವ ಮೂಲಕ ಡಾ॥ ಶಿವರಾಮ ಕಾರಂತರಿಗೆ ಪುಸ್ತಕ ಪ್ರಪಂಚ ನಮನ ಸಲ್ಲಿಸಿದೆ.

ಭಾಷೆಯನ್ನು ಕಲಿಯುವುದು ಹೇಗೆ— ಎಂದರೆ, ಕಿವಿಯಿಂದ ಕೇಳಿ, ಬಾಯಿಯಿಂದ ಆಡಿ, ತಿಳಿಸಿ, ಕೋಟಿಗಟ್ಟಲೆ ವರ್ಷಗಳಿಂದಲೂ ಯಾವತ್ತು ಜನ ಭಾಷೆ ಕಲಿತದ್ದೇ ಹಾಗೆ. ನಮ್ಮ ನೆನಪನ್ನು ಇರಿಸಿಕೊಂಬ ವಿಷಯ ಲಿಪಿ ಕಲಿಸಿ ಅಲ್ಲ. ಲಿಪಿ ಬರುವ ಸಾವಿರಾರು ವರ್ಷಗಳಿಂದ ಭಾಷೆಗಳು ಬೆಳೆದು ಬಂದಿದ್ದವು. ಲಿಪಿಗೆ ಸ್ವತಂತ್ರ

ಅರ್ಥ ಇಲ್ಲ. ಅರ್ಥ ಇರುವುದು ಶಬ್ದಗಳಿಗೆ. ಅವುಗಳ ಬಿಂಬ ಮನಸ್ಸಿನಲ್ಲಿ ಉಳಿದಾಗ.

ಕಲಿತ ಭಾಷೆ ಬಳಕೆಗೆ ಬರುವಂತಿದ್ದರೆ ಮಾತ್ರ ಕಲಿತ ಶಬ್ದಗಳಿಗೆ ಪ್ರಯೋಜನ ಬಂದೀತು. ಹಾಗಾಗಿ ಅಕ್ಷರ ಮೊದಲು ಕಲಿಸುವುದು ಸರಿ ಅಲ್ಲ. ಮಾತುಗಾರಿಕೆ ಬಂದ ಮೇಲೆ ಬರಹ-ಎಂಬುದು—ಲಿಪಿಯ ಗುರುತಲ್ಲ, ಭಾಷೆಯ ಮೂಲಕ ಪಡೆಯುವ ತಿಳುವಳಿಕೆ.

ಮೊದಲು-ಮಾತಾಡಲು ಕಲಿತಬಳಿಕವೇ, ಓದಲು ಕಲಿಸಬೇಕು. ಶಬ್ದ ಆಗಾಗ ಬಳಸುವ ಶಬ್ದವಾದರೆ, ಅದು ನೆನಪಿನಲ್ಲಿ ಉಳಿಯುತ್ತದೆ. ಇಲ್ಲದೆ ಹೋದರೆ, ಅದು ಮರೆತು ಹೋಗುತ್ತದೆ.

ಭಾಷೆ ಕಲಿತ ಮೇಲೆಯೂ ಅದನ್ನು ಉಪಯೋಗಿಸದೆ ಹೋದರೆ, ನೆನಪು ಉಳಿಯುವುದಿಲ್ಲ. ಹಾಗಾಗಿ ಶಬ್ದಗಳ ನೆನಪು ಮುಖ್ಯ. ಆ ನೆನಪು ಉಳಿಯಲು ಅವು ಆಗಾಗ ಉಪಯೋಗಕ್ಕೆ ಬರುವಂಥ ಪದಗಳೇ ಆಗಬೇಕು. ಲಿಪಿಯನ್ನು ಗುರುತಿಸಲು, ಶಬ್ದಗಳನ್ನು ಕಲಿಸಿದರೆ, ಅವುಗಳ ನೆನಪು ಆಗಾಗ ಬಾರದೆ ಹೋದೀತು.

ಹೀಗಾಗಿ ಕಲಿಕೆ ಸುಲಭವಾಗಲು— ಆಗಾಗ ಬರುವ ಸರಳ ಶಬ್ದಗಳನ್ನು ಬರೆದು ತೋರಿಸಬೇಕು! ಕಠಿಣ ಅಕ್ಷರಗಳನ್ನು, ಒತ್ತಕ್ಷರಗಳನ್ನು ಸಾಕಷ್ಟು ಓದು ಕಲಿತ ಬಳಿಕ, ಅಲ್ಲೊಂದು ಇಲ್ಲೊಂದು ಬಂದಾಗ-ಓದುಗರೇ — ಅದೇನೆಂದು, ಕೇಳುತ್ತಾರೆ. ನೀವು ಬರೆದು ತೋರಿಸಿ. ಝ, ಝ, ಙ—ಇಂಥ ಅಕ್ಷರಗಳು ಹೆಚ್ಚಿನ ಬಳಕೆಯವಲ್ಲ.

ಈ ದೃಷ್ಟಿಯಿಂದ ಒತ್ತಕ್ಷರ, ಮಹಾಪ್ರಾಣ ಅಕ್ಷರ 'ಝ, ಝೂ' ಅಕ್ಷರ ಸಾಕಷ್ಟು ಓದಲು ಬಂದ ಬಳಿಕ ಕಲಿಸಿದರೆ ಸಾಕು.

ಶಾಲೆಯಲ್ಲಿ ಆರೆಂಟನೇ ತರಗತಿ ಕಲಿತವರು ಸಹ–ಒಂದೆರಡು ವರ್ಷಗಳ ಬಳಿಕ, ಓದಲು ಎಡವುತ್ತಾರೆ, ಅವರು ಕಲಿತದ್ದನ್ನು ಮರೆತಿರುತ್ತಾರೆ. ಯಾಕೆ? ಕಲಿತುದರ ನೆನಪು ಉಳಿಯುವುದು–ಓದುತ್ತಿರುವಾಗ, ಮಾತಾಡುತ್ತಿರುವಾಗ—ಹಾಗಾಗಿ ಓದುವ ರೂಢಿ ಬೆಳೆಯಬೇಕು.

ಓದಬೇಕಾದರೆ–ಓದಲು ರುಚಿ ಇರುವ ವಿಷಯಬೇಕು! ಅದಿಲ್ಲದಾಗ ಯಾರೂ ಓದುವುದಿಲ್ಲ. ನಾವು ಎಲ್ಲಿಯ ತನಕ ರುಚಿ ಬರಿಸುವ ವಿಷಯಗಳಿರುವ ಬರವಣಿಗೆ ಅಥವಾ ಪುಸ್ತಕ ಒದಗಿಸುವುದಿಲ್ಲವೋ, ಅಲ್ಲಿಯ ತನಕ–ಓದಿನ ಪ್ರಯೋಜನ ಸಿಗಲಾರದು! ಕಲಿತ ಭಾಷೆ ಉಳಿಯಲು ಓದು ಬೇಕೇಬೇಕು.

ಅವರವರ, ಎಂದರೆ—ಓದುವ ಹಿರಿಯರ, ಕಿರಿಯರ, ಸ್ತ್ರೀಯರ—ಅಭಿರುಚಿಗಳನ್ನು ಬೆಳೆಯಿಸುವ ವಿಷಯಗಳಿರುವ ಪುಸ್ತಕಗಳು ಬೇಕು. ವಿಷಯಗಳನ್ನು ರುಚಿಯಾಗಿ ತಿಳಿಸುವವರು ಬೇಕು. ಅವಿಲ್ಲದೆ ಕಲಿಸಿದ ಓದು, ಓದಿದ ವಿಷಯ, ಕೊಟ್ಟ ಪುಸ್ತಕ ಸಾರ್ಥಕವಾಗಲಾರವು!

ಎಂಟನೇ ತರಗತಿ ಶಾಲೆಯಲ್ಲಿ ಓದಿ, ಹೊರ ಬಂದ ವ್ಯಕ್ತಿಗಳು—ಮುಂದೆ ಏನನ್ನೂ ಓದದೆ ಹೋದರೆ ಕಲಿತದ್ದನ್ನು ಮರೆಯುತ್ತಾರೆ.

ಓದಿನಲ್ಲಿ ಅಭಿರುಚಿ ಬೆಳೆಯಿಸುವ ದಾರಿ ಒಂದೇ. ಜನಕ್ಕೆ ಏನು ಕಲಿಸಿದರೆ ಒಳಿತು—

ಎಂದು ತನಗೆ ತೋರಿದ ಸಂಗತಿ ತಿಳಿಸುವುದಲ್ಲ. 'ಓದುವವನಿಗೆ ಏನುಬೇಕು' ಎಂದು ಅನಿಸುವ ಸಂಗತಿಗಳನ್ನು ಸರಳವಾಗಿ, ರುಚಿ ಹುಟ್ಟುವಂತೆ ತಿಳಿಸುವ ಶಿಕ್ಷಣ ಬೇಕು.

ಶಿಕ್ಷಣ ಸಾರ್ಥಕವಾಗಲು—ನೀವು ವ್ಯಯಿಸಿದ ಹಣ ಮುಖ್ಯವಲ್ಲ. ವಿಷಯಗಳನ್ನು ಕುರಿತು ತಿಳಿಯುವ ಅಭಿರುಚಿ ಬೆಳೆಯಿಸುವುದು ವಯಸ್ಕರ ಶಿಕ್ಷಣದ ಗುರಿ ಆಗಿರಬೇಕು.

ಬರಹ ಕಲಿಯುವುದು—ಬಂದ ಹಣಕ್ಕೆ ರಶೀದಿ ಕೊಡಲು ಇರುವುದಕ್ಕಲ್ಲ—ಬೇಕಾದ ತಿಳಿವನ್ನು ಒದಗಿಸುವುದು ಮುಖ್ಯ.

ಮನುಷ್ಯರ ಬುದ್ಧಿ, ಅಭಿರುಚಿ ಬೆಳೆಯ ಬೇಕಾದರೆ ಅಂಥ ವಿಷಯಗಳುಳ್ಳ ಪುಸ್ತಕ ಬೇಕು. ಜನರಿಗೆ ಸುಲಭವಾಗಿ ತಿಳಿಯುವ ಭಾಷೆಯಲ್ಲಿ ಅವನ್ನು ಬರೆಯಬೇಕು. ಕಠಿಣ ಶಬ್ದಗಳನ್ನು ತುಂಬಿಸಿದಲ್ಲಿ, ಅಲ್ಲಲ್ಲಿ ನಿಲ್ಲಿಸಿ, ಅರ್ಥ ಕೇಳುವಂತಾದರೆ ಹಿಂದೆ ಓದಿದ್ದು ಮುಂದೆ ಓದುವುದರೊಳಗೆ ಮರವೆ ಆಗುತ್ತದೆ!

ಡಾ|| ಶಿವರಾಮಕಾರಂತರನ್ನು ಕುರಿತು ಸದ್ಯದಲ್ಲೇ ಪುಸ್ತಕ ಪ್ರಪಂಚ ವಿಶೇಷ ಸಂಚಿಕೆಯೊಂದನ್ನು ಹೊರತರಲಿದ್ದು, ಈ ಬಗ್ಗೆ ಲೇಖನಗಳನ್ನು ಆಹ್ವಾನಿಸಿದೆ. ಲೇಖನವು ಗರಿಷ್ಠ ೮ ಪುಟಗಳ ಮಿತಿಯಲ್ಲಿರಬಹುದಾಗಿದ್ದು, ೯೮ರ ಜನವರಿ ಒಳಗೆ ಸಂಪಾದಕರಿಗೆ ತಲುಪುವಂತೆ ಲೇಖನ ಕಳುಹಿಸಿಕೊಡಲು ಕೋರಿದೆ. ಪ್ರಕಟಿತ ಲೇಖನಕ್ಕೆ ಸಂಭಾವನೆ ನೀಡುವ ಅವಕಾಶ ಕಲ್ಪಿಸಿಕೊಳ್ಳಲಾಗಿದೆ.

ಸಂ.

ಇಪ್ಪತ್ತನೇ ಶತಮಾನದಲ್ಲಿ ನಮ್ಮಲ್ಲಿ ಕಾರಂತರಷ್ಟು ದೊಡ್ಡ ವ್ಯಕ್ತಿ ಹುಟ್ಟಿಲ್ಲ, ಬೆಳೆದಿಲ್ಲ, ಸಾಧಿಸಿಲ್ಲ. ತಮ್ಮ ವೈಯಕ್ತಿಕ ಶಕ್ತಿಗಳನ್ನು ವಿಕಾಸಗೊಳಿಸಿಕೊಂಡು ಅದರ ಮೂಲಕ ನಿಜವಾದ ಸಮಾಜ ಸೇವೆ ಮಾಡಿದ್ದಾರೆ.

—ಗೋಪಾಲಕೃಷ್ಣ ಅಡಿಗ

ಪ್ರಳಯ ಮುಂತಾದ ಬೋಗಸ್ ಕುರಿತು

ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ', ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು–೫೭೦ ೦೦೯

ತಂತ್ರ ವಿದ್ಯೆಯ ಪ್ರಗತಿ, ಅನೈತಿಕ ಮಾರ್ಗದಿಂದ ಸಂಪತ್ತಿನ ಗಳಿಕೆ, ಸರಳ ಜೀವನ ಗಹನಚಿಂತನ ಎಂಬ ಸುಲಭ ವಿಧಾನವನ್ನು ವರ್ಜಿಸಿ ಭೋಗ ಜೀವನ ಶೂನ್ಯ ಚಿಂತನ ಎಂಬ ಕೃತಕ ಜೀವನ ವಿಧಾನಾವಲಂಬನೆ ಮುಂತಾದವು ಪರದೇಶ ಗಳಲ್ಲಿಯಂತೆ ಭಾರತದಲ್ಲಿಯೂ (ಏಡ್ಸ್?) ಪಿಡುಗಾಗಿ ಹಬ್ಬುತ್ತಿರುವ ಈ ದಿನಗಳಲ್ಲಿ ಫಲಜ್ಯೋತಿಷ್ಯರಿಗೆ(ಆಸ್ಟ್ರಾಲಜರ್ಸ್)ಸುಗ್ಗಿ ಕಾಲ. ಯಜ್ಞ ನಿರ್ವಾಹಕರಿಗೆ ಅಪಾರ ರಾಜಕೀಯ ಬೆಂಬಲ, ಪೀತ ಪತ್ರಿಕೆಗಳಿಗೆ ಜನರ ಸ್ಥೈರ್ಯ ಕುಗ್ಗಿಸುವ ರಾಗರಂಜಿತ ವಿಕೃತ ಚಿತ್ರಗಳನ್ನು ಪ್ರಕಟಿಸಿ ಲಾಭ ಗಿಟ್ಟಿಸಲು ವಿಪುಲ ಅವಕಾಶ, ಇತ್ಯಾದಿ, ಒದಗುತ್ತಿರುವುದನ್ನು ಎಲ್ಲ ಪ್ರಾಜ್ಞ, ಚಿಂತನಶೀಲರೂ ಮುಕ್ತ ಕಂಠದಿಂದ ಖಂಡಿಸಬೇಕಾದದ್ದು ಅನಿವಾರ್ಯವಾಗಿದೆ. ಫಲಜ್ಯೋತಿಷ್ಯ, ವಾಸ್ತು, ಪ್ರಳಯ, ರಾಹುಕಾಲ, ಭರಣೀಕೃತ್ತಿಕೆ ಇಂಥ ಎಲ್ಲ ವಾಮ ವಿದ್ಯೆಗಳನ್ನೂ ದೂರವಿಡುವುದು ಖುದ್ದು ನಮ್ಮ ಮನೋದೈಹಿಕಾರೋಗ್ಯದ ದೃಷ್ಟಿಯಿಂದ ಅಗತ್ಯ. ಮಾಧ್ಯಮಗಳವರಾದರೂ ಈ ವಿಚಾರದಲ್ಲಿ ಒಂದು ಬಗೆಯ ಅನೌಪಚಾರಿಕ ನೀತಿ ಸಂಹಿತೆಯನ್ನು ಪಾಲಿಸುವುದು ಶ್ರೇಯಸ್ಕರ.

ಫಲಜ್ಯೋತಿಷ್ಯ (ಆಸ್ಟ್ರಾಲಜಿ) ಎಲ್ಲ ಮೂಢನಂಬಿಕೆಗಳ ಮೂಲ. ಇದರ ಬಗ್ಗೆ ಪ್ರಪಂಚದ ೧೮೬ ಮಂದಿ ಪ್ರಸಿದ್ಧ ವಿಜ್ಞಾನಿಗಳು (ಇವರಲ್ಲಿ ಭಾರತ ಸಂಜಾತ ಎಸ್. ಚಂದ್ರಶೇಖರ್ ಅವರೂ ಸೇರಿದಂತೆ ೧೯ ಮಂದಿ ನೊಬೆಲ್ ಪ್ರಶಸ್ತಿ ವಿಜೇತರಿದ್ದಾರೆ) ಅಮೇರಿಕದ 'ದಿ ಹ್ಯೂಮನಿಸ್ಟ್' ಪತ್ರಿಕೆಯ೧೯೭೫ಸೆಪ್ಟೆಂಬರ್-ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಿಸಿರುವ ಲೇಖನ ಇಂದು ಹಿಂದೆಂದಿಗಿಂತಲೂ ಅಧಿಕ ಪ್ರಸ್ತುತವಾಗಿದೆ (ಅದರ ಅನುವಾದ):

"ಫಲಜ್ಯೋತಿಷ್ಯಕ್ಕೆ ಇಂದು ಪ್ರಪಂಚದ ಹೆಚ್ಚಿನ ಕಡೆಗಳಲ್ಲಿ ಅಧಿಕಾಧಿಕ ಪುರಸ್ಕಾರ ಲಭಿಸುತ್ತಿರುವುದು ಕಂಡು ವಿವಿಧ ಕ್ಷೇತ್ರಗಳಲ್ಲಿರುವ ವಿಜ್ಞಾನಿಗಳು ಆತಂಕಗೊಂಡಿದ್ದಾರೆ. ಫಲಜ್ಯೋತಿಷಿಗಳು ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ ನುಡಿಯುವ ಭವಿಷ್ಯವನ್ನೂ ನೀಡುವ ಸಲಹೆಯನ್ನೂ ಜನ ಪ್ರಶ್ನೆಗೆ ಒಳಪಡಿಸದೆ ಅಂಗೀಕರಿಸುವುದರ ವಿರುದ್ಧ ನಾವು—ಈ ಕೆಳಗೆ ರುಜು ಹಾಕಿರುವ ಖಗೋಳ ವಿಜ್ಞಾನಿಗಳು

ಖಭೌತ ವಿಜ್ಞಾನಿಗಳು ಹಾಗೂ ಇತರ ಕ್ಷೇತ್ರಗಳಲ್ಲಿಯ ವಿಜ್ಞಾನಿಗಳು—ಸಾರ್ವಜನಿಕರಿಗೆ ಎಚ್ಚರಿಕೆ ನೀಡಬಯಸುತ್ತೇವೆ. ಫಲಜ್ಯೋತಿಷ್ಯವನ್ನು ನಂಬಬೇಕೆಂದಿರುವವರು ಅದರ ಸಿದ್ಧಾಂತಗಳಿಗೆ ಯಾವುದೇ ವೈಜ್ಞಾನಿಕ ಆಡಿಪಾಯ ಇಲ್ಲವೆಂಬುದನ್ನು ಮನಗಾಣಬೇಕು.

"ಪ್ರಾಚೀನ ಕಾಲದಲ್ಲಿ ಜನ ಜಗತ್ತಿನ ಬಗ್ಗೆ ತಳೆದಿದ್ದ ನಿಗೂಢ ಐಂದ್ರಜಾಲಿಕ ಕಲ್ಪನೆಯ ಅವಿಭಾಜ್ಯ ಅಂಗವಾಗಿ ಫಲಜ್ಯೋತಿಷ್ಯವೂ ಇತ್ತು. ಎಂದೇ ಅಂದಿನವರು ಫಲಜ್ಯೋತಿಷಿಗಳು ನುಡಿದ ಭವಿಷ್ಯವಾಣಿಯನ್ನೂ ನೀಡಿದ ಸಲಹೆಯನ್ನೂ ನಂಬಿದರು. ಆಕಾಶ ಕಾಯಗಳು ದೇವತೆಗಳ ನೆಲೆವನೆಗಳು ಅಥವಾ ಅವು ದೇವತೆಗಳಿಂದ ಪ್ರಸರಿಸಲ್ಪಡುವ ಶಕುನಗಳು, ಮತ್ತು ಈ ಕಾರಣದಿಂದ, ಅವು ಭೂಮಿಯಲ್ಲಿಯ ಘಟನೆಗಳೊಡನೆ ನಿಕಟವಾಗಿ ಬೆಸುಗೆಗೊಂಡಿವೆ ಎಂದು ಭಾವಿಸಿದರು. ಭೂಮಿಯಿಂದ ಗ್ರಹಗಳಿಗೂ ನಕ್ಷತ್ರಗಳಿಗೂ ಇರುವ ಹಿರಿದೂರಗಳ ಅಂದಾಜು ಅವರಿಗಿರಲಿಲ್ಲ. ಈಗ ಆ ದೂರಗಳನ್ನು ಗಣಿಸಬಹುದು, ಗಣಿಸಲಾಗಿದೆ ಕೂಡ. ಆದ್ದರಿಂದ ದೂರ ದೂರದ ಗ್ರಹಗಳೂ ಇವುಗಳಿಂದ ಅವೆಷ್ಟೋ ಅಧಿಕ ದೂರಗಳಲ್ಲಿ ಹರಡಿಹೋಗಿರುವ ನಕ್ಷತ್ರಗಳು, ಭೂಮಿಯಲ್ಲಿ ಉತ್ಪಾದಿಸುವ ಗುರುತ್ವಾಕರ್ಷಣೀಯ ಮತ್ತು ಇತರ ಪರಿಣಾಮಗಳು ಎಷ್ಟು ಅನಂತಾಲ್ಪವೆಂಬುದನ್ನು ಈಗ ಅರಿಯಬಲ್ಲೆವು. ಜನನಕ್ಷಣದಲ್ಲಿ ನಕ್ಷತ್ರಗಳು ಮತ್ತು ಗ್ರಹಗಳು ನಮ್ಮ ಮೇಲೆ ಬೀರುವ ಬಲಗಳು ಯಾವುದೇ ರೀತಿಯಲ್ಲಿ ನಮ್ಮ ಭವಿಷ್ಯವನ್ನು ರೂಪಿಸಬಲ್ಲವೆಂದು ಊಹಿಸುವುದು ಕೂಡ ಶುದ್ಧಾಂಗ ಅವಿವೇಕ. ದೂರದ ಆಕಾಶಕಾಯಗಳ ಸ್ಥಾನ, ಕೆಲವು ದಿವಸಗಳನ್ನು ಇಲ್ಲವೇ ಅವಧಿಗಳನ್ನು ವಿಶಿಷ್ಟ ಕೆಲಸಗಳಿಗೆ ಅಧಿಕ ಪ್ರಶಸ್ತವಾಗಿ ಮಾಡುವುದೆಂಬುದಾಗಲೀ ಒಬ್ಬ ವ್ಯಕ್ತಿಯ ಜನನನಕ್ಷತ್ರ ಆತ ಇತರರೊಂದಿಗೆ ಹೊಂದುವುದನ್ನು ಅಥವಾ ಹೊಂದದಿರುವುದನ್ನು ನಿರ್ಧರಿಸುವುದೆಂಬುದಾಗಲೀ ಖಂಡಿತ ನಿಜವಲ್ಲ.

"ಫಲಜ್ಯೋತಿಷ್ಯವನ್ನು ಜನ ಏಕೆ ನಂಬುತ್ತಾರೆ? ಇಂದಿನ ಅನಿಶ್ಚಿತ ಸನ್ನಿವೇಶಗಳಲ್ಲಿ ಯುಕ್ತ ನಿರ್ಧಾರ ತಳೆಯಲು ಯೋಗ್ಯ ಮಾರ್ಗದರ್ಶನ ಲಾಭ ಅಗತ್ಯವೆಂಬುದು ಬಹುಮಂದಿಯ ಆಶಯ. ತಮ್ಮ ನಿಯಂತ್ರಣಕ್ಕೆ ಅಧೀನವಾಗಿರುವ ನಾಕ್ಷತ್ರಿಕ ಬಲಗಳಿಂದ ಪೂರ್ವನಿರ್ಧಾರಿತವಾಗಿರುವ ಅದೃಷ್ಟದಲ್ಲಿ ಭರವಸೆ ಇಡುವುದು ಅವರ ಅಪೇಕ್ಷೆ. ಪ್ರತಿಯೊಬ್ಬನೂ ಪ್ರಪಂಚವನ್ನು ಎದುರಿಸಲೇಬೇಕು; ಪ್ರತಿಯೊಬ್ಬನ ಭವಿಷ್ಯವೂ ಅವನ ಕೈಯಲ್ಲಿದೆ. ಈ ಸಂಗತಿಗಳನ್ನು ಎಲ್ಲರೂ ತಿಳಿದಿರುವುದು ಅತ್ಯಗತ್ಯ.

"ವರ್ತಮಾನ ದಿನಗಳಲ್ಲಿ ಜ್ಞಾನ ಮತ್ತು ವಿದ್ಯೆ ವ್ಯಾಪಕವಾಗಿ ಪಸರಿಸಿದೆ ಅಂದಮೇಲೆ ಇಂದ್ರಜಾಲ ಮತ್ತು ಮೂಢ ಭಾವನೆಗಳ ಮೇಲೆ ನಿಂತಿರುವ ನಂಬಿಕೆಗಳ ಪೊಳ್ಳುತನವನ್ನು ಎತ್ತಿ ತೋರಿಸುವ ಅಗತ್ಯ ಏನಿದೆ ಎಂದು ಒಬ್ಬ ಕೇಳಬಹುದು. ಆದರೆ ನಿಜಸ್ಥಿತಿ ಹೀಗಿಲ್ಲ: ಫಲಜ್ಯೋತಿಷ್ಯ ಆಧುನಿಕ ಸಮಾಜದಲ್ಲಿ ವ್ಯಾಪಕ ಪ್ರಸಾರ ಪಡೆದಿದೆ. ಸಮೂಹ ಮಾಧ್ಯಮಗಳು, ಮತ್ತು ಅನ್ಯತ್ರ, ವಿಶ್ವಾಸಾರ್ಹ ದೈನಿಕಗಳು, ಸಾಪ್ತಾಹಿಕಗಳು ಹಾಗೂ ಪುಸ್ತಕ

ಪ್ರಕಾಶನಗಳು ಫಲಜ್ಯೋತಿಷಿಗಳು ಒದಗಿಸುವ ಯಾದಿ, ಭವಿಷ್ಯವಾಣಿ ಮತ್ತು ಜಾತಕಗಳನ್ನು ಯಾವುದೇ ತೆರನಾದ ವಿಮರ್ಶೆಗೆ ಒಳಪಡಿಸದೆ ಸಂತತವಾಗಿ ಪ್ರಕಟಿಸುತ್ತಿರುವುದು ಕಂಡು ನಮಗೆ ವಿಶೇಷ ಚಿಂತೆ ಆಗಿದೆ. ಇದರ ದುಷ್ಪ ಉಪೋತ್ಪನ್ನವಾಗಿ ವಿಚಾರಹೀನತೆ ಮತ್ತು ಅಂಧಶ್ರದ್ಧೆ ಪ್ರಬಲಿಸುವುದು ಖಾತ್ರಿ. ಫಲಜ್ಯೋತಿಷಿಗಳೆಂಬ ಡೋಂಗಿ ಮಂದಿಯ ಡೌಲು ಅಬ್ಬರವನ್ನು ನೇರವಾಗಿಯೂ ಶಕ್ತಿಯುತವಾಗಿಯೂ ವಿರೋಧಿಸಲು ಕಾಲ ಮಾಗಿದೆಯೆಂದು ಭಾವಿಸಿದ್ದೇವೆ.

"ಫಲಜ್ಯೋತಿಷ್ಯದಲ್ಲಿ ಈಗಲೂ ವಿಶ್ವಾಸವಿರುವ ಜನರಿಗೆ ಒಂದು ಸಂಗತಿ ಮನವರಿಕೆ ಮಾಡಿಕೊಡಬೇಕು: ಅವರ ನಂಬಿಕೆಗಳಿಗೆ ಆಧಾರವಾಗಿ, ತಪಾಸಣೆಗೆ ಒಳಪಡಿಸಿದ, ಯಾವುದೇ ವೈಜಾನಿಕ ಸಾಕ್ಷ್ಯವಿಲ್ಲ; ನಿಜಕ್ಕೂ ಪ್ರಬಲ ವ್ಯತಿರಿಕ್ತ ಪುರಾವೆವುಂಟು."

ಡಿವಿಜಿಯವರ ವಚನ ಮನನೀಯವಾಗಿದೆ:

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ?
ವಿಹಿತವಾಗಿಹುದದರ ಗತಿ ಸೃಷ್ಟಿವಿಧಿಯಿಂ
ಸಹಿಸದಲ್ಲದೆ ಮುಗಿಯದಾವದಕೆ ಬಂದೊಡಂ
ಸಹನೆವಜ್ರದ ಕವಚ ಮಂಕುತಿಮ್ಮ
ಗ್ರಹಗತಿಯ ತಿದ್ದುವನು ವೀರಪುರುಷೋತ್ತಮನು
ಗ್ರಹಗತಿಗೆ ಶರಣಾಗಿ ಮಸಳುವನು ಹೆಂಬೇಡಿ
ಸಹನೆ ಧೈರ್ಯದಮೇಲೆ ನಿಂತಿರಲು ಜೀವನವು
ಸಹ್ಯವಾಗುವುದು ಕಣಾ ಅತ್ರಿಸೂನು
ವಾಸ್ತವದ ನೈಜತೆಗೆ ಕುರುಡಾದ ಮೂರ್ಖರಿಗೆ
ಉತ್ತರ ಕುಮಾರಗೋತ್ರದ ನುಡಿಗನಸಿಗರಿಗೆ
ಸತ್ಯವನ್ನೆದುರಿಸುವ ಕೆಚ್ಚರದ ಹೇಡಿಗಳಿ
ಗುತ್ತಮ ಶ್ರೀರಕ್ಷೆ ಜಾತಕವೂ ಅತ್ರಿಸೂನು



ಮೇಷ ಮೊದಲೋ? ಮೀನ ಮೊದಲೋ?

ಡಾ|| ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ
ಟಿ. ಚೌಡಯ್ಯ ರಸ್ತೆ
ಬೆಂಗಳೂರು-೫೬೦ ೦೦೧

ಖಭೌತ ವಿಜ್ಞಾನದಲ್ಲಿ ಡಾಕ್ಟೊರೇಟ್ ಪದವೀಧರೆ. ಬೆಂಗಳೂರಿನ ನೆಹರು ತಾರಾಲಯದಲ್ಲಿ ವಿಜ್ಞಾನಿ. ಚಿಕ್ಕಂದಿನಿಂದಲೂ 'ಪುಸ್ತಕ ಪ್ರಪಂಚ'ದ ಬಗ್ಗೆ ಅಭಿಮಾನ. ಇಂಥ ಹಲವು ಲೇಖನಗಳನ್ನು ಬರೆದುಕೊಡಲು ಒಪ್ಪಿದ್ದಾರೆ.

ಮೇಷ, ವೃಷಭ, ಮಿಥುನ....ಈ ಹೆಸರುಗಳು ಸುಪರಿಚಿತ. ನಕ್ಷತ್ರಗಳನ್ನು ಕೆಲವು ಗುಂಪುಗಳನ್ನಾಗಿ ವಿಂಗಡಿಸಿ, ಅವುಗಳಲ್ಲೊಂದು ಆಕಾರವನ್ನು ಕಲ್ಪಿಸಿ ಇಟ್ಟ ಹೆಸರುಗಳು ಇವು. ಅನೇಕ ಶತಮಾನಗಳಿಂದ ಚಾಲ್ತಿಯಲ್ಲಿವೆ. ಗಾದೆಗಳಲ್ಲಿಯೂ ಅಡಕವಾಗಿವೆ. ಇದನ್ನು ಗಮನಿಸಿದಾಗ ಈ ಹೆಸರುಗಳನ್ನು ಏಕೆ ಇಟ್ಟರು? ಯಾರು ಇಟ್ಟರು? ಎಂಬ ಪ್ರಶ್ನೆ ಏಳುವುದು ಸಹಜ. ಆಕಾಶದಲ್ಲಿ ಈ ನಕ್ಷತ್ರಪುಂಜಗಳನ್ನು ಗುರುತಿಸಬಲ್ಲವರಿಗೆ ಇನ್ನೂ ಒಂದು ಸಮಸ್ಯೆ—ಮೂರು ನಕ್ಷತ್ರಗಳ ತ್ರಿಕೋನವೊಂದನ್ನು ಟಗರು ಎಂದು ಹೇಗೆ ಕಲ್ಪಿಸಿಕೊಂಡರು? ನಾಲ್ಕು ನಕ್ಷತ್ರಗಳ ಆಯತಾಕಾರ ಜೋಡಿ ಎಂದು ಹೇಗೆ ಕಂಡಿತು? ಮಿಥುನ ಎಂಬ ಹೆಸರೇಕೆ ಬಂದಿತು?

ಈ ಸಮಸ್ಯೆಗಳು ಇತಿಹಾಸಕಾರರನ್ನು ಕಾಡದೇ ಇಲ್ಲ. ಈ ದಿಸೆಯಲ್ಲಿ ಅನೇಕ ಸಂಶೋಧನಾತ್ಮಕ ಪ್ರಬಂಧಗಳು, ಪುಸ್ತಕಗಳು ಪ್ರಕಟವಾಗಿವೆ, ಈಗಲೂ ಆಗುತ್ತಿವೆ. ವಿಶ್ವದ ಎಲ್ಲ ಸಂಸ್ಕೃತಿ, ನಾಗರೀಕತೆಗಳಲ್ಲೂ ಈ ಬಗೆಯ ನಕ್ಷತ್ರಪುಂಜಗಳ ವರ್ಗೀಕರಣ ಮಾತ್ರವಲ್ಲದೇ ಅದರಲ್ಲಿ ಸಾಮ್ಯವೂ ಕಂಡುಬಂದಿರುವುದೊಂದು ವಿಶೇಷ.

ಅತಿಸುಲಭವಾಗಿ ಗುರುತಿಸಬಹುದಾದ ಉತ್ತರದಿಕ್ಕಿನ ಏಳು ನಕ್ಷತ್ರಗಳನ್ನೇ ತೆಗೆದುಕೊಳ್ಳಿ. ಭಾರತದಲ್ಲಿ ಇದು ಸಪ್ತರ್ಷಿ ಮಂಡಲ; ಐರೋಪ್ಯರಲ್ಲಿ ದೊಡ್ಡಕರಡಿ (ಸಣ್ಣ ಕರಡಿ ಎಂಬ ಬೇರೆ ಒಂದು ನಕ್ಷತ್ರಪುಂಜವೂ ಇದೆ); ಚೀನೀಯರಲ್ಲಿ ಚಹಾ ಕಾಯಿಸುವ ಪಾತ್ರೆ; ಕರ್ನಾಟಕದ ಕೆಲವು ಪ್ರಾಂತಗಳಲ್ಲಿ "ಅಜ್ಜಿಯ ಮಂಚ" ಆಗಿದೆ.

ಈ ನಕ್ಷತ್ರಪುಂಜಕ್ಕೆ ಕರಡಿಯ ಹೆಸರು ಏಕೆ ಬಂದಿರಬಹುದು? ಈ ಬಗ್ಗೆ ಐರೋಪ್ಯ ಅನ್ವೇಷಕರು ಉತ್ತರ ಅರಸಲು ಹೊರಟಾಗ, ಎಂದಿನಿಂದ ಈ ಹೆಸರು ಪ್ರಚಾರದಲ್ಲಿದೆ ಎಂಬ ಪ್ರಶ್ನೆಗೂ ಉತ್ತರ ದೊರಕಿತು. ಹಾರ್ವರ್ಡ್ ವಿಶ್ವವಿದ್ಯಾಲಯದ ಗಿಂಗ್‌ರಿಷ್ ಅವರ ಪ್ರಕಾರ ಈ ನಾಮಕರಣ ಕನಿಷ್ಠ ಹದಿನೈದುಸಾವಿರ

ವರ್ಷಗಳಷ್ಟು ಹಿಂದಿನದು. ಸೈಬೀರಿಯ ಮತ್ತು ಅಲಾಸ್ಕಗಳು ಹಿಮಯುಗದ ಮುಕ್ತಾಯದಲ್ಲೇ ಈ ಹೆಸರುಗಳನ್ನು ಬಳಸುತ್ತಿದ್ದ ಕಾರಣ ಈ ಸಂಖ್ಯೆಯನ್ನು ಖಚಿತವಾಗಿ ಹೇಳಬಹುದಾಗಿದೆ.

ಜೀವವಿಜ್ಞಾನಿಗಳ ಪ್ರಕಾರ ಕರಡಿ ಐವತ್ತುಸಾವಿರ ವರ್ಷಗಳಿಗೂ ಹಿಂದಿನಿಂದ ಮಾನವನ ಒಡನಾಡಿಯಾಗಿದೆ. ಗುಹೆಗಳಲ್ಲಿ ಮಾನವ ವಾಸಿಸುತ್ತಿದ್ದಾಗ ಇದು (ಈಗ ನಾಯಿಯಂತೆ) ಮಾನವನಿಗೆ ಉಪಕಾರಿಯಾಗಿದ್ದಿರಬಹುದು. ಹಾಗಾಗಿ ಇದಕ್ಕೆ ದೈವಿಕ ಮನ್ನಣೆ ಸಂದು ಆಕಾಶದಲ್ಲೊಂದು ಸ್ಥಾನದಕ್ಕಿರಬಹುದು—ಇದು ಒಂದು ಕಲ್ಪನೆ. ದೈವಿಕ ಪ್ರಾಣಿ, ಪಕ್ಷಿಗಳಿಗೆ ಗುಣವಾಚಕವಾದ ಹೆಸರನ್ನಿಡುವ ಪದ್ಧತಿ ಕೆಲವು ಜನಾಂಗಗಳಲ್ಲಿವೆ. ಉದಾಹರಣೆಗೆ ರಷಿಯನ್ ಭಾಷೆಯಲ್ಲಿ ಮೇದೀವ್ (ಇದು ಕರಡಿಯ ಹೆಸರು) ಎಂದರೆ ಜೇನು ತಿನ್ನುವ ಪ್ರಾಣಿ ಎಂದರ್ಥ.

ನಕ್ಷತ್ರಪುಂಜಗಳ ಹೆಸರುಗಳ ಜಾಡು ಹಿಡಿದು ಹೊರಟ ರಷಿಯಾದ ವಿಜ್ಞಾನಿ ಗುಪ್ಪೈರ್ನ್ ಏಳು ನಕ್ಷತ್ರಗಳ ವೈಶಿಷ್ಟ್ಯವನ್ನು ಉಲ್ಲೇಖಿಸಿದ್ದಾರೆ. ಖಗೋಳ ವೈಜ್ಞಾನಿಕ ಕಾಲಗಣನೆಯಲ್ಲಿ ವಾರಕ್ಕೆ ಮಹತ್ವವಿಲ್ಲ. ಆದರೆ ವಾರದಗಣನೆ ಬೆಳೆದು ಬಂದದ್ದು ಏಳು "ಗ್ರಹ"ಗಳ ಕಾರಣ ಎಂಬುದೊಂದು ಸಿದ್ಧಾಂತ (ಸೂರ್ಯ, ಚಂದ್ರ ಮತ್ತು ಬರಿಗಣ್ಣಿಗೆ ಕಾಣುವ ಬುಧ, ಶುಕ್ರ, ಮಂಗಳ, ಗುರು ಮತ್ತು ಶನಿ—ಈ ಎಲ್ಲವೂ ಸೇರಿ ಏಳು "ಗ್ರಹ"ಗಳು) ರಷಿಯಾದ ಕೆಲವು ಪ್ರಾಂತಗಳಲ್ಲಿ ಸುಮಾರು ೩೦,೦೦೦ ವರ್ಷಗಳಷ್ಟು ಹಿಂದೆಯೇ "ವಾರ" ಎಂಬ ಕಾಲಗಣನೆ ಬಳಕೆಯಲ್ಲಿತ್ತು. ಇದು ಚಾಂದ್ರಮಾಸದ ನಾಲ್ಕನೇ ಒಂದು ಭಾಗ. ಇದರಲ್ಲಿ ಏಳು ದಿನಗಳಿರುವುದರಿಂದ ಏಳು ಎಂಬ ಸಂಖ್ಯೆಗೆ ವಿಶೇಷ ಮಹತ್ತ್ವ ಸಿಕ್ಕಿತು. ಕರಡಿ—ನಕ್ಷತ್ರಪುಂಜದಲ್ಲಿ ಏಳು ಪ್ರಕಾಶಮಾನ ನಕ್ಷತ್ರಗಳಿವೆ. ಹಾಗಾಗಿ ನಕ್ಷತ್ರಗಳನ್ನು ಪುಂಜಗಳನ್ನಾಗಿ ವರ್ಗೀಕರಿಸುವಾಗ ಏಳು ಎಂಬ ಸಂಖ್ಯೆ ಬಹು ಮುಖ್ಯಪಾತ್ರ ವಹಿಸಿತು. ಏಳು ನಕ್ಷತ್ರಗಳ ಒಂದು ಚೌಕಟ್ಟು ಪುಂಜದ ವಿಸ್ತಾರವಾಯಿತು. ಹಾಗಾಗಿ ಕೆಲವು ನಕ್ಷತ್ರಪುಂಜಗಳು ದೊಡ್ಡವಾದರೆ ಕೆಲವು ಸಣ್ಣವಾದವು.

ನಕ್ಷತ್ರಪುಂಜಗಳ ಹೆಸರುಗಳು ಮುಖ್ಯವಾಗಿ ಮೂರು ಬಗೆಯವು. ಕಾಲ್ಪನಿಕ ಪ್ರಾಣಿಗಳು, ಜಲಜೀವಿಗಳದು ಒಂದು ವರ್ಗ. ಮಾನವರು ಮತ್ತು ಭೂಚರ ಪ್ರಾಣಿಗಳದು ಇನ್ನೊಂದು ವರ್ಗ. ಹಾರುವ ಜೀವಿಗಳದ್ದು ಮೂರನೆಯವರ್ಗ. ರಾಶಿಚಕ್ರದ ಹನ್ನೆರಡು ರಾಶಿಗಳಲ್ಲಿ ಜಲಜೀವಿಗಳೇ ಪ್ರಧಾನವಾಗಿರುವ ಮಕರ, ಕುಂಭ, ಮೀನ ಒಂದೆಡೆಯಾದರೆ ಸಿಂಹ, ಕನ್ಯಾ ಈ ಭೂಚರಗಳೂ ಇನ್ನೊಂದೆಡೆ ಇವೆ. ಪುನರಾವರ್ತನೆಯಾಗುವ ಋತುಗಳ ಪ್ರಭಾವ ಇದರಲ್ಲಿ ಎದ್ದು ಕಾಣುತ್ತದೆ.

ಸೂರ್ಯ, ಮಕರ, ಕುಂಭ ರಾಶಿಗಳಲ್ಲಿದ್ದಾಗ ಮಳೆಯಾಗುವುದರಿಂದ ಈ ಹೆಸರು ಕೊಟ್ಟಿರಬಹುದಾದದ್ದು ಸಹಜ. ಅಂದರೆ ಈಗಿನ ಜನವರಿ, ಫೆಬ್ರವರಿ ತಿಂಗಳುಗಳಲ್ಲಿ ಮಳೆಯೇ? ಇದು ಹೇಗೆ ಎಂಬ ಪ್ರಶ್ನೆ ಏಳುತ್ತದೆಯಲ್ಲವೇ?

ಉತ್ತರ ಸುಸ್ಪಷ್ಟ—ಯಾವ ಭೂಭಾಗದಲ್ಲಿ ಈ ತಿಂಗಳುಗಳಲ್ಲಿ ಮಳೆಯಾಗು

ತ್ತಿದೆಯೋ, ಆ ಜನಾಂಗದವರೇ ಈ ಹೆಸರುಗಳನ್ನು ಕೊಟ್ಟಿರಬೇಕು.

ಇದು ಇತಿಹಾಸಕಾರರ ತರ್ಕ—ಅಂದರೆ ರಾಶಿಚಕ್ರದ ಹನ್ನೆರಡು ಹೆಸರುಗಳ ಹೆಸರಿನ ಮೂಲ ಬಾಬಿಲೋನಿಯ ಮತ್ತು ಅದಕ್ಕೂ ಹಿಂದಿನ ಐರೋಪ್ಯ ಜನಾಂಗ ಎಂದಾಯಿತು.

ಈಜಿಪ್ಷಿಯನ್ನರು ಈ ಹೆಸರುಗಳನ್ನು ಸುಧಾರಿಸಿದರು. ಕುರಿಗಳು ಈನುವ ಕಾಲ ಮೇಷ; ಬಿತ್ತನೆ ಆರಂಭವಾಗಿ ಎಲ್ಲೆಲ್ಲೂ ಎತ್ತುಗಳು ಕಂಡು ಬರುವಾಗ ವೃಷಭ; ಸೂರ್ಯನು ಗರ್ವದಿಂದ ಸಿಂಹದಂತೆ ಪ್ರಕಾಶಿಸುವ ಕಾಲ ಸಿಂಹ....ಹೀಗೆ ಹೆಸರುಗಳು ಬಂದುವು. ಕಾಲಾನುಕ್ರಮದಲ್ಲಿ ಗ್ರೀಕ್ ಪುರಾಣದ ಪಾತ್ರಗಳ ಹೆಸರನ್ನು ಪಡೆದುವು. ಸುಮಾರು ನಾನೂರು ವರ್ಷಗಳ ಹಿಂದೆ ಕನ್ಯಾರಾಶಿಗೆ ಏಸುಕ್ರಿಸ್ತನ ತಾಯಿ ಮೇರಿಯನ್ನು ಚಿತ್ರೀಕರಿಸಲಾಗುತ್ತಿತ್ತು ಎಂಬುದೊಂದು ಉದಾಹರಣೆ.

ಭೂಖಂಡದ ಉತ್ತರಾರ್ಧದಲ್ಲಿ ನಾಗರಿಕತೆ ಬೆಳೆದು ಬಂದುದೆಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗಾಗಿ ಉತ್ತರ ಖಗೋಳಾರ್ಧದ ನಕ್ಷತ್ರಪುಂಜಗಳು ಅದರಲ್ಲೂ ರಾತ್ರಿ ಇಡೀ ಗೋಚರವಾಗುವ ಕೆಲವು ಪುಂಜಗಳು ವೀಕ್ಷಕರನ್ನು ಆಕರ್ಷಿಸಿದ್ದು ಸಹಜ. ಧ್ರುವನಕ್ಷತ್ರದ ಸ್ಥಾನ ಸ್ಥಿರ, ಅದನ್ನು ಸುತ್ತುವ ಅರಿಗಾ, ಪರ್ಸಿಯುಸ್, ಆಂಡ್ರೊಮಿಡಾ, ಹರ್‌ಕ್ಯುಲಿಸ್, ಬೂಟಿಸ್ ಈ ಎಲ್ಲ ನಕ್ಷತ್ರಪುಂಜಗಳೂ ನಾವಿಕರಿಗೆ ಮೈಲಿಗಲ್ಲುಗಳದ್ದಂತೆ. ಅವುಗಳಸ್ಥಾನದಿಂದ ಕಾಲನಿರ್ಣಯ ಮಾತ್ರವಲ್ಲದೆ ತಾವು ಸಮುದ್ರದ ಮಧ್ಯೆ ಯಾವ ಭಾಗದಲ್ಲಿದ್ದೇವೆ ಎಂದೂ ತಿಳಿಯುತ್ತಿದ್ದರು. ಅವರು ದಾಖಲಿಸಿರುವ ಅಂಶಗಳನ್ನು ಕೂಲಂಕಷವಾಗಿ ಅಭ್ಯಸಿಸಿದ ಬ್ರಿಟಿಷ್ ಖಗೋಳಜ್ಞ ಮೈಕೇಲ್ ಒವೆನ್‌ಡೆನ್, ಈ ನಕ್ಷತ್ರಪುಂಜಗಳ ಹೆಸರುಗಳು ಸುಮಾರು ಕ್ರಿ. ಪೂ. ೨೮೦೦ರಿಂದೀಚೆಗೆ ಚಾಲ್ತಿಯಲ್ಲಿವೆ ಎಂದು ನಿರ್ಣಯಿಸಿದ್ದಾರೆ. ಸುಮಾರು ೩೬ ಡಿಗ್ರಿ ಉತ್ತರದ (೩೬°ಎನ್) ಭೂಭಾಗದಲ್ಲಿ ಈ ಜನವಾಸಿಸುತ್ತಿದ್ದರು ಎಂದೂ ನಿರ್ಣಯಿಸಿದ್ದಾರೆ.

ಇತಿಹಾಸ ಇಲ್ಲಿ ಒಂದು ಸುಳಿವನ್ನು ನೀಡುತ್ತದೆ. ಮಿನೋಯನ್ ಎಂಬ ಜನಾಂಗ ಕ್ರಿ. ಪೂ. ೨೦೦೦ದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ೩೬°ಎನ್‌ಗೆ ಸಮೀಪವಾದ ಮೆಡಿಟರೇನಿಯನ್ ಪ್ರದೇಶದ ಸೆನಾರಿನಿ ಎಂಬ ದ್ವೀಪ ಇವರ ಕೇಂದ್ರ. ಸುತ್ತಲಿನ ಎಲ್ಲ ಜನಾಂಗಗಳ ಮೇಲೆ ಇವರ ವಿದ್ವತ್ ಹಾಗೂ ಸಂಸ್ಕೃತಿಯ ಪರಿಣಾಮ ಅಚ್ಚಾಗಿದೆ. ದುರದೃಷ್ಟವಶಾತ್ (ಕಿ.ಪೂ. ೧೪೫೦ರಲ್ಲಿ) ಅಗ್ನಿಪರ್ವತ ಸ್ಫೋಟದಲ್ಲಿ ಈ ಜನಾಂಗ ನಶಿಸಿತು. ಸೆನಾರಿನಿ ಮುಳುಗಿಹೋಯಿತು. ಆದರೆ ಅವರ ಜ್ಞಾನಸಂಪತ್ತು ಇತರ ಜನಾಂಗದಲ್ಲಿ ಉಳಿಯಿತು.

ಭಾರತೀಯ ಖಗೋಳ ಪದ್ಧತಿಯಲ್ಲಿ ಮೂಲತಃ ರಾಶಿಗಳಿಗೆ ಹೆಚ್ಚಿನ ಮಹತ್ವ ಇದ್ದಂತೆ ಕಂಡುಬರುವುದಿಲ್ಲ. ಅಶ್ವಿನಿ, ಭರಣಿ....ಮೊದಲಾದ ಇಪ್ಪತ್ತೇಳು ನಕ್ಷತ್ರಗಳ ವ್ಯವಸ್ಥೆ ಕಾಲಗಣನೆಗೆ ಬಳಕೆಯಾಗುತ್ತಿತ್ತು. ಪಕ್ಷ, ತಿಥಿ ಹಾಗೂ ಸಂವತ್ಸರಗಳ ಈ ಪದ್ಧತಿಯಲ್ಲಿ ವಾರದ ಬಳಕೆಯೂ ಇದ್ದಂತೆ ಕಂಡುಬರುವುದಿಲ್ಲ. ಚಾಂದ್ರಮಾನ ಪದ್ಧತಿಯಲ್ಲಿ ಚೈತ್ರ, ವೈಶಾಖ....ಈ

ಹೆಸರುಗಳು ಸರಳವಾಗಿ. ರಚಿತವಾಗಿದ್ದುವು. ಸೌರಮಾಸಗಳ ಹೆಸರುಗಳು ಋತುಮಾನಕ್ಕನುಗುಣವಾಗಿದ್ದುವು. ಮಧು, ಮಾಧವ, ನಭ, ನಭಸ್ಯ ಹೀಗೆ.

ಐದನೆಯ ಶತಮಾನದಲ್ಲಿ ಪಾಶ್ಚಾತ್ಯರ ಪ್ರಭಾವಕ್ಕೊಳಗಾದ ಖಗೋಳಜ್ಞರು, ಸೌರಮಾಸಗಳನ್ನು ಮೇಷ, ವೃಷಭ ಎಂದು ಏರೀಸ್, ಟಾರಸ್ ಇವುಗಳನ್ನು ಪದಶಃ ಸಂಸ್ಕೃತಕ್ಕೆ ತರ್ಜುಮೆಮಾಡಿದರು ಹಾಗಾಗಿ ವ್ಯಾವಹಾರಿಕವಾಗಿ ಇವುಗಳಿಗೆ ಯಾವುದೇ ಪುರಾಣದ ಪಾತ್ರಗಳ ಹೆಸರಾಗಲೀ, ಋತುಮಾನದ ಸೂಚನೆಗಳಾಗಲೀ ಸಿಗಲಿಲ್ಲ.

ಶತಮಾನಗಳ ಹಿಂದಿನ ಭೂಪಟವನ್ನು ಇಂದಿನ ಭೂಪಟದೊಡನೆ ಹೋಲಿಸಿದಾಗ ಎದ್ದುಕಾಣುವ ಅಂಶ ಒಂದೇ—ಹಿಂದೆ ರಾಷ್ಟ್ರಗಳ ಸಂಖ್ಯೆ ಕಡಿಮೆ; ವಿಸ್ತಾರ ಹೆಚ್ಚು. ಈಗ ರಾಷ್ಟ್ರಗಳ ಸಂಖ್ಯೆ ಹೆಚ್ಚು; ವಿಸ್ತಾರಕಡಿಮೆ.

ನಕ್ಷತ್ರಪುಂಜಗಳ ವಿಚಾರದಲ್ಲೂ ಹೀಗೆ ಆಗಿದೆ. ಆದರೆ ಇಲ್ಲಿ ಯಾವ ರಾಜಕೀಯವೂ ತಲೆಹಾಕಿಲ್ಲ. ೧೯೩೦ರಲ್ಲಿ ಅಂತಾರಾಷ್ಟ್ರೀಯ ಖಗೋಳವಿಜ್ಞಾನಿಗಳ ಒಕ್ಕೂಟ ಒಂದು ನಿರ್ಣಯ ತೆಗೆದುಕೊಂಡು, ನಕ್ಷತ್ರಪುಂಜಗಳ ಎಲ್ಲೆಗಳನ್ನು ನಿಗದಿಪಡಿಸಿತು.

ದಕ್ಷಿಣಗೋಳಾರ್ಧವನ್ನು ಮೊದಲು ಗಮನಿಸಿದವರು ನಾವಿಕರಲ್ಲವೇ? ಹಾಗಾಗಿ ಅಲ್ಲಿಯ ನಕ್ಷತ್ರಪುಂಜಗಳ ಹೆಸರುಗಳೆಲ್ಲಾ ಈಚಿನವು. ನಾವಿಕರ ಉಪಕರಣಗಳೂ ಈ ಹೆಸರುಗಳಲ್ಲಿವೆ—ಟೆಲಿಸ್ಕೋಪಿಯಂ, ಸೆಕ್ಸ್‌ಟಂಟ್, ಟ್ರಿಯಾಂಗುಲಮ್—ಹೀಗೆ ಈ ನಾವಿಕರಲ್ಲಿ ಎಡ್ಮಂಡ್ ಹ್ಯಾಲೀ (ಧೂಮಕೇತುವಿನಿಂದ ಪ್ರಖ್ಯಾತಿ ಪಡೆದವ) ಸೇರಿದ್ದಾನೆ.

ಹೆಸರು ಏನೇ ಇರಲಿ, ನಕ್ಷತ್ರಪುಂಜಗಳು ಮೂಲತಃ ದಿಕ್ಸೂಚಿಗಳು. ಸಪ್ತರ್ಷಿಯನ್ನು ಹುಡುಕಲು ಕಣ್ಣು ಉತ್ತರದಿಕ್ಕಿನತ್ತ ತಾನೇ ತಾನಾಗಿ ಹಾಯುತ್ತದೆ. ಸೆಂಟಾರಸ್ ಎಂಬುದು ಖಂಡಿತಾ ಅಲ್ಲಿರುವುದಿಲ್ಲ ಎಂದು ತಿಳಿಸುವುದೇ ಈ ಹೆಸರಿನ ಬಳಕೆಯ ಉದ್ದೇಶ. ಇವು ಜನಸಾಮಾನ್ಯರಿಗೆ ಮಾತ್ರ ಬೇಕು. ಸ್ಥಾನ ನಿರ್ದೇಶಕಗಳನ್ನೇ ನೇರವಾಗಿ ಉಪಯೋಗಿಸುವ ವೃತ್ತಿಪರ ಹಾಗೂ ಹವ್ಯಾಸಿಗಳಿಗೆ ಈ ನಕ್ಷತ್ರಪುಂಜಗಳ ಹೆಸರಿನ ಆವಶ್ಯಕತೆಯೇ ಇಲ್ಲ ಎಂದರೆ ಆಶ್ಚರ್ಯವೆನಿಸಬಹುದಲ್ಲವೇ?

ಆದ್ದರಿಂದ ಮೇಷ ಮೊದಲೋ ಮೀನ ಮೊದಲೋ! ಖಗೋಳದಲ್ಲಿ ಮೊದಲು ಕೊನೆ ಇಲ್ಲ—ಪಶ್ಚಿಮದಿಂದ ಪೂರ್ವಕ್ಕೆ ಸರಿಯುವಾಗ ಮೀನ ಮೊದಲು, ಮೇಷ ಬಳಿಕ; ಆದರೆ ಮೂಡು–ಕಂತು ದೈನಂದಿನ ಚಲನೆಯಲ್ಲಿ ಮೇಷ ಮೊದಲು ಮೀನ ತೀರ ಕಡೆಗೆ! ವೃತ್ತದಲ್ಲಿ ನೀವು ನೆನೆದೆಡೆ ಆರಂಭಬಿಂದು ಅಲ್ಲವೇ?

ಎಚ್ಚರಿಕೆಯ ಅಗ್ನಿ ಪರೀಕ್ಷೆ

ಮಾಧವರಾವ್ ಮುಧೋಳ್
'ರಮಾಶ್ರೀ' ೧೧೬೭–ಬಿ೧, ಎಚ್.ಐ.ಜಿ.
೧ನೇ ತಿರುವು, ಶ್ರೀರಾಂಪುರ ೨ನೇ ಹಂತ
ಮೈಸೂರು

"ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ। ಮಾಕರ್ಮ ಫಲಹೇತು ರ್ಭೂರ್ಮಾತೇ ಸಂಗೋಽಸ್ತ್ವಕರ್ಮಣಿ"॥ ಎಂಬ ಗೀತೋಕ್ತಿಯ ಪ್ರತ್ಯಕ್ಷ ರೂಪ ಗಳು ಮದರ್ ತೆರೇಸಾ ಮತ್ತು ಡಾಕ್ಟರ್ ಲಂಬಾರ್ಡಿ.

ನ್ಯೂಯಾರ್ಕ್ ಪಟ್ಟಣದ ಮಧ್ಯ ಭಾಗ. ಮ್ಯಾನ್‌ಹಾಟನ್‌ದ ಪೂರ್ವ ದಿಕ್ಕು. ಅಲ್ಲಿ ಎತ್ತರವಾಗಿ ಕಂಗೊಳಿಸುವ ಒಂದು ಅಪಾರ್ಟ್‌ಮೆಂಟಿನಲ್ಲಿ ಫೋನ್ ಗಂಟೆ ಬಾರಿಸಿತು. ಮೂವತ್ತು ಮೂರು ವರ್ಷದ ಡಾಕ್ಟರ್ ಜಾರ್ಜ್ ಲಂಬಾರ್ಡಿ, ಅಕಸ್ಮಾತ್ತಾಗಿ ಅಂದು ಮಧ್ಯಾಹ್ನ ಮನೆಯಲ್ಲಿದ್ದರು. ಫೋನ್ ಎತ್ತಿಕೊಂಡರು. ಅದರಲ್ಲಿ ಒಂದು ಹೆಂಗಸಿನ ಧ್ವನಿ ಕೇಳಿಸಿತು.

"ಡಾಕ್ಟರ್ ಜಾರ್ಜ್ ಲಂಬಾರ್ಡಿಯವ ರೊಡನೆ ಮಾತನಾಡಬಹುದೆ?"

"ಹಾಂ! ಮಾತಾಡುತ್ತಿದ್ದೇನೆ."

"ಒಬ್ಬ ಎಪ್ಪತ್ತೊಂಭತ್ತು ವರ್ಷದ ಮಹಿಳೆ ವಿಪರೀತ ಜ್ವರದಿಂದ ನರಳುತ್ತಿದ್ದಾರೆ. ಜ್ವರ ಕಡಿಮೆಯಾಗುತ್ತಲೇ ಇಲ್ಲ. ರಕ್ತ ವಾಂತಿಯಾಗುತ್ತಿದೆ. ಆಗಾಗ ಅವರಿಗೆ ಮಬ್ಬು ಕವಿಯುತ್ತದೆ. ವಿಪರೀತ ತಲೆ ಸಿಡಿತವೆಂದೂ, ಚಕ್ಕರ ಬಂದಂತಾಗುವುದೆಂದೂ ಹೇಳುತ್ತಿದ್ದಾರೆ. ಅವರ ಸ್ಥಿತಿ ದಿವಸ ದಿವಸಕ್ಕೂ ಕೆಡುತ್ತಲಿದೆ. ಅವರಿಗೆ ಸಹಾಯ ಮಾಡಲು ತಮ್ಮಿಂದ ಸಾಧ್ಯವೆ?"

"ಇದು ತುರ್ತು ಪರಿಸ್ಥಿತಿ ಎಂದು ನನಗನಿಸುತ್ತದೆ." ಡಾಕ್ಟರ್ ಲಂಬಾರ್ಡಿಯವರು ಸ್ವಲ್ಪ ಇಳಿಸ್ವರದಲ್ಲಿ ಹೇಳಿದರು. "ಅವರನ್ನು ಈ ಕ್ಷಣವೇ ಹತ್ತಿರವಿರುವ ಆಸ್ಪತ್ರೆಯಲ್ಲಿ ಸೇರಿಸಿ. ಅಲ್ಲಿಯ ಡಾಕ್ಟರು ಅವರನ್ನು ನೋಡಿಕೊಳ್ಳುವರು."

"ಅವರೀಗ ಆಸ್ಪತ್ರೆಯಲ್ಲೇ ಇದ್ದಾರೆ, ಡಾಕ್ಟರ್ ಲಂಬಾರ್ಡಿ! ದೇಶದ ಹೆಸರಾಂತ ಡಾಕ್ಟರುಗಳು ಅವರ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಆದರೆ ಅವರ ಚಿಕಿತ್ಸೆಯಲ್ಲಿ ಎಲ್ಲಿಯಾದರೂ ಕಿಂಚಿತ್ ಕೊರತೆಯಾಗಿರಬಹುದು. ಇಷ್ಟೆಲ್ಲ ಡಾಕ್ಟರುಗಳು ಕೂಡಿದರೂ ರೋಗ ಯಾವುದೆಂಬುದನ್ನು ಸರಿಯಾಗಿ ಕಂಡುಹಿಡಿಯಲು ಆಗಿಲ್ಲದಿರಬಹುದು."

"ನೋಡಿ ಮೇಡಮ್!" ಲಂಬಾರ್ಡಿ ಮಾತು ಮುಗಿಸುವ ರೀತಿಯಲ್ಲಿ, "ಇವತ್ತು

ಉರ್ದು ಮೂಲ: ರಜಾಉಲ್ ಜಬ್ಬಾರ್.

ಶನಿವಾರ. ಒಂಭತ್ತನೇ ಸೆಪ್ಟೆಂಬರ್. ತಾವು ಅವರನ್ನು ಮಂಗಳವಾರ ಅಂದರೆ ಹನ್ನೆರಡನೇ ಸೆಪ್ಟೆಂಬರ್ ಮಧ್ಯಾಹ್ನ ನನ್ನ ಡಿಸ್ಪೆನ್ಸರಿಗೆ ಕರೆದು ತನ್ನಿ. ಅವರನ್ನು ನಾನು ಪರೀಕ್ಷಿಸಿದ ಮೇಲೆ ನನ್ನ ಅಭಿಪ್ರಾಯ ಹೇಳಬಹುದು. ಸೋಮವಾರ ನನ್ನ ಸೆಕ್ರೆಟರಿಗೆ ಫೋನ್ ಮಾಡಿ, ಸೂಕ್ತ ಸಮಯ ಗೊತ್ತುಮಾಡಿಕೊಳ್ಳಿ" ಎಂದು ಹೇಳಿದರು.

"ಅವರಿಗೆ ನಿಮ್ಮ ಡಿಸ್ಪೆನ್ಸರಿಗೆ ಬರಲಿಕ್ಕೆ ಆಗುವುದಿಲ್ಲ ಡಾಕ್ಟರ್! ಅವರು ಕಲಕತ್ತೆಯ ವುಡ್‌ಲ್ಯಾಂಡ್ ನರ್ಸಿಂಗ್ ಹೋಮಿನಲ್ಲಿದ್ದಾರೆ" ಎಂದು ಆ ಮಹಿಳೆ ಲಗುಬಗೆಯಿಂದ ನುಡಿದಳು.

"ಕಲಕತ್ತಾ! ಹಿಂದುಸ್ತಾನ!" ಡಾಕ್ಟರ್ ಲಂಬಾರ್ಡಿಯವರ ಪ್ರಶ್ನೆಯಲ್ಲಿ ಆಶ್ಚರ್ಯವಿತ್ತು ಮತ್ತು ಕುತೂಹಲವಿತ್ತು.

"ಹೌದು! ಹಿಂದುಸ್ತಾನ. ಆ ರೋಗಿಯ ಹೆಸರು ಮದರ್ ತೆರೇಸಾ" ಎಂದು ಮತ್ತೆ ಆ ಮಹಿಳೆ ನುಡಿದಳು.

"ಮದರ್ ತೆರೇಸಾ! ಮದರ್ ತೆರೇಸಾ!!" ಲಂಬಾರ್ಡಿಯವರು ಹೆಸರನ್ನು ಮತ್ತೆ ಮತ್ತೆ ಉಚ್ಚರಿಸಿದರು. ಅವರ ಆಶ್ಚರ್ಯ ಹೆಚ್ಚಿತು. ಕುತೂಹಲ ಕರಗಿತು. ಆಸಕ್ತಿ ಮೂಡಿತು. ಮತ್ತೆ ಅವರು ಮುಂದುವರೆದು, "ಯಾರಿಗೆ ಹೋದ ಸಲ ವಿಶ್ವಶಾಂತಿ ನೊಬೆಲ್ ಬಹುಮಾನ ಕೊಡಲಾಗಿತ್ತೋ! ಯಾರನ್ನು ಇಡಿ ಜಗತ್ತು ಪೂಜಿಸುತ್ತಿದೆಯೋ!! ಯಾರು ಬಡವರಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಂಸಿರುವರೊ!!! ಅವರೆ? ಮ್ಯಾಡಮ್?? ತಾವು.... ತಾವು.... ಈ ಫೋನ್ ಕಲಕತ್ತೆಯಿಂದ ಮಾಡುತ್ತಿರುವಿರಾ?" ಎಂದರು.

"ಇಲ್ಲ! ದೂರ-ಅಂತರದ ಈ ಫೋನ್ ತಮಗೆ ನಾನು ರೋಮ್‌ನಿಂದ ಮಾಡುತ್ತಿದ್ದೇನೆ." ಮಹಿಳೆಯ ಧ್ವನಿಯಲ್ಲಿ ಈ ಸಲ ಆಶಾಕಿರಣ ಸಿಕ್ಕ ಉತ್ಸಾಹ, ಹುಮ್ಮಸ್ಸು ಇತ್ತು. ಅವಳು ಮತ್ತೆ, "ಮದರ್ ತೆರೇಸಾ ಮಾನವತೆಯ ಬೆಳಗುತ್ತಿರುವ ಜ್ಯೋತಿ. ಈ ಜ್ಯೋತಿ ಸ್ವಲ್ಪ ಹೊಯ್ದಾಡಲು ಜಗತ್ತಿನ ಮೂಲೆ ಮೂಲೆಯಲ್ಲಿರುವ ಎಷ್ಟೋ ಜನರು, ಈ ಜ್ಯೋತಿ ನಂದಬಾರದೆಂದು ತಮ್ಮ ತಮ್ಮ ಕೈಲಾದಷ್ಟು ಪ್ರಯತ್ನ ಮಾಡುತ್ತಿದ್ದಾರೆ. ನಾನು ಅಮೇರಿಕಾದ ಎಷ್ಟೋ ಪ್ರಸಿದ್ಧ ಡಾಕ್ಟರುಗಳನ್ನು ಸಂಪರ್ಕಿಸುತ್ತಿದ್ದೇನೆ. ಇದರಲ್ಲಿ ಯಾರು ಯಾರು ಎಷ್ಟರ ಮಟ್ಟಿಗೆ ಸಹಾಯ ಮಾಡುವರೆಂದು ನಿರುಕಿಸುತ್ತಿದ್ದೇನೆ. ನನಗೆ ತಮ್ಮ ಹೆಸರು ವೈದ್ಯಕೀಯ ಉಲ್ಲೇಖದಲ್ಲಿ ಸಿಕ್ಕಿತು. ತಾವು ಋತುಗಳು ಮತ್ತು ಕ್ಷಿಪ್ರ ಬದಲಾವಣೆಯ ಪ್ರತಿಕ್ರಿಯೆಯಿಂದಾದ ಜ್ವರದ ಶಾಖವನ್ನು ಹಿಡಿತದಲ್ಲಿರಿಸುವುದರಲ್ಲಿ ಸಿದ್ಧಹಸ್ತರೆಂದು ತಿಳಿದು ಬಂದಿತು" ಎಂದರು.

ಯಾವುದಾದರೂ ನೆಪ ಹೇಳುವುದಾಗಲಿ ಅಥವಾ ತಮ್ಮ ಕೈಯಲ್ಲಾಗುವುದಿಲ್ಲವೆಂದು ಹೇಳುವುದಾಗಲಿ ಬಹಳ ಕಷ್ಟವೆಂದು ಲಂಬಾರ್ಡಿಯವರಿಗನಿಸಿತು. ಒಂದು ಕಡೆ ಈ ಫೋನ್ ಮಾಡುತ್ತಿರುವ ಮಹಿಳೆಯ ಹೃದಯದುದ್ವಿಗ್ನತೆ ಪರಿಣಾಮ ಮಾಡುತ್ತಿತ್ತು. ಇನ್ನೊಂದೆಡೆಗೆ ಮದರ್ ತೆರೇಸಾ ಅವರ ಗೌರವಿತ ಭೌಮವ್ಯಕ್ತಿತ್ವ ಕಣ್ಣೆದುರಿಗಿತ್ತು. ಈ ಜೀವಂತ ಸಂತಳಿಗೆ ತತ್‌ಕ್ಷಣ ಸಹಾಯಬೇಕು. ಕೆಲವು ಗಂಟೆಗಳ ಸ್ವಲ್ಪ ಅಜಾಗರೂಕತೆಯೂ ಹೊಯ್ದಾಡುತ್ತಿರು

ಈ ಜ್ಯೋತಿಯನ್ನು ಶಾಶ್ವತವಾಗಿ ನಂದಿಸಿ ಬಿಡಬಹುದು.

ಲಂಬಾರ್ಡಿ ತಮ್ಮ ವೈದ್ಯಕೀಯ ಅನುಭವದ ವಿಶ್ಲೇಷಣೆಯನ್ನು ಮಾಡಿಕೊಳ್ಳುತ್ತ, "ಆದರೆ, ತಮ್ಮ ಈ ಇಚ್ಛೆಗೆ, ಆಗಬಹುದು ಅಥವ ಇಲ್ಲ ಎಂಬ ಉತ್ತರವನ್ನು ಕೊಡುವ ಪೂರ್ವದಲ್ಲಿ ಮದರ್ ತೆರೇಸಾ ಅವರನ್ನು ನೋಡಿಕೊಳ್ಳುತ್ತಿರುವ, ಚಿಕಿತ್ಸೆ ಮಾಡುತ್ತಿರುವ ಡಾಕ್ಟರುಗಳೊಂದಿಗೆ ಮಾತನಾಡ ಬಯಸುತ್ತೇನೆ" ಎಂದು ಆ ಮಹಿಳೆಗೆ ನುಡಿದರು.

"ತಮ್ಮ ಮಾತಿನಲ್ಲಿ ಔಚಿತ್ಯವಿದೆ. ರುಜು ಮಾತಿನ ತೂಕವಿದೆ ಡಾಕ್ಟರ್" ಎಂದು ಆ ಹೆಣ್ಣು ಧ್ವನಿ ಹೇಳಿತು, "ನನ್ನ ಫೋನಿನಲ್ಲಿ ಕಾನ್ಫ್ರೆನ್ಸ್ ಲೈನೂ ಇದೆ. ಅದರಿಂದ ಮದರ್ ತೆರೇಸಾರವರನ್ನು ನೋಡಿಕೊಳ್ಳುತ್ತಿರುವ ಡಾಕ್ಟರುಗಳನ್ನು ಸಂಪರ್ಕಿಸುವೆ, ಮತ್ತು ಅವರು ನಿಮ್ಮೊಡನೆ ಮಾತನಾಡುವಂತೆ ಸಂಪರ್ಕ ಕೊಡುವೆ. ತಾವು ನನಗೆ ಸ್ವಲ್ಪ ಸಮಯ ಕೊಡಬಹುದಲ್ಲವೆ?"

"ಅಗತ್ಯವಾಗಿ." ಲಂಬಾರ್ಡಿ ಹೇಳಿದರು.

ಲಂಬಾರ್ಡಿ ಶನಿವಾರದ ತಮ್ಮ ಹೊರಗೆ ಹೋಗುವ ಕಾರ್ಯಕ್ರಮಗಳೆಲ್ಲವನ್ನು ರದ್ದು ಮಾಡಿದರು. ಅವರಿಗೆ ಹಿಂದುಸ್ತಾನದ ಡಾಕ್ಟರರ ತಂಡದ ಜೊತೆಗೆ ಮಾತನಾಡುವುದಿತ್ತು. ಫೋನ್ ಸಂಪರ್ಕ ಯಾವಾಗ ಆಗುವುದೆಂಬುದು ಅವರಿಗೆ ಗೊತ್ತಿರಲಿಲ್ಲ. ಈ ಬಗ್ಗೆ ಮಾತನಾಡುವುದಕ್ಕೆ ಎಷ್ಟು ಸಮಯ ಬೇಕಾದೀತು ಎಂಬ ಅಂದಾಜೂ ಅವರಿಗಿರಲಿಲ್ಲ.

ಫೋನ್ ಕರೆಯನ್ನು ನಿರೀಕ್ಷಿಸುತ್ತ, ಲಂಬಾರ್ಡಿ ತಮ್ಮ ಜೀವನದ ಹಿಂದಿನ ಒಂದೊಂದೇ ಘಟನೆಗಳನ್ನು ನೆನೆಯುತೊಡ
ಗಿದರು. ವಿದ್ಯಾರ್ಥಿ ದೆಶೆಯಿಂದಲೇ ಅವ
ಮನಸ್ಸು, ತಮ್ಮ ವೈದ್ಯಕೀಯ ವೃತ್ತಿ
ಯನ್ನು ಕೇವಲ ತಮ್ಮ ಬಂಧು ಬಾಂಧವ
ಸುಖ ಸಂತೋಷಕ್ಕೆ ಮಾತ್ರ ಉಪಯೋಗಿ
ಸದೆ, ಈ ಸಹಜ ಮಾರ್ಗದಿಂದ ಹೊರಬಂದು
ಯಾವುದಾದರೂ ಒಳ್ಳೆಯ ಗುರಿ ಸಾಧಿಸು
ವುದಕ್ಕೆ, ಉತ್ಕೃಷ್ಟ ತತ್ವದ ಬೆಳವಣಿಗೆಗೆ,
ತೊಡಗಿಸಬೇಕೆಂಬುದು ಅವರ ಪ್ರಬಲವಾದ
ಇಚ್ಛೆಯಾಗಿದ್ದಿತು. ಅದರಂತೆ ೧೯೬೦ ರಲ್ಲಿ
ಅವರು ತಮ್ಮ ವೈದ್ಯಕೀಯ ಪರೀಕ್ಷೆಯಲ್ಲಿ
ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣ
ರಾದಾಗ, ಅಮೇರಿಕಾದ ವಿಶ್ವವಿದ್ಯಾಲಯ
ದಿಂದ ಅವರಿಗೆ ವಿದ್ಯಾರ್ಥಿವೇತನ ಸಿಕ್ಕುವ
ಅವಕಾಶ ದೊರಕಿತ್ತು. ಆದರೆ ಅದೇ
ಸಮಯಕ್ಕೆ, ನ್ಯೂಯಾರ್ಕ್ ಹತ್ತಿರವಿರುವ
ಹಿಂದುಳಿದ ಒಂದು ಗ್ರಾಮದ ಬಗ್ಗೆ ಅವರು
ಯೋಜನೆಯು ಸಿದ್ಧ ಮಾಡಿಕೊಂಡಿದ್ದರು.
ಆ ಗ್ರಾಮದ ಜನತೆಯ ಆರೋಗ್ಯ ಮತ್ತು
ಅಭಿವೃದ್ಧಿ ಆ ಯೋಜನೆಯ ಗುರಿ
ಯಾಗಿತ್ತು. ಅದು ಒಳ್ಳೆಯ ಸಾಮಾಜಿಕ
ಧ್ಯೇಯ ಧೋರಣೆಯನ್ನು ಹೊಂದಿದ್ದ
ಕಾರಣ ಆಸಕ್ತಿ ಹೆಚ್ಚಿ ಅವರು ವಿಶ್ವವಿದ್ಯಾ
ಲಯದ ವಿದ್ಯಾರ್ಥಿವೇತನ ನಿರಾಕರಿಸಿದರು.

೧೯೬೪ ರಲ್ಲಿ ಅವರಿಗೆ ಕೆನ್ಯಾಕ್ಕೆ
ಹೋಗುವ ಪ್ರಸಂಗ ಬಂತು. ಪೂರ್ವ
ಕೆನ್ಯಾದ ಒಂದು ಭಾಗದಲ್ಲಿ, ಆ ದಿವಸಗಳಲ್ಲಿ
ಯಾವುದೋ ಹೆಸರಿಸದ ಒಂದು ರೋಗ,
ಸಾಂಕ್ರಾಮಿಕವಾಗಿ ಬಹು ತೀವ್ರಗತಿಯಿಂದ
ಹಬ್ಬತೊಡಗಿತ್ತು. ಪ್ರತಿಶತ ಎಂಭತ್ತರಷ್ಟು
ಜನ, ಈ ರೋಗಪೀಡಿತರಾಗಿದ್ದರು. ಪಿಡು
ಗಾಗಿ ಹಬ್ಬಿದ್ದ ಈ ರೋಗವನ್ನು ಕಂಡು-

ಹಿಡಿದು ಅದನ್ನು ನಿರ್ಮೂಲ ಮಾಡಲು ಲಂಬಾರ್ಡಿ ನಿಶ್ಚಯಿಸಿದರು. ಹಾಗೆ ಮಾಡುವುದರಿಂದ ಆ ಪ್ರದೇಶದ ಜನಕ್ಕೆ ಒಂದು ಹೊಸ ಜೀವನ ಕೊಟ್ಟಂತಾಗುವುದೆಂದಿದ್ದರು. ಆದರೆ ಅವರ ನಿರ್ಧಾರಕ್ಕೆ ರಾಜಕೀಯ ಮತ್ತು ಸಾಮಾಜಿಕ ತಡೆಯಾಯಿತು. ಈ ತಡೆಗಳನ್ನು ಅವರು ಎದುರಿಸದಾದರು. ನಿರಾಶರಾಗಿ ಈ ಜಗತ್ತು ಬದಲಾಗದು. ಇದು ಹೀಗೆಯೇ ಎಂದು ಸುಮ್ಮನಾದರು. ಮತ್ತೆ ನ್ಯೂಯಾರ್ಕ್ ಪಟ್ಟಣಕ್ಕೆ ಮರಳಿ, ತಮ್ಮ ತೀರ ಹತ್ತಿರದ ಬಂಧುವರ್ಗಕ್ಕೆ ಮಾತ್ರ ಒಂದು ಒಳ್ಳೆಯ ಜೀವನ ಸಾಗಿಸುವುದಕ್ಕೆ ಅನುಕೂಲ ಮಾಡಿಕೊಡುವುದಾಗಿ ನಿರ್ಧರಿಸಿದರು.

ನಾಲ್ಕಾರು ವರ್ಷದ ಸದ್ದಿಲ್ಲದ ಜೀವನ ಸಾಗಿಸಿದ ನಂತರ ಅವರಿಗೆ ಈಗ ಜಗತ್ತಿನ ಪ್ರೀತಿಗೆ ಪಾತ್ರರಾದ ಸಹೃದಯಿ, ಪರೋಪಕಾರಿಯೊಬ್ಬಳನ್ನು ಉಳಿಸುವ ಬಗ್ಗೆ ಕರೆ ಬಂದಿತ್ತು. ಮದರ್ ತೆರೇಸಾ ಅವರಿಗೆ ಸೇವೆ ಮಾಡುವುದರ ಮೂಲಕ ಬಡ ಮತ್ತು ನಿರ್ಗತಿಕರಿಗೆ ನೆರವಾಗುವ ಅವಕಾಶ ಸಿಕ್ಕಿತ್ತು. ಲಂಬಾರ್ಡಿಯವರ ಚಿತ್ತದಲ್ಲಿ ಅದುಮಿಕೊಂಡಿದ್ದ ಮಾನವೀಯತೆಯ ಅವರ ಹಳೆಯ ತುಡಿತ, ಮತ್ತೆ ಮೇಲೆದ್ದಿತು.

ಆ ಮಹಿಳೆ, ಮದರ್ ತೆರೇಸಾರನ್ನು ನೋಡಿಕೊಳ್ಳುತ್ತಿದ್ದ ಡಾಕ್ಟರುಗಳ ತಂಡ ಲಂಬಾರ್ಡಿಯವರನ್ನು ಫೋನ್ ಮೂಲಕ ಸಂಪರ್ಕಿಸುವಂತೆ ಮಾಡಿದಳು. ತಂಡದಲ್ಲಿನ ಒಬ್ಬೊಬ್ಬರೊಂದಿಗೂ ಫೋನಿನಲ್ಲಿ ಇವರು ಚಿಕಿತ್ಸೆಯ ಬಗ್ಗೆ ಮಾತನಾಡಿದರು. ತಮಗೆ ಹೊಳೆದ ಸಂಶಯದ ಟಿಪ್ಪಣಿ ಮಾಡಿಕೊಂಡರು. ತಾವು ಕಲಕತ್ತೆಗೆ ಬಂದರೆ, ಆ ಡಾಕ್ಟರುಗಳದೇನೂ ಅಭ್ಯಂತರವಿಲ್ಲವೆ ? ಎಂದು ಕೇಳಿಕೊಂಡರು. ಹಿಂದುಸ್ತಾನದ ಡಾಕ್ಟರ್ ತಂಡಕ್ಕೆ. ಈ ಲಂಬಾರ್ಡಿ ಬಂದಾದರೂ ಏನು ಮಾಡಿಯಾರು ! ಎಂಬ ಆಲೋಚನೆ ಬಾರದೇ ಇರಲಿಲ್ಲ ! ಈ ತಂಡದಲ್ಲಿ ಹಿಂದುಸ್ತಾನದ ಖ್ಯಾತ ಡಾಕ್ಟರುಗಳಿದ್ದರು. ಮದರ್ ತೆರೆಸಾ ಮೃತ್ಯುದವಡೆಯಲ್ಲಿದ್ದಾರೆ. ನ್ಯೂಯಾರ್ಕ್ ಮತ್ತು ಕಲಕತ್ತೆಯ ನಡುವೆ ಹನ್ನೆರಡು ಸಾವಿರ ಮೈಲಿಗಳ ಅಂತರವಿದೆ. ಈ ಅಂತರವನ್ನು ದಾಟಿ ಬರುವುದು ಚಿಟಿಕಿ ಹೊಡೆದಂತೇನಲ್ಲ. ಹೀಗಿದ್ದರೂ ಆ ಎಲ್ಲ ಡಾಕ್ಟರುಗಳು, ಲಂಬಾರ್ಡಿಯವರಿಗೆ ಸುಸ್ವಾಗತವನ್ನು ಬಯಸಿದರು.

"ನಾನು ಸಾಧ್ಯವಾದಷ್ಟು ಬೇಗ, ಇಲ್ಲಿಂದ ಹೊರಟು ಬರುವೆ" ಎಂದು ಲಂಬಾರ್ಡಿ ಅವರಿಗೆ ಆಶ್ವಾಸನೆಯನ್ನಿತ್ತರು.

ಆದರೆ ಅವರಿಗೆ ಎರಡು ಬಹು ದೊಡ್ಡ ತಡೆಗಳ ಅರಿವು ಆಮೇಲೆ ಆಯಿತು. ಅವರ ಪಾಸ್‌ಪೋರ್ಟ್ ಅವಧಿ ಮುಗಿದುಹೋಗಿತ್ತು. ಹೊಸತನ್ನು ತೆಗೆಸಬೇಕೆಂಬ ವಿಚಾರ ಕೂಡಲೇ ಅವರಿಗೆ ಹೊಳೆದಿರಲಿಲ್ಲ. ಅವರ ಹತ್ತಿರ ಪಾಸ್‌ಪೋರ್ಟ್ ಇದ್ದರೂ ಕಲಕತ್ತೆಗೆ ಹೋಗಲು ಹಿಂದುಸ್ತಾನಿ ಕನ್ಸೋಲೇಟಿನಿಂದ ವೀಸಾ ಪಡೆಯಬೇಕಿತ್ತು, ಶನಿವಾರವಾದುದರಿಂದ, ಅಮೇರಿಕಾ ಪಾಸ್‌ಪೋರ್ಟ್ ಆಫೀಸು ಮತ್ತು ಹಿಂದುಸ್ತಾನಿ ಕನ್ಸೋಲೇಟ್ ವೀಸಾ ವಿಭಾಗ ಮುಚ್ಚಲ್ಪಟ್ಟಿದ್ದುವು. ಸೋಮವಾರದವರೆಗೆ ಈ ಎರಡೂ ಕೆಲಸಗಳ ಬಗ್ಗೆ ಕಾಯುವುದು ಅವಶ್ಯವೆನಿಸಿತ್ತು. ಹೊಸ ಪಾಸ್‌ಪೋರ್ಟ್ ಪಡೆಯಲು,

ನಿಯಮಾನುಸಾರ ಎರಡು ಮೂರು ದಿವಸಗಳಂತೂ ಬೇಕೇ ಬೇಕಿತ್ತು.

ಆದರೆ ಲಂಬಾರ್ಡಿ ಆಶೆಯ ಅಂಚನ್ನು ಬಿಡಲಿಲ್ಲ. ಪಾಸ್‌ಪೋರ್ಟ್ ಆಫೀಸಿನ ಅಧಿಕಾರಿಗಳ ಫೋನ್ ನಂಬರುಗಳನ್ನು ಹುಡುಕಿ, ಅವರಿಗೆ ಫೋನ್ ಮಾಡಿದರು. ಮನೆಯಲ್ಲಿ ಸಿಕ್ಕ ಅಧಿಕಾರಿಗಳ ಮೇಲೆಲ್ಲಾ ಮದರ್ ತೆರೇಸಾ ಅವರ ಹೆಸರಿನ ಮೋಡಿಯನ್ನು ಮಾಡಿಸಿದರು. ಶನಿವಾರ ಭಾನುವಾರ ಕೆಲಸ ಮಾಡಲಿಕ್ಕಾಗುವುದಿಲ್ಲೆಂದು ಅಧಿಕಾರಿಗಳು ನಿರಾಕರಿಸುತ್ತಲೂ ಇದ್ದರು. ಅವರಿಗೂ ಅವರದೇ ಆದ ಕಷ್ಟಗಳಿದ್ದವು. ಕೊನೆಗೆ ಫೋನಿನಲ್ಲಿ ಒಬ್ಬ ಮಹಿಳೆ ಸಿಕ್ಕಿದರು. ಆವರು ಡಾಕ್ಟರ್ ಲಂಬಾರ್ಡಿಯವರಿಗೆ ಧೈರ್ಯ ಕೊಟ್ಟರು.

"ತಾವು ಮದರ್ ತೆರೇಸಾ ಅವರಿಗಾಗಿ ಕಲಕತ್ತೆಗೆ ಹೋಗುತ್ತಿದ್ದೀರಿ. ತಮಗೆ ಪಾಸ್‌ಪೋರ್ಟ್ ಶೀಘ್ರವಾಗಿ ಸಿಗಲೇ ಬೇಕು, ಹೇಳಿ, ಯಾವಾಗ ಬೇಕು?"

"ಎಷ್ಟು ಬೇಗ ಸಾಧ್ಯವೋ ಅಷ್ಟು" ಲಂಬಾರ್ಡಿ ಹೇಳಿದರು.

"ನಾಳೆ ಭಾನುವಾರ. ಸರಿಯಾಗಿ ಬೆಳಿಗ್ಗೆ ಆರು ಗಂಟೆಗೆ ಪಾಸ್‌ಪೋರ್ಟ್ ಆಫೀಸಿಗೆ ಬನ್ನಿ. ತಮ್ಮ ಪಾಸ್‌ಪೋರ್ಟ್, ಕೌಂಟರ್‌ನಲ್ಲಿ ಪಿಕ್‌ಅಪ್ ಮಾಡಿಕೊಳ್ಳಲು ಸಿದ್ಧವಾಗಿರುವುದು" ಎಂದು ಆ ಮಹಿಳೆ ಹೇಳಿದರು.

ಅದರಂತೆಯೇ ಹಿಂದೂಸ್ತಾನಿ ಕನ್ಸೋಲೇಟ್ ಅಧಿಕಾರಿಯು "ತಮಗೆ ವೀಸಾ ಭಾನುವಾರ ಬೆಳಿಗ್ಗೆ ಏಳು ಗಂಟೆಗೆ ಸಿಕ್ಕುವುದು. ಬನ್ನಿ" ಎಂದು ವಿಶ್ವಾಸನೀಯವಾಗಿ ಹೇಳಿದರು.

ಪಾಸ್‌ಪೋರ್ಟ್ ಪಡೆದು ಲಂಬಾರ್ಡಿ ಹಿಂದೂಸ್ತಾನಿ ಕನ್ಸೋಲೇಟ್ ಕಛೇರಿಗೆ ವೀಸಾ ಪಡೆಯಲು ಹೋದಾಗ, ಅಲ್ಲಿ ಎಂಟು ಜನರು ಇವರ ದಾರಿಯನ್ನು ಕಾಯುತ್ತಿದ್ದರು. ಅವರೆಲ್ಲರ ಬಾಯಲ್ಲೂ ಒಂದೇ ಮಾತು.

"ಹಿಂದೂಸ್ತಾನದಲ್ಲಿ ಮದರ್ ತೆರೇಸಾ, ದೇವರಿಂದ ಕಳುಹಿದ ವಿಶಿಷ್ಟ ದೇವ ಮಾನವಿ."

"ಕಲಕತ್ತೆಯ ನಿರ್ಗತಿಕರಿಗೆ ಮದರ್ ತೆರೇಸಾ ದೇವತೆ."

"ಮದರ್ ತೆರೇಸಾ ಇರದಿದ್ದಲ್ಲಿ ಕಲ್ಕತ್ತೆಯ ಸಾವಿರಾರು ಅಸಹಾಯಕ ಮಕ್ಕಳು, ನಿರ್ಗತಿಕ ಮಹಿಳೆಯರು ಕಂಗಾಲಾಗುವರು."

ಡಾಕ್ಟರ್ ಲಂಬಾರ್ಡಿ ಸ್ವಲ್ಪ ಸೋತಂತಾಗಿ, "ಮದರ್ ತೆರೇಸಾರವರಿಗೆ ಎಪ್ಪತ್ತೊಂಭತ್ತು ವರ್ಷಗಳೆಂಬುದನ್ನು ತಾವು ಮರೆಯಬಾರದು. ಅವರ ಹೃದಯದ ಮೇಲೆ ಬಲವಾದ ಆಘಾತವಾಗಿದೆ. ಸದ್ಯ ನಾನು ಅವರ ಸ್ಥಿತಿಯ ಬಗ್ಗೆ ಯಾವ ಅಭಿಪ್ರಾಯವನ್ನು ಕೊಡಲಾರೆ" ಎಂದರು.

ಇಪ್ಪತ್ನಾಲ್ಕು ಗಂಟೆಯನಂತರ ಅವರು ಕಲ್ಕತ್ತೆಯ ವುಡ್‌ಲ್ಯಾಂಡ್ ನರ್ಸಿಂಗ್ ಹೋಮ್‌ಗೆ ತೀರಾ ಸಮೀಪಿಸಿದ್ದರು. ಮದರ್ ತೆರೇಸಾ ಅವರನ್ನು ನೋಡಿಕೊಳ್ಳಲು ಹಿಂದೂಸ್ತಾನದ ಅಗ್ರಗಣ್ಯ ಡಾಕ್ಟರುಗಳು ಇರುವರೆಂಬುದನ್ನು ಯೋಚಿಸುತ್ತ, ಅವರು ಬಲಗುಂದಿದಂತಾಗುತ್ತಿದ್ದರು. ಇದರಲ್ಲಿ ಅನೇಕ ಡಾಕ್ಟರುಗಳು ಪಾಶ್ಚಾತ್ಯ ವಾತಾವರಣದಲ್ಲಿಯೇ ಶಿಕ್ಷಣ ಪಡೆದವರು. ಹೀಗಿರು

ವಾಗ ಲಂಬಾರ್ಡಿ ಇಲ್ಲಿಯ ಉಳಿದ ಡಾಕ್ಟರುಗಳಿಗಿಂತ ಮೇಲೆಂದು ತಿಳಿಯುವುದು ಹೇಗೆ ಸಾಧ್ಯ. ಈ ಎಲ್ಲ ಡಾಕ್ಟರುಗಳ ಜೊತೆಗೆ ಅವರು ಫೋನ್ ಮೂಲಕ ಮಾತನಾಡಿದ್ದೇನೋ ನಿಜ. ಕಲ್ಕತ್ತೆಗೆ ಬರಲು ಅವರ ಒಪ್ಪಿಗೆಯನ್ನೂ ಪಡೆದಿದ್ದರು. ಆದರೂ ಅವರಿಗೆ ತಮ್ಮ ಅಭಿಪ್ರಾಯವನ್ನು ಹಿಂದೂಸ್ತಾನಿ ಡಾಕ್ಟರುಗಳು ಒಪ್ಪಿಯಾರೆ ಎಂಬ ವಿಚಾರ ಬಂದಿತ್ತು.

ಲಂಬಾರ್ಡಿಯವರು ವುಡ್ ಲ್ಯಾಂಡ್ ನರ್ಸಿಂಗ್ ಹೋಮ್ ಕಟ್ಟಡದ ಒಳಕ್ಕೆ ಬರುತ್ತಲೂ, ಡಾಕ್ಟರುಗಳ ತಂಡ ಅವರನ್ನು ಸ್ವಾಗತಿಸಿತು. ಸ್ವಲ್ಪ ಸಮಯ ಮಾತು ನಂತರ, "ಈ ತಂಡದ ಚಿಕಿತ್ಸಾ ವಿಧಾನದಲ್ಲಿ ಏನು ಕೊರತೆಯಾಗಿದೆಯೆಂದು ತಮಗನಿಸುವುದೆಂದು "ಡಾಕ್ಟರ್ ಲಂಬಾರ್ಡಿಯವರನ್ನು, ತಂಡದ ಡಾಕ್ಟರರು ಕೇಳಿದರು. ತಮ್ಮ ಅಭಿಪ್ರಾಯವನ್ನು ಕೊಡುವ ಮೊದಲು ಲಂಬಾರ್ಡಿ "ಮದರ್ ತೆರೇಸಾ ಅವರನ್ನು ಪರೀಕ್ಷಿಸುವೆನೆಂದೂ, ಈ ಸಂಬಂಧದಲ್ಲಿ ಬಂದ ಎಲ್ಲ ವರದಿಗಳನ್ನು ವಿಶ್ಲೇಷಿಸಿ ನೋಡುವೆನೆಂದೂ" ಹೇಳಿದರು. ಡಾಕ್ಟರುಗಳ ತಂಡ ಇದಕ್ಕೆ ಒಪ್ಪಿತು.

ಲಂಬಾರ್ಡಿ, ಹೃದಯ ಬೇನೆಯ ರೋಗಿಗಳನ್ನು ಇರಿಸುವ, ಮದರ್ ತೆರೇಸಾರನ್ನು ಮಲಗಿಸಿದ ಸ್ಪೆಷಲ್ ವಾರ್ಡಿಗೆ ಬಂದರು. ಮದರ್ ತೆರೇಸಾ ಮಾನವೀಯತೆಯ ಶಾಂತಿ-ಸಂರಕ್ಷಣೆಗಾಗಿ ನೋಬೆಲ್ ಪಾರಿತೋಷಿಕ ಪಡೆದಿದ್ದಾರೆ. ಅವರು ತಮ್ಮ ಜೀವನಾದ್ಯಂತ ಪ್ರಶಿಕ್ಷಣವನ್ನೂ ಹಿಂದೂಸ್ತಾನದ ಬಡಬಗ್ಗರ ಸೇವೆಯಲ್ಲಿ ಕಳೆದಿದ್ದಾರೆ ಎಂದು ಪತ್ರಿಕೆಗಳಲ್ಲಿ ಮಾತ್ರ ಓದಿದ್ದರು. ಇವತ್ತು ಅವರನ್ನು ಮೊದಲು ಬಾರಿಗೆ ನೋಡಿದರು. ಮದರ್ ತೆರೇಸಾ ಹಾಸಿಗೆಯ ಮೇಲ್ಭಾಗದ, ಇನ್ನೊಂದು ಪದರಿನಂತೆ ಕಾಣುವ ಅಸ್ತಿಪಂಜರದಂತಿದ್ದರು. ಅದರ ಮೇಲೆ ನೆರಿಗೆ ನೆರಿಗೆಯಾಗಿರುವ ತೊಗಲಿನ ವಸ್ತ್ರವನ್ನು ಹೊದಿಸಿದಂತಿತ್ತು. ಮುಖದ ಮೇಲೆ ಒಳಗಡೆಗೆ ಕುಸಿದು ಹೋದ ಎರಡು ವರ್ತುಳಗಳು. ಅದರಲ್ಲಿ ಹೊಳೆಯುತ್ತಿರುವ ಎರಡು ಕಣ್ಣುಗಳನ್ನು ಜೋಡಿಸಿದಂತಿತ್ತು. ಅದನ್ನು ಕಂಡು ಲಂಬಾರ್ಡಿಯವರಿಗೆ, ಸಾವಿರಾರು ಬತ್ತಿಹೋದ ಮುಖಗಳು ಅರಳಿದ ಗುಲಾಬಿಯಂತಾದುದು ಈ ಅದಿರದ ಶಿಲೆಯ ನೆರಳಿನಲ್ಲಿಯೆ! ಅನಂತ ನಿರ್ಗತಿಕ ಬಾಲಕಿಯರ ಮುಗುಳು ನಗು ಫಡಪಡಿಸುವ ಪತಾಕೆಯಾಗಿ ಹಾರುತ್ತಿರುವುದು, ಈ ನಿಶ್ಚಲ ಕಂಬದ ಮೇಲೆಯೆ!! ಎಂದು ಯೋಚಿಸಿದರು.

"ಭೂಮಂಡಲದ ಸುತ್ತೆಲ್ಲ ರಂಗುರಂಗಿನ ಇಂದ್ರಧನುವನ್ನು ಮೂಡಿಸಿದವಳು ಈ ಮಾಯಾವಿನಿಯೇ! ಈ ಬಡಕಲು ಶರೀರದ ಮಹಿಳೆಯೇ ಮಾನವೀಯ ಹೂದೋಟದ ಧೀಮಂತ ವ್ಯಕ್ತಿಯಿವಳು. ಇವಳಿರದಿದ್ದರೆ ಪ್ರೇಯಸಿಯ ಕಣ್ಣುಗಳಂತೆ ಅರಳಿದ ಹೂಗಳೆಲ್ಲ ರೋದಿಸುವವು. ನಿಜ" ಎಂದುಕೊಂಡು ಲಂಬಾರ್ಡಿ ಉದ್ಗರಿಸಿದರು.

ಅವರು ಮದರ್ ತೆರೇಸಾರನ್ನು ಪರೀಕ್ಷಿಸಿದರು. ರೋಗಿಗಳನ್ನು ಪರೀಕ್ಷಿಸುವಾಗ ಕೇಳುವ ಎಲ್ಲ ಸಾಮಾನ್ಯ ಪ್ರಶ್ನೆಗಳನ್ನೂ ಕೇಳಿದರು. ಪರೀಕ್ಷಿಸುತ್ತಿರುವಾಗ, ಮದರ್ ತೆರೇಸಾ ಲಂಬಾರ್ಡಿಯವರಿಗೆ ಮುನ್ನೆಚ್ಚ-ರಿಕೆ ಕೊಟ್ಟರು. ಇದನ್ನು ಕೊಡುವುದು

ಅವರ ತಿಳುವಳಿಕೆಗೆ ಅವಶ್ಯವೆನಿಸಿತ್ತು. ಮೊದಲನೆಯದಾಗಿ ಅವರು ಕಲ್ಕತ್ತೆಯಿಂದ ಹೊರಗೆ ಹೋಗಲು ಸಿದ್ಧರಿಲ್ಲ. ಪೂರ್ಣ ಆರೋಗ್ಯವಂತರಾದ ಮೇಲೆಯೇ ಅವರು ಕಲ್ಕತ್ತೆಯಿಂದ ಹೊರಗೆ ಹೊರಡುವರು. ಎರಡನೆಯದಾಗಿ, ಅವರ ಚಿಕಿತ್ಸೆಯ ಸಂಬಂಧ ಈಗ ಬಂದಿರುವ ಅಮೇರಿಕದ ಡಾಕ್ಟರ್ ಮತ್ತು ಈಗ ತಮ್ಮನ್ನು ನೋಡಿಕೊಳ್ಳುತ್ತಿರುವ ಡಾಕ್ಟರ್ ತಂಡದ ನಡುವೆ ಯಾವ ಭಿನ್ನಾಭಿಪ್ರಾಯವೂ ಬರಕೂಡದು.

ಮದರ್ ತೆರೇಸಾ ಅವರನ್ನು ಕಲಕತ್ತೆ ಅಥವ ಹಿಂದುಸ್ತಾನದಿಂದ ಹೊರಗೆ ಕರೆದೊಯ್ಯಲು ಲಂಬಾರ್ಡಿ ಬಂದಿರಲಿಲ್ಲ. ಅದರಿಂದಾಗಿ ಮುನ್ನೆಚ್ಚರಿಕೆಯ ಮೊದಲಿನ ಭಾಗ ಅವರಿಗೆ ಮಹತ್ವದ್ದೆನಿಸಲಿಲ್ಲ. ಆದರೆ ಡಾಕ್ಟರ ತಂಡಕ್ಕೂ ತಮಗೂ ಭಿನ್ನಾಭಿಪ್ರಾಯವಾಗಬಾರದೆಂಬ ಎರಡನೆಯ ಎಚ್ಚರಿಕೆಯಿಂದ ಲಂಬಾರ್ಡಿಯವರಿಗೆ ಸ್ವಲ್ಪ ಆತಂಕ ಆವರಿಸಿದಂತಾಯಿತು.

ಮದರ್ ತೆರೇಸಾಗೆ ಬಲವಾದ ಹೃದಯಾಘಾತವಾದಾಗ, ಅವರ ಹೃದಯದ ಚಲನೆ ಎಲ್ಲಿ ನಿಂತುಹೋಗುವುದೆಂದು, ಕಾರ್ಡಿಯಾಲಜಿಸ್ಟರು ಚಿಂತೆಗೊಳಗಾಗಿ ಮುನ್ನೆಚ್ಚರಿಕೆಗಾಗಿ ಪೇಸ್‌ಮೇಕರ್ ಅಂಟಿಸಿದ್ದರು. ಪೇಸ್‌ಮೇಕರ್ ಧಾತುವಿನ ಒಂದು ತಂತಿಯಿಂದ ಕೂಡಿತ್ತು. ಆ ತಂತಿಯನ್ನು ಮದರ್ ತೆರೇಸಾ ಅವರ ಎಡಬದಿಯ ದೇಹದ ಒಳಕ್ಕೆ ಸೇರಿಸಿ, ಅವರ ಹೃದಯಕ್ಕೆ ಸಂಪರ್ಕಿಸಲಾಗಿತ್ತು. ಈಗಿನವರೆಗೆ ಪೇಸ್‌ಮೇಕರ್ ಆನ್ ಮಾಡುವ ಸಂದರ್ಭವೇ ಬಂದಿರಲಿಲ್ಲ. ಏಕೆಂದರೆ ಹೃದಯದ ಚಲನೆ ನಿಂತೇ ಇರಲಿಲ್ಲ. ಅಕಸ್ಮಾತ್ ಚಾಲನೆ ನಿಂತರೆ ಕೂಡಲೇ ಈ ಕೃತ್ರಿಮ ರೀತಿಯಿಂದ ಹೃದಯ ಚಾಲನೆಯನ್ನು ಮತ್ತೆ ಪ್ರಾರಂಭಿಸಬಹುದೆಂದು, ಕೇವಲ ಮುಂಜಾಗ್ರತೆಗಾಗಿ ಅದನ್ನು ಜೋಡಿಸಲಾಗಿತ್ತು. ಈ ಎಲ್ಲ ಅಂಶವನ್ನು ಲಂಬಾರ್ಡಿ ಗಮನಿಸಿದ್ದರು.

ಅವರು ತಮಗೆ ದೊರೆತ ಎಲ್ಲ ಅಂಶಗಳನ್ನು ವಿಶ್ಲೇಷಿಸಿದರು. ಪಡೆದ ಎಲ್ಲ ವರದಿಗಳನ್ನು ಕೂಲಂಕಷವಾಗಿ ನೋಡಿದರು. ಜ್ವರ ಇಳಿಯದಿದ್ದ ಬಗ್ಗೆ ಅವರು ತಮ್ಮ ಮನೆಯಿಂದ ಈ ಡಾಕ್ಟರ್ ತಂಡದೊಡನೆ ಮಾತನಾಡಿ ತಿಳಿದುಕೊಂಡ ಎಲ್ಲ ಕಾರಣಗಳೂ ಒಂದೊಂದಾಗಿ ಕೆಲಸಕ್ಕೆ ಬಾರದಂತಾದವು. ಒಂದೇ ಒಂದು ಶಂಕೆ ಮಾತ್ರ ಉಳಿದುಕೊಂಡಿತ್ತು.

ಅವರು ಎಲ್ಲ ಡಾಕ್ಟರುಗಳ ಸಭೆ ಕರೆದು ತಮ್ಮ ವರದಿಯನ್ನು ಒಪ್ಪಿಸಿದರು. ದಿನ ದಿನಕ್ಕೂ ಕುಂಠಿತವಾಗುತ್ತಿರುವ ಮದರ್ ತೆರೇಸಾ ಅವರ ಆರೋಗ್ಯದ ವಿಶ್ಲೇಷಣೆ ಮಾಡುತ್ತ, ಆ ಪೇಸ್‌ಮೇಕರ್‌ನಿಂದ ಅವರ ಹೃದಯಕ್ಕೆ ಸಂಪರ್ಕಿಸಿದ ತಂತಿಯನ್ನು ಅವರ ದೇಹದ ಒಳಭಾಗ ಒಪ್ಪುತ್ತಿಲ್ಲ. ಜ್ವರ ಏರುತ್ತಿರುವುದು ಈ ತಂತಿಯ ಕಾರಣದಿಂದ. ಏಕೆಂದರೆ ಅವರ ರಕ್ತದಲ್ಲಿರುವ ಬಿಳಿಯ ಜೀವಾಣುಗಳು ಅವರ ದೇಹದಲ್ಲಿ ಹೋಗಿಸಿದ ಆ ತಂತಿಯನ್ನು ಕಿತ್ತೊಗೆಯುವ ಪ್ರಯತ್ನದಲ್ಲಿ, ಎದುರಿಸಿ ಎದುರಿಸಿ ನಿಶ್ಶಕ್ತವಾಗುತ್ತ ಹೊರಟಿವೆ. ಈ ಬಿಳಿಯ ಜೀವಾಣುಗಳು ದುರ್ಬಲವಾಗಿ ನಾಶವಾದವೆಂದರೆ, ಹೊರಗಿನ ಪರಿಣಾಮಗಳನ್ನು ಎದುರಿಸುವ ಶಕ್ತಿಯೇ ಹೊರಟುಹೋಗುವುದು. ಆಗ ಈ ತೀವ್ರ ಜ್ವರದ ಶಾಖ ಅವರ ಅಸ್ತಿತ್ವದ ಮೇಲೆ

ಸ್ಫೂರ್ತಿ ಅವರಿಸಿ ಅವರನ್ನು ಉದ್ವಿಗ್ನಗೊಳಿಸಿ ದೇಹವನ್ನು ಚಿರಕಾಲ ತಣ್ಣಗಾಗಿಸುವುದು. ಅದಕ್ಕಾಗಿ ಎಲ್ಲ ಡಾಕ್ಟರುಗಳನ್ನು ಅವರು ಮದರ್ ತೆರೇಸಾ ಅವರ ದೇಹದಿಂದ ಆ ಪೇಸ್‌ಮೇಕರ್ ಬೇರ್ಪಡಿಸಲು ತಮ್ಮ ಮಾತಿಗೆ ಅನುಮತಿ ನೀಡಬೇಕೆಂದು ಕಳಕಳಿಯಿಂದ ಬೇಡಿಕೊಂಡರು ವಿದೇಶಿ ಆಸ್ಪತ್ರೆಗಳಲ್ಲೂ ಈ ಬಗೆಯ ಘಟನೆಗಳು ಆಗಾಗ ಬರುತ್ತಿರುತ್ತವೆ. ಎಂದೂ ತಮ್ಮ ಅನುಭವದ ಆಧಾರದಮೇಲೆ ಹೇಳಿದರು. ಆದರೆ ತಂಡದ ಹೃದಯರೋಗ ಚಿಕಿತ್ಸಕ ನಿಷ್ಣಾತ ಡಾಕ್ಟರುಗಳು ಈ ಗಂಡಾಂತರ ವನ್ನು ಎದುರಿಸಲು ಸಿದ್ಧರಿರಲಿಲ್ಲ. ಏಕೆಂದರೆ ಅವರ ತರ್ಕ, ಮದರ್ ತೆರೇಸಾ ಅವರ ಹೃದಯದ ಮೇಲೆ ದೊಡ್ಡ ಆಘಾತವಾಗಿದೆ. ಅವರು ಇನ್ನೂ ಆಪತ್ತಿನಿಂದ ಪಾರಾಗಿಲ್ಲ. ಆಕಸ್ಮಾತ್ತಾಗಿ ಅವರ ಹೃದಯ ಕ್ರಿಯೆ ನಿಂತುಬಿಟ್ಟರೆ, ಎಲ್ಲ ಡಾಕ್ಟರುಗಳು ಕೈ ಕೈ ಹಿಸುಕಿಕೊಳ್ಳಬೇಕಾಗುತ್ತದೆ. ಈ ಪೇಸ್ ಮೇಕರ್ ಇದ್ದರೆ, ಅದನ್ನು ತತ್‌ಕ್ಷಣ ಆನ್ ಮಾಡಬಹುದು. ಅದು ಅವರ ಹೃದಯ ಕ್ರಿಯೆಯನ್ನು ನಿಲ್ಲಿಸದಂತೆ ಮುಂದುವರಿಸಿಕೊಂಡು ಹೋಗಬಹುದು. ಈ ಅಮೆರಿಕೆಯ ಡಾಕ್ಟರ್ ಮದರ್ ತೆರೇಸಾ ನೀಡಿರುವ ಎಚ್ಚರಿಕೆಯನ್ನು ಅಲ್ಲಗಳೆಯುತ್ತಿದ್ದಾನೆ. ಆದರಿಂದಾಗಿ ಅವರು ಪೇಸ್‌ಮೇಕರ್ ದೇಹದಿಂದ ತೆಗೆಯಬೇಕೆಂಬ ಲಂಬಾರ್ಡಿಯವರ ಅಭಿಪ್ರಾಯವನ್ನು ವಿರೋಧಿಸಿದರು. ಹಾಗೂ ಮದರ್ ತೆರೇಸಾ ಅವರ ಜ್ವರ ಕಡಿಮೆಯಾಗದಿದ್ದರೆ ಆ್ಯಂಟಿ ಬಯೋಟಿಕ್ಸ್ ಉಪಯೋಗ ಮಾಡಬೇಕು. ಅಥವಾ ಮತ್ತೆ ಏನಾದರು ಔಷಧಿ ಬದಲಾಯಿಸಿ ಕೊಡಬೇಕೆಂಬ ಬಗ್ಗೆ ಚರ್ಚೆ ನಡೆಯಬೇಕೆಂಬ ನಿರ್ಧಾರ ಮಾಡಿದರು.

ಲಂಬಾರ್ಡಿ ನಿರುತ್ತರರಾಗಿ, ಬಹುಮತದ ಅಭಿಪ್ರಾಯದಂತಾಗಲೆಂದರು. ಜ್ವರವನ್ನಿಳಿಸಲು ಅನೇಕ ಉಪಾಯಗಳನ್ನು ಸೂಚಿಸಲಾಯಿತು.

ಐದು ದಿನಸ ಕಳೆದವು. ಮದರ್ ತೆರೇಸಾ ಅವರ ಏರುತ್ತಿರುವ ಜ್ವರ ಇಳಿಯಲಿಲ್ಲ. ಶಾಖದಿಂದ ಶರೀರ ತಪ್ತವಾಗುತ್ತ ನಡೆದಿತ್ತು ದೇಹ ಮತ್ತಷ್ಟೂ ಶಕ್ತಿಹೀನವಾಗತೊಡಗಿತು. ವ್ಯಾಧಿ ಹೋಗಲಾಡಿಸಲು ಹೆಣಗುತ್ತಿದ್ದ ಬಿಳಿ ಜೀವಾಣುಗಳು ರಕ್ತದಲ್ಲಿ ಮುಸುಕು ಮುಸುಕಾಗಿ ಕಾಣತೊಡಗಿದುವು. ಈ ಐದು ದಿವಸಗಳು ಲಂಬಾರ್ಡಿಯವರಿಗೆ ದೊಡ್ಡ ಪರೀಕ್ಷೆಯ ಮತ್ತು ಕಳವಳದ ದಿವಸಗಳಾಗಿದ್ದುವು. ಮದರ್ ತೆರೇಸಾ ಅವರು ತಮ್ಮ ಮೊದಲ ವಾಕ್ಯದಿಂದ ಈಗ ವಾಸಿಸುತ್ತಿರುವ ಭೂಮಿಯ ಒಂದು ಭಾಗ ತಾವಾಗಿರುವರೆಂದೂ, ಮತ್ತು ಯಾವ ಜನರ ಮಧ್ಯೆ ತಾವು ಉಸಿರಾಡುತ್ತಿರುವರೊ, ತಮ್ಮ ಕೆಲಸಗಳನ್ನು ಪೂರ್ಣ ಮಾಡುತ್ತಿರುವರೊ ಆ ಜನರಿಗೆ ತಮ್ಮ ಪ್ರೀತಿ, ವಿಶ್ವಾಸ, ತ್ಯಾಗ, ಬಲಿದಾನ ಕಡಿಮೆಯಾಗಿದೆ ಎಂದೆನಿಸಬಾರದೆಂದು, ಭಿನ್ನಾಭಿಪ್ರಾಯದ ಬಗ್ಗೆ ಒತ್ತುಕೊಟ್ಟು ಎಚ್ಚರಿಸಿದ್ದಾರೆಂದು, ಲಂಬಾರ್ಡಿಯವರಿಗೆ ಅನಿಸಿತು.

ಲಂಬಾರ್ಡಿಯವರು ತಾವೊಬ್ಬ ವೃತ್ತಿಪರ ಡಾಕ್ಟರರೆಂದು ನಿರ್ಧರಿಸಿ, ತಮ್ಮ ರೋಗಿಯ ಪರವಾಗಿ ಅವರದೇ ಆದ ಕೆಲವು ಕರ್ತವ್ಯಗಳಿವೆ, ಮದರ್ ತೆರೇಸಾರಂಥ ರೋಗಿಗಳಿಗಂತೂ ಆ ಕರ್ತವ್ಯಗಳು ಇನ್ನೂ

ಮಹತ್ವದ್ದಾಗಿವೆಯೆಂದುಕೊಂಡರು. ಆ ಕರ್ತವ್ಯಗಳನ್ನು ಪೂರ್ಣ ಮಾಡಿದಿದ್ದರೆ ಇಡೀ ಜೀವಮಾನವೆಲ್ಲ ಪಶ್ಚಾತ್ತಾಪ ಪಡಬೇಕಾದೀತೆಂದು ಅಂದುಕೊಂಡರು.

ಐದನೇ ದಿವಸ ಲಂಬಾರ್ಡಿ ತಮ್ಮಲ್ಲಿ ಧೈರ್ಯ ತಂದುಕೊಂಡರು. ತಮ್ಮ ಧ್ವನಿಯಲ್ಲಿ ಅಚಲ ವಿಶ್ವಾಸವನ್ನು ತುಂಬಿಕೊಂಡು, ಮದರ್ ತೆರೇಸಾ ಅವರಿಗೆ ವಿಪರೀತ ಜ್ವರ ಈ ತಂತಿ ಇರುವುದರಿಂದಲೇ ಇದೆಯೆಂಬ ತಮ್ಮ ಮೊದಲಿನ ಅಭಿಪ್ರಾಯಕ್ಕೆ ಅಂಟಿಕೊಂಡರು. ಡಾಕ್ಟರ್ ತಂಡವನ್ನು ಉದ್ದೇಶಿಸಿ, "ತೆರೇಸಾ ಅವರ ಶರೀರದಿಂದ ಪೇಸ್ ಮೇಕರ್ ತಂತಿಯನ್ನು ತೆಗೆಯುತ್ತಲು ಅವರ ಹೃದಯಕ್ರಿಯೆ ಎಲ್ಲಿ ನಿಂತು ಹೋಗಿ, ಅವರು ಮರಣ ಹೊಂದುವರೆಂಬ ಭಯ ಸದಾ ತಮಗಿದೆಯೆಂಬುದು ನನಗೆಗೊತ್ತು. ಆದರೆ, ಆ ಪೇಸ್‌ಮೇಕರ್ ತೆಗೆಯದಿದ್ದಲ್ಲಿ ಅವರು ಜೀವಂತ ಉಳಿಯಲಾರರೆಂದು ನಾನು ದೃಢವಾಗಿ ಹೇಳುತ್ತೇನೆ. ಒಂದು ಕಡೆಗೆ ತಮ್ಮ ಸಂಶಯವಿದೆ. ಇನ್ನೊಂದು ಕಡೆ ನನ್ನ ದೃಢವಿಶ್ವಾಸವಿದೆ. ತಾವು ನನ್ನ ಅಭಿಪ್ರಾಯಕ್ಕೆ ಅನುಮತಿಸುವುದು ಬಿಡುವುದು ತಮ್ಮ ಅಧಿಕಾರಕ್ಕೆ ಸೇರಿದೆ. ಇದರಿಂದ ನನಗೇನು ಹಾನಿಯಾಗದು. ನಾನಂತೂ ಇಲ್ಲಿಂದ ಬೇಗನೆ ಹೊರಟು ಹೋಗುವೆ. ಆದರೆ ವಿಚಾರಮಾಡಿ ನೋಡಿ. ಯಾವ ಸ್ಥಿತಿಯಲ್ಲೂ ಹಾನಿ ತಮಗೇ ಆಗುವುದು. ತಮ್ಮ ಜನಾಂಗ, ತಮ್ಮ ದೇಶ ಪ್ರಪಂಚದ ಒಬ್ಬ ಅತಿದೊಡ್ಡ ಪವಿತ್ರ ದೇವತೆಯಂತಿರುವ ವ್ಯಕ್ತಿಯನ್ನು ಕಳೆದುಕೊಂಡೀತು. ತಮ್ಮ ಚಿಕಿತ್ಸೆಯ ಮೇಲೆ ಅಪಾರ ವಿಶ್ವಾಸವಿಟ್ಟಿರುವ ತಮ್ಮ ದೇಶದ ಜನಕ್ಕೆ ಬಹಳ ದೊಡ್ಡ ನಿರಾಶೆಯಾದೀತು. ಜನತೆ ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆ ತರುವಂತೆ ತಾವು ವರ್ತಿಸುವಿರಾ ?" ಎಂದು ಕೇಳಿದರು.

ಲಂಬಾರ್ಡಿ ತಮ್ಮ ಮಾತು ಮುಗಿಸುತ್ತಲೂ, ಡಾಕ್ಟರ್ ತಂಡ ಮದರ್ ತೆರೇಸಾ ಅವರ ಶರೀರದಿಂದ ಪೇಸ್‌ಮೇಕರ್ ತಂತಿ ತೆಗೆಯುವುದಾಗಿ ನಿರ್ಧರಿಸಿತು.

ಇಪ್ಪತ್ನಾಲ್ಕು ಗಂಟೆಗಳಲ್ಲಿ ತೆರೇಸಾರ ಜ್ವರ ಇಳಿದು ಹೋಯಿತು. ನಲವತ್ತೆಂಟು ಗಂಟೆಗಳೊಳಗೆ ಅವರ ಶರೀರದಲ್ಲಿಯ ಬಿಳಿಯ ಜೀವಾಣುಗಳು ಮತ್ತೆ ಶಕ್ತಿಯುತವಾದವು.

ಡಾಕ್ಟರ್ ಲಂಬಾರ್ಡಿ, ಮದರ್ ತೆರೇಸಾರ ಎದುರು ನಿಂತುಕೊಂಡು, "ಪ್ರಪಂಚದಲ್ಲಿ ತಮ್ಮ ಅಸ್ತಿತ್ವ ಒಬ್ಬ ಪವಿತ್ರ ದೇವದೂತರಂತಿದೆ. ತಮ್ಮ ಜೀವನ ಬಹಳ ಒಳ್ಳೆಯ ಮತ್ತು ಮಹಾನ್ ಉದ್ದೇಶವನ್ನು ಹೊಂದಿದೆ. ಈ ಒಳ್ಳೆಯ ಮಹಾನ್ ಉದ್ದೇಶದ ದಾರಿಯಲ್ಲಿ ಪ್ರತಿಬಂಧಕ ಬಂದಾಗ, ನನಗೊಂದು ಚಿಕ್ಕ ಪಾತ್ರಮಾಡಿ, ಸೇವೆಮಾಡುವ ಅವಕಾಶ ಸಿಕ್ಕಿದುದು ನನಗೆ ತುಂಬಾ ಸಂತೋಷವಾಗಿದೆ. ತಮ್ಮ ಜ್ವರ ಇಳಿದಿದೆ. ನಾನೀಗ ಮರಳಿ ಹೊರಡುತ್ತಿದ್ದೇನೆ. ತಮ್ಮ ಶರೀರದ ಇತರ ರೋಗಾಂಶಗಳನ್ನು ನೋಡಿಕೊಳ್ಳಲು ಅತ್ಯಂತ ಶ್ರೇಷ್ಠ ಡಾಕ್ಟರುಗಳ ತಂಡ ತಮ್ಮೊಂದಿಗಿದೆ" ಎಂದು ನುಡಿದರು.

ಅವರು ನ್ಯೂಯಾರ್ಕ್ ಜೇ. ಎಫ್. ಕೆನಡಿ ಏರ್‌ಪೋರ್ಟ್ ಲೌಂಜ್ ತಲುಪಿ

ಹಾಗ, ಪತ್ರಿಕೆಯ ವರದಿಗಾರನೊಬ್ಬ, "ತಮ್ಮ ಪ್ರವಾಸದ ಬಗ್ಗೆ ಅನಿಸಿಕೆಗಳೇನೆಂದು" ಅವರನ್ನು ಕೇಳಿದ.

ಡಾಕ್ಟರ್ ಲಂಬಾರ್ಡಿ ಆ ವರದಿಗಾರನನ್ನು ಗುರುತಿಸಿದರು. ಕೆನ್ಯಾದಿಂದ ಹಿಂದೆ ಅವರು ವಾಪಸ್ಸು ಬಂದಾಗಲೂ ಆ ವರದಿಗಾರ ಇಂಥ ಪ್ರಶ್ನೆಯನ್ನೇ ಕೇಳಿದ್ದ. ಲಂಬಾರ್ಡಿ ಮುಗುಳುನಗುತ್ತ, "ನನ್ನ ದೃಷ್ಟಿಕೋನ ಈಗ ಬದಲಾಗಿದೆ. ನಾವು ಇರಲು ಈ ಜಗತ್ತನ್ನು ಇನ್ನೂ ಸುಂದರವಾಗಿ ಮಾಡಬಲ್ಲೆವು. ಆದರೆ ಇಂಥ ಬದಲಾವಣೆಯನ್ನು ತರಬೇಕಾದರೆ, ಪ್ರಚಂಡ ದೃಢವಿಶ್ವಾಸವಿರುವ, ಪ್ರಬಲ ಇಚ್ಛಾಶಕ್ತಿಯಿರುವ, ಬಹುಶ್ರೇಷ್ಠ ಜನರ ಕಾರ್ಯಸಾಧನೆಯನ್ನೂ ಸೇವೆಯನ್ನೂ ಸಂಪಾದಿಸುವುದು ಅತ್ಯಗತ್ಯವಿದೆ. ಮದರ್ ತೆರೇಸಾ ಅವರು ಇಂಥ ಒಬ್ಬ ಉನ್ನತ. ಪಾವನ ಮಹಿಳೆ" ಎಂದು ನುಡಿದರು.



ದೇವರೇ ರೋಗಿಯ ರೂಪದಲ್ಲಿ ಮುಂದಿದ್ದಾನೆ ನಾವು ಮಾಡುವ ಸೇವೆ ದೇವರಿಗೆ ಮಾಡುವ ಸೇವೆ.

—ಮದರ್ ತೆರೇಸಾ

ಆಧುನಿಕ ಸಂವಹನ ಮಾಧ್ಯಮಗಳು

ಜಿ. ಕುಮಾರಪ್ಪ
ಅಸಿಸ್ಟೆಂಟ್ ಲೈಬ್ರೇರಿಯನ್
ನ್ಯಾಷನಲ್ ಲೈಬ್ರರಿ
ಕಲ್ಕತ್ತ-೭೦೦೦೨೭

ಸಂಪರ್ಕ ಎಂದರೆ ವ್ಯಕ್ತಿ-ವ್ಯಕ್ತಿ ನಡುವಿನ ಸಂಬಂಧ ಅಥವಾ ಸೇರಿಕೆ. ಸಂವಹನ ಎಂದರೆ ವ್ಯಕ್ತಿ-ವ್ಯಕ್ತಿ ನಡುವೆ ಯುಕ್ತ ಮಾಧ್ಯಮದ ಮೂಲಕ ಅಭಿಪ್ರಾಯದ ಹರಿವು. ಸಂಪರ್ಕ, ಸಂವಹನ ಅವಿನಾಸಂಬಂಧಿಗಳೋ ಎಂಬ ಕಾಲ ಹಿಂದಿನದು. ಈಗ ? ಈ ಲೇಖನ ವಿವರಿಸುತ್ತದೆ ಸಂಪರ್ಕ-ಸಂವಹನ ಕ್ರಾಂತಿ.

ಅಶೋಕ್ ಕುಮಾರ್ ಮತ್ತು ಅವರ ಪತ್ನಿ ಮೀರಾ ಅವರು ಮುಂಬಯಿನ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಕೊಂಡುಬಿಟ್ಟಿದ್ದಾರೆ. ಕುಮಾರ್ ತಮ್ಮ ಬಾಸ್ ನೀಡುತ್ತಿರುವ ಪಾರ್ಟಿಗೆ ಹೋಗಬೇಕಾಗಿದೆ. ಹೀಗಾಗಿ ಅವರಿಗೆ ಉದ್ವೇಗ. ಈ ಪಾರ್ಟಿಗೆ ತಡವಾಗಿ ಹೋಗುವುದು ಇಷ್ಟವಿಲ್ಲ. ಅವರ ಉದ್ವೇಗ ನೋಡಿ, ಮೀರಾ ಹೇಳುತ್ತಾರೆ. "ಅವರಿಗೆ ಫೋನ್ ಮಾಡಿ ಹೇಳಿಬಿಡಿ" ಕುಮಾರ್ ತಮ್ಮ ಸೆಲ್ಯುಲರ್ ಫೋನ್ ತೆಗೆದುಕೊಂಡು ಬಾಸ್ ಮನೆಗೆ ಫೋನ್ ಮಾಡಿ ತಮ್ಮ ಪರಿಸ್ಥಿತಿ ಹೇಳಿದರು. ಎಲ್ಲವನ್ನೂ ಕೇಳಿಸಿಕೊಂಡು ಬಾಸ್ ಪತ್ನಿ, "ಪರವಾ ಇಲ್ಲ, ನೀವು ಬರುವರೆಗೆ ಕಾಯುತ್ತೇವೆ" ಎಂದರು. ಕುಮಾರ್ ಅವರ ಮನಸ್ಸಿಗೆ ಅಷ್ಟೇ ನೆಮ್ಮದಿ.

ಚೆನ್ನೈನ ಚರ್ಮದ ರಫ್ತು ಕಂಪನಿಯೊಂದರ ಡೈರೆಕ್ಟರ್ ಆರೀಫ್ ಖಾನ್‌ರವರು ಲಂಡನ್, ನ್ಯೂಯಾರ್ಕ್ ಮತ್ತು ಟೋಕಿಯೋಗಳಲ್ಲಿರುವ ತಮ್ಮ ಪ್ರತಿನಿಧಿಗಳನ್ನು ಕೂಡಲೇ ಸಂಪರ್ಕಿಸಬೇಕಾಗಿದೆ. ಅವರೆಲ್ಲರನ್ನೂ ಯಾವುದಾದರೊಂದು ನಗರಕ್ಕೆ ಕರೆಸುವಷ್ಟು ಸಮಯವೂ ಇಲ್ಲ. ಖಾನ್‌ರವರು ಸೀದಾ ವಿದೇಶ ಸಂಚಾರ ನಿಗಮದ ಚೆನ್ನೈನ ಕಛೇರಿಗೆ ಹೋಗಿ, ವೀಡಿಯೋ ಕಾನ್ಫರೆನ್ಸ್ ವ್ಯವಸ್ಥೆ ಮಾಡುತ್ತಾರೆ. ಚೆನ್ನೈನಲ್ಲಿ ಕುಳಿತುಕೊಂಡೇ ಮೂರೂ ನಗರಗಳ ತಮ್ಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಒಂದು ಗಂಟೆಯೊಳಗಾಗಿ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಂಡರು.

ರೆಲಿಯಬಲ್, ಬೆಂಗಳೂರಿನ ಕೊರಿಯರ್ ಕಂಪನಿ, ತಮ್ಮ ಉದ್ಯೋಗಿಯೊಬ್ಬರೊಂದಿಗೆ ಕೂಡಲೇ ಸಂಪರ್ಕ ಬೆಳೆಸಬೇಕಾಗಿದೆ. ತಮ್ಮ ಗಿರಾಕಿಯೊಬ್ಬರಿಂದ

ಆಧಾರ: ೧೯೯೬ನೇ ಆಗಸ್ಟ್‌ನ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಚಂದ್ರಗುಪ್ತ ಅಮ್ರಿತ್‌ಕರ್ ಅವರ 'ದಿ ಫ್ಯೂಚರ್ ಈಸ್ ಹಿಯರ್' ಲೇಖನ.

ಒಂದು ಪ್ಯಾಕೆಟನ್ನು ಕೂಡಲೇ ಪಡೆಯಬೇಕಾಗಿದೆ. ಆದರೆ, ಆಗ ಊಟದ ವಿರಾಮ. ಕಂಪನಿಗೆ ತಮ್ಮ ಉದ್ಯೋಗಿ, ರಾಕೇಶ್ ಸಿಂಗ್ ಎಲ್ಲಿದ್ದಾರೆ ಎಂದು ತಿಳಿಯದು. ಕಂಪನಿಯ ಇನ್ನೊಬ್ಬ ಉದ್ಯೋಗಿ ಒಂದು ಫೋನ್ ಮಾಡುತ್ತಾರೆ. ಒಂದು ಉಡುಪಿ ಹೋಟೆಲ್‌ನಲ್ಲಿ ಊಟ ಮಾಡುತ್ತಿದ್ದ ರಾಕೇಶ್‌ಸಿಂಗ್ ಅವರ ಬೆಲ್ಟಿನಲ್ಲಿದ್ದ ಪೇಜರ್ ಬೀಪ್ ಸದ್ದು ಮಾಡಿತು. ಆ ಪೇಜರ್ ನೋಡಿದ ಕೂಡಲೇ ಸಿಂಗ್‌ಗೆ ತಾನು ಎಲ್ಲಿಗೆ ಹೋಗಬೇಕೆನ್ನುವುದು ತಿಳಿಯಿತು.

ಇಂಥ ಚಿತ್ರಗಳನ್ನು ಕೆಲವು ವರ್ಷಗಳ ಹಿಂದೆ ನಾವು ಭಾರತದಲ್ಲಿ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಆದರೆ ಜಗತ್ತಿನಾದ್ಯಂತ ಹರಡಿದ್ದ ಈ ತಂತ್ರಜ್ಞಾನಗಳು ಭಾರತವನ್ನು ಪ್ರವೇಶಿಸಿರಲಿಲ್ಲ. ಆದರೆ ೧೯೯೦ ರ ದಶಕದಲ್ಲಿ ಭಾರತವು ತನ್ನನ್ನು ತಾನು ಜಾಗತಿಕ ಮಾರುಕಟ್ಟೆಗೆ ತೆರೆದುಕೊಂಡಾಗ, ಪರಿಸ್ಥಿತಿ ಸಂಪೂರ್ಣವಾಗಿ ಬದಲಾಯಿತು. ಜಗತ್ತಿನ ಎಷ್ಟೋ ಬಗೆಯ ಸಂವಹನ ಮಾಧ್ಯಮಗಳೂ ನಮಗಿನ್ನೂ ತಲುಪಬೇಕಾಗಿದೆ. ಆದರೆ, ಆ ಮಾಧ್ಯಮಗಳು ನಮಗೆ ತಲುಪುವ ದಿನಗಳು ದೂರವೇನೂ ಇಲ್ಲ.

ಈಗ ನಮ್ಮ ದೇಶದಲ್ಲಿ ದೊರೆಯುತ್ತಿರುವ ಕೆಲವು ಸೌಲಭ್ಯಗಳನ್ನು ತಿಳಿಯುವಾ:

ಸೆಲ್ಯುಲರ್ ಫೋನ್‌ಗಳು

ದೇಶದಲ್ಲಿ ಬಹಳ ವೇಗವಾಗಿ ಬೆಳೆಯುತ್ತಿರುವ ಸಂವಹನ ತಂತ್ರಜ್ಞಾನದಲ್ಲಿ ಇದು ಅತಿ ಮುಖ್ಯವಾದುದು. ಈ ವರ್ಷದ ಅಂತ್ಯದಲ್ಲಿ ದೇಶದ ಎಲ್ಲ ಪ್ರಮುಖ ನಗರಗಳಲ್ಲಿ ಈ ಸೌಲಭ್ಯ ದೊರೆಯಲಿದೆ. ಸದ್ಯದಲ್ಲಿ ಇದು ದೊಡ್ಡಸ್ತಿಕೆಯ ಲಕ್ಷಣ ಎನ್ನಿಸಿದರೂ ಸಹ, ಟೆಲಿಫೋನ್ ಸೌಲಭ್ಯ ದೊರೆಯದ ಕಡೆಗಳಲ್ಲಿ ಪ್ರವಾಸ ಮಾಡುವ ಜನರಿಗೆ ಇದು ಅತ್ಯುಪಯುಕ್ತವಾದುದು. ಹಾಂಕ್‌ಕಾಂಗ್‌ನಲ್ಲಂತೂ, ಮನೆ ಕಟ್ಟುವ ಕೆಲಸಗಾರರೂ ಸಹ ಸೆಲ್ಯುಲರ್ ಫೋನ್ ಬಳಸುತ್ತಾರೆ. ಇದಿಲ್ಲದಿದ್ದಲ್ಲಿ ಬಹಳ ತೊಂದರೆ ಎನ್ನುವುದು ಅವರ ವಾದ.

ಈಗ ಈ ಫೋನ್‌ಗಳ ಬೆಲೆ ಹನ್ನೊಂದು ಸಾವಿರದಿಂದ ಎಪ್ಪತ್ತು ಸಾವಿರ ರೂಪಾಯಿಗಳು. ಈ ಫೋನ್‌ಗಳಲ್ಲಿ ದೊರೆಯುವ ಸೌಲಭ್ಯಗಳ ಮೇಲೆ ಬೆಲೆ ನಿರ್ಧಾರಿತವಾಗಿರುತ್ತದೆ. ಈ ಸೌಲಭ್ಯಗಳೆಂದರೆ ಆಟೋಮ್ಯಾಟಿಕ್ ರೀಡಯಲ್ ಮೆಮೊರಿ, ಫೋನ್ ಮಾಡಿದವರ ಫೋನ್ ನಂ. ಗುರುತಿಸುವಿಕೆ, ಗ್ರಾಫಿಕಲ್ ಡಿಸ್‌ಪ್ಲೇ, ಫಿಕ್ಸೆಡ್ ಡಯಲಿಂಗ್, ಕರೆಮಾಪನ, ಕಾನ್ಫರೆನ್ಸಿಂಗ್ (ಅಂದರೆ ಒಮ್ಮೆಗೇ ಒಬ್ಬರಿಗಿಂತ ಹೆಚ್ಚು ಜನರೊಂದಿಗೆ ಮಾತನಾಡುವ ಸೌಲಭ್ಯ) ಇತ್ಯಾದಿಗಳು. ಇಷ್ಟೇ ಅಲ್ಲ ನಿಮ್ಮ ಪುಟ್ಟ ಕಂಪ್ಯೂಟರ್‌ಗೆ ಇದನ್ನು ಜೋಡಿಸಿ ಫ್ಯಾಕ್ಸ್ ಕಳುಹಿಸಬಹುದು ಅಥವಾ ಪಡೆಯಬಹುದು.

ಮಾರುಕಟ್ಟೆಯಲ್ಲಿ ಸ್ಪರ್ಧೆ ಹೆಚ್ಚಾಗುತ್ತಿರುವುದರಿಂದ, ಸೆಲ್ಯುಲರ್ ಫೋನ್‌ಗಳ ಬೆಲೆ ಇಳಿಯುತ್ತಿದೆ. ಅಲ್ಲದೆ, ವಿವಿಧ ಬಗೆಯ ಫೋನ್‌ಗಳನ್ನು ಆಯ್ಕೆ ಮಾಡುವ ಸೌಲಭ್ಯ ನಿಮಗಿದೆ. ಸೆಲ್ಯುಲರ್ ಫೋನ್‌ಗಳಲ್ಲಿ ಫೋನ್ ಮಾಡುವ ಅಥವಾ ಫೋನ್ ಕರೆಯನ್ನು ಪಡೆಯುವ ವೆಚ್ಚನೇ ಹೆಚ್ಚಾಗಿರುತ್ತದೆ. ಸಾಧಾರಣ ಫೋನ್ ಕರೆಗಿಂತ

ಎಷ್ಟೋ ಪಾಲು ಹೆಚ್ಚು. ಆದುದರಿಂದ ಎಷ್ಟೋ ಕಂಪನಿಗಳು ತಮ್ಮ ಕಂಪನಿಗೆ ಚಂದಾದಾರರಾಗುವವರಿಗೆ ಈ ಫೋನ್‌ಗಳನ್ನು ಉಚಿತವಾಗಿಯೇ ನೀಡುತ್ತವೆ.

ಸೆಲ್ಯುಲರ್ ಫೋನ್‌ಗಳ ಮೂಲಕ ಕರೆಗಳನ್ನು ಪಡೆಯುವುದು ಉಚಿತವಲ್ಲ. ಇದಕ್ಕಾಗಿ ನೀವು ಹಣ ನೀಡಬೇಕಾಗುತ್ತದೆ. ನಿಮ್ಮ ಸೆಲ್ಯುಲರ್ ಫೋನ್‌ನಲ್ಲಿ ಫೋನ್ ಮಾಡುತ್ತಿರುವವರ ಟೆಲಿಫೋನ್ ನಂಬರ್ ಕಾಣಿಸುವುದರಿಂದ ಆ ಕರೆ ಬೇಡವೆನ್ನಿಸಿದರೆ, ಅದನ್ನು ನೀವು ತಿರಸ್ಕರಿಸಬಹುದು. ಗಿರಾಕಿಗಳನ್ನು ಆಕರ್ಷಿಸಲು ಎಷ್ಟೋ ಕಂಪನಿಗಳು 'ಉಚಿತ ಕರೆ ಸಮಯ' ನೀಡುತ್ತವೆ.

ಸೆಲ್ ಫೋನ್‌ಗಳು ಬ್ಯಾಟರಿಗಳ ಮೂಲಕ ಕೆಲಸ ಮಾಡುತ್ತವೆ. ಆದರೆ ಈ ಬ್ಯಾಟರಿಗಳು ಸಾಧಾರಣ ಬ್ಯಾಟರಿಗಳಲ್ಲ. ಅಲ್ಲದೆ ಇವು ಕಡಿಮೆ ಬೆಲೆಯವುಗಳೂ ಅಲ್ಲ. ಆದರೆ ಇವುಗಳನ್ನು ಮತ್ತೆ ಮತ್ತೆ ಚಾರ್ಜ್ ಮಾಡಬಹುದು.

ಪೇಜರ್‌ಗಳು

ಪೇಜರ್‌ಗಳು ಸೆಲ್ಯುಲರ್ ಫೋನ್‌ಗಳಂತೆ ಬಹೂಪಯೋಗಿಗಳಲ್ಲ. ಹೀಗಾಗಿ ಇವುಗಳ ಬೆಲೆಯೂ ಕಡಿಮೆ. ಬೆಲೆ ಕಡಿಮೆ ಎನ್ನುವ ಕಾರಣಕ್ಕಾಗಿ ಇವು ಬಹಳ ಜನಪ್ರಿಯವೂ ಹೌದು.

ಅವುಗಳನ್ನು ನೀವು ನಿಮ್ಮ ಸೊಂಟದ ಬೆಲ್ಟ್‌ಗೆ ಸಿಕ್ಕಿಸಿಕೊಳ್ಳಬಹುದು. ಇಲ್ಲವೇ ಜೇಬಿನಲ್ಲಿರಿಸಿಕೊಳ್ಳಬಹುದು. ಸಾಧಾರಣ ಟೆಲಿಫೋನ್ ಮೂಲಕ ಯಾರು ಬೇಕಾದರೂ ಪೇಜರ್ ಹೊಂದಿರುವ ವ್ಯಕ್ತಿಗೆ ಸುದ್ದಿ ಕಳುಹಿಸಬಹುದು. ಇದು ಬಹಳ ಸುಲಭ. ಸುದ್ದಿ ಕಳುಹಿಸಲು ನೀವು ಮಾಡಬೇಕಾಗಿರುವುದಿಷ್ಟೇ. ಫೋನ್ ರಿಸೀವರ್ ಎತ್ತಿಕೊಳ್ಳಿ. ಬಹುಮುಖಿ ಲೈನ್ ಆಪರೇಟರ್‌ಗೆ ನಾಲ್ಕು ಅಂಕೆಯನ್ನು ಡಯಲ್ ಮಾಡಿ. ಅವರಿಂದ ಸಂಪರ್ಕ ಪಡೆದ ಕೂಡಲೇ ಪೇಜರ್ ನಂಬರ್ ಡಯಲ್ ಮಾಡಿ, ನಿಮ್ಮ ಸುದ್ದಿಯನ್ನು ತಿಳಿಸಿಬಿಡಿ. ನಿಮ್ಮ ಸುದ್ದಿಯನ್ನು ಪಡೆದ ಆಪರೇಟರ್ ಕಂಪ್ಯೂಟರ್ ಟ್ರಾನ್ಸ್‌ಮೀಟರ್‌ಗಳ ಜಾಲದ ಮೂಲಕ ನಗರದ ಯಾವುದೇ ಮೂಲೆಗಾದರೂ ಸಹ ಆ ಸುದ್ದಿಯನ್ನು ತಲುಪಿಸಬಲ್ಲದು. ಹೀಗಾಗಿ ಕೆಲವೇ ಕ್ಷಣಗಳಲ್ಲಿ ಪೇಜರ್ ಹೊಂದಿರುವವರು ಆ ಸುದ್ದಿಯನ್ನು ಪಡೆಯುತ್ತಾರೆ.

೧೯೮೨ರ ಏಷಿಯನ್ ಗೇಮ್ಸ್ ಸಂದರ್ಭದಲ್ಲಿಯೇ ಪೇಜರ್‌ಗಳ ಬಳಕೆ ಆರಂಭವಾಗಿದ್ದಿತು. ಆದರೆ ಜಾಗತಿಕ ಮಾರುಕಟ್ಟೆಗೆ ಭಾರತ ಮುಕ್ತವಾಗಿ ದೊರೆತ ಮೇಲೆ ಇವುಗಳ ಬಳಕೆ ಅತಿ ಹೆಚ್ಚಾಗಿದೆ. ರೇಡಿಯೋ ಪೇಜಿಂಗ್ ಬಹಳ ಅಗ್ಗ. ಆದರೆ, ಇದರಲ್ಲಿ ಏಕಮುಖ ಸಂವಹನ ಮಾತ್ರ ಸಾಧ್ಯ.

ಪೇಜಿಂಗ್ ರಿಸೀವರ್‌ಗಳಲ್ಲಿ ಮೂರು ವಿಧಗಳಿವೆ. ಮೊದಲನೆಯದು ಧ್ವನಿಯನ್ನು ಮಾತ್ರ ಗ್ರಹಿಸುತ್ತದೆ. ಇದು ನಾಲ್ಕು ಅಥವಾ ಎಂಟು ವಿವಿಧ ಬಗೆಯ ಧ್ವನಿಗಳನ್ನು ಗ್ರಹಿಸಬಲ್ಲದು. ಈ ರಿಸೀವರ್‌ನಲ್ಲಿ ಸುದ್ದಿಯನ್ನಾಗಲಿ ಅಥವಾ ಅಕ್ಷರಗಳನ್ನಾಗಲಿ ಮುದ್ರಿಸಲು ಸಾಧ್ಯವಿಲ್ಲ. ಎರಡನೆಯದು ನ್ಯುಮೆರಿಕ್ ಪೇಜರ್. ಇದರ ಸುಧಾರಿತ ಆವೃತ್ತಿ. ಇದರಲ್ಲಿ ಹನ್ನೆರಡು ಅಥವಾ ಇಪ್ಪತ್ನಾಲ್ಕು ಅಂಕೆಗಳನ್ನು ಪಡಿಮೂಡಿಸಬಹುದು ಇದರಿಂದಾಗಿ, ಸುದ್ದಿ

ಕಳುಹಿಸುವ ವ್ಯಕ್ತಿ ತನ್ನ ಟೆಲಿಫೋನ್ ನಂಬರನ್ನು ಪೇಜರ್ ಇರುವವರಿಗೆ ಕಳುಹಿಸಬಹುದು. ಅನಂತರ ಸುದ್ದಿಯನ್ನು ಪಡೆದವರು, ಸುದ್ದಿ ಕಳುಹಿಸಿದವರನ್ನು ಫೋನ್ ಮೂಲಕ ಸಂಪರ್ಕಿಸಬಹುದು. ಪೇಜರ್ ತನ್ನ ಮೆಮೊರಿಯಲ್ಲಿ ಈ ಸಾಂಖ್ಯಿಕ ಸುದ್ದಿಯನ್ನು ಕಾಯ್ದಿಟ್ಟುಕೊಳ್ಳಬಲ್ಲದು. ಮೂರನೆ ಬಗೆಯು ಪೇಜರ್ ಆಲ್ಫಾನ್ಯುಮೆರಿಕ್. ಇದರಲ್ಲಿ ೧೬, ೩೨ ಅಥವಾ ೪೦ ಅಕ್ಷರಗಳು ಅಥವಾ ಸಂಖ್ಯೆಗಳನ್ನು ಪಡಿಮೂಡಿಸಬಹುದು ಮತ್ತು ೫೦೦ ರಿಂದ ೫೦೦೦ ಸಂಖ್ಯಾಕ್ಷರಗಳನ್ನು ಇದರ ಮೆಮೊರಿಯಲ್ಲಿ ಸಂಗ್ರಹಿಸಿಡಬಹುದು. ಆದರೆ, ಈ ಬಗೆಯ ಪೇಜರ್‌ಗೆ ಸುದ್ದಿ ಕಳುಹಿಸಲು ವಿಶೇಷ ಬಗೆಯ ಕೀ ಬೋರ್ಡ್‌ನ್ನು ಬಳಸಬೇಕಾಗುತ್ತದೆ.

ಸೀಮಿತ ಪ್ರದೇಶದಲ್ಲಿ—ನಿರ್ಮಾಣ ಕಾರ್ಯಗಳಲ್ಲಿ, ಕಾಲೇಜ್ ಕ್ಯಾಂಪಸ್, ಇತ್ಯಾದಿಗಳಲ್ಲಿ—ಬಳಸಲು ಅನುಕೂಲವಾಗುವ ಪೇಜರ್‌ಗಳೂ ಸಹ ದೊರೆಯುತ್ತವೆ. ನ್ಯುಮೆರಿಕ್ ಪೇಜರ್‌ಗಳು ಎರಡು ಸಾವಿರ ರೂಪಾಯಿಗಳಿಗೂ ಎರಡು ಸಾಲಿನ ಆಲ್ಫಾನ್ಯುಮೆರಿಕ್ ಪೇಜರ್‌ಗಳು ಐದು ಸಾವಿರ ರೂಪಾಯಿಗಳಿಗೂ ಮತ್ತು ನಾಲ್ಕು ಸಾಲಿನ ಆಲ್ಫಾನ್ಯುಮೆರಿಕ್ ಪೇಜರ್‌ಗಳು ಆರು ಸಾವಿರ ರೂಪಾಯಿಗಳಿಗೂ ದೊರೆಯುತ್ತವೆ.

ವಿದೇಶಗಳಲ್ಲಿ ಪೇಜರ್‌ಗಳ ಮೂಲಕವೇ ಸುದ್ದಿಯನ್ನು ಕಳುಹಿಸುವ—ಅಂದರೆ ದ್ವಿಮುಖಿ—ಪೇಜರ್‌ಗಳು ಬಳಕೆಯಾಗುತ್ತಿವೆ. ಇದರಿಂದ ಪೇಜರ್ ಇರುವ ವ್ಯಕ್ತಿ ತಾನು ಸುದ್ದಿ ಪಡೆದ ಕೂಡಲೇ, ಪೇಜರ್‌ನಲ್ಲಿ ಈಗಾಗಲೇ ಪ್ರೋಗ್ರಾಂ ಮಾಡಿ ಇರಿಸಿದ ಉತ್ತರವನ್ನು ಕಳುಹಿಸಬಹುದು. ಇಂತಹ ಪೇಜರ್ ಒಂದನ್ನು ಮೊಟರೊಲಾ ಭಾರತದಲ್ಲಿ ಬಿಡುಗಡೆ ಮಾಡಲಿದೆ.

ವಿಡಿಯೋ ಕಾನ್ಫರೆನ್ಸಿಂಗ್ :

ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಇರುವ ಜನರೊಂದಿಗೆ ನೇರವಾಗಿ ಚರ್ಚೆ ಮಾಡುವಂತೆ, ಸಭೆ ನಡೆಸುವಂತೆ ಮಾಡುವ ವ್ಯವಸ್ಥೆಗೆ ವಿಡಿಯೋ ಕಾನ್ಫರೆನ್ಸಿಂಗ್ ಎಂದು ಹೆಸರು. ಉಪಗ್ರಹಗಳು ಅಥವಾ ಟೆಲಿಫೋನ್ ಲೈನ್‌ಗಳ ಮೂಲಕ ಧ್ವನಿ, ಮಾಹಿತಿ ಮತ್ತು ಚಿತ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಸಾರ ಮಾಡಬಹುದು.

ಯೂರೋಪು, ಅಮೆರಿಕಾ ಮತ್ತು ಫೆಸಿಫಿಕ್ ಸಾಗರದಂಚಿನಲ್ಲಿ ನಾಲ್ಕುನೂರಾ ಐವತ್ತಕ್ಕೂ ಹೆಚ್ಚು ವಿಡಿಯೋ ಕಾನ್ಫರೆನ್ಸಿಂಗ್ ಕೇಂದ್ರಗಳಿವೆ. ಇದಲ್ಲದೆ, ಸಾವಿರಾರು ಕಂಪೆನಿಗಳು ತಮ್ಮದೇ ಆದ ಕಾನ್ಫರೆನ್ಸಿಂಗ್ ವ್ಯವಸ್ಥೆಯನ್ನು ಹೊಂದಿವೆ. ಭಾರತದಲ್ಲಿ ವಿದೇಶಿ ಸಂಚಾರ ನಿಗಮ, ಲಿ., ಸಂಸ್ಥೆಯು ದೆಹಲಿ, ಕಲ್ಕತ್ತ, ಮುಂಬಯಿ ಮತ್ತು ಚೆನ್ನೈಗಳಲ್ಲಿ ನಾಲ್ಕು ವಿಡಿಯೋ ಕಾನ್ಫರೆನ್ಸಿಂಗ್ ಕೇಂದ್ರಗಳನ್ನು ಹೊಂದಿದೆ.

ವಿಡಿಯೋ ಕಾನ್ಫರೆನ್ಸ್‌ಗಳಲ್ಲಿ ದ್ವಿಮುಖಿ ಸಂವಹನ ಸಾಧ್ಯವಿದೆ. ಆದರೆ, ಇದರೊಂದಿಗೆ ಇತರ ಮೂರು ಕೇಂದ್ರಗಳ ಜೊತೆ ಸಂಪರ್ಕ ಬೆಳೆಸಬಹುದು. ವಿದೇಶಿ ಸಂಚಾರ ನಿಗಮ ಲಿ.,ನ ಕಾನ್ಫರೆನ್ಸಿಂಗ್ ಕೇಂದ್ರಗಳಲ್ಲಿ ಪ್ರತಿ ಕೇಂದ್ರದಲ್ಲಿ ಒಮ್ಮೆಗೆ ಆರು ಜನರು ಭಾಗ

ವಹಿಸಬಹುದು. ಹೆಚ್ಚಿನ ಜನರು ಭಾಗ ವಹಿಸಬೇಕೆಂದರೆ, ಮತ್ತೆ ನಾಲ್ಕು ಜನರಿಗೆ ಅವಕಾಶ ಮಾಡಿಕೊಡಬಹುದು.

ಫ್ಯಾಸಿಮೈಲ್ :

ಇದು ಸುಮಾರು ಹಳೆಯ ತಂತ್ರಜ್ಞಾನ. ಈ ವ್ಯವಸ್ಥೆಯ ಮೂಲಕ ನೀವು ಫೋಟೋಗಳು, ಡ್ರಾಯಿಂಗ್‌ಗಳು, ಚಾರ್ಟ್‌ಗಳು ಅಥವಾ ಬೇರೆ ಯಾವುದೇ ದಾಖಲೆಗಳ ಪ್ರತಿಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕಳುಹಿಸಬಹುದು. ಅಂದರೆ ಮೂಲ ಪ್ರತಿಯನ್ನು ರವಾನಿಸದೆ ಅದರ ಅನುಪ್ರತಿಯನ್ನು ಈ ಮೂಲಕ ಕಳುಹಿಸಬಹುದು. ಇದು ಕ್ಸೆರಾಕ್ಸ್ ಯಂತ್ರದಂತೆ ಇರುತ್ತದೆ. ಆದರೆ ಇಲ್ಲಿ ಅನುಪ್ರತಿ ಅದೇ ಯಂತ್ರದಿಂದ ಹೊರ ಬರದೆ ಅಂತಹುದೇ ಬೇರೊಂದು ಯಂತ್ರದ ಮೂಲಕ ಹೊರ ಬರುತ್ತದೆ. ಆ ಯಂತ್ರ ನಿಮ್ಮ ನೆರಮನೆಯಲ್ಲಿರಬಹುದು ಅಥವಾ ಸಾವಿರಾರು ಕಿ.ಮೀ. ದೂರದಲ್ಲಿರಬಹುದು. ಇಂತಹ ಯಂತ್ರಕ್ಕೆ ಫ್ಯಾಕ್ಸ್ ಯಂತ್ರ ಎಂದೂ ಕರೆಯುತ್ತಾರೆ.

ಫ್ಯಾಸಿಮೈಲ್ ಸಂವಹನದಲ್ಲಿ, ಫ್ಯಾಸಿಮೈಲ್ ಯಂತ್ರವು ಮೂಲ ಪ್ರತಿಯನ್ನು ಎಲೆಕ್ಟ್ರಾನಿಕ್ ಬಿಂಬವನ್ನಾಗಿಸುತ್ತದೆ ಮತ್ತು ಆ ಬಿಂಬವನ್ನು ಟೆಲಿಫೋನ್ ಲೈನ್‌ಗಳ ಮೂಲಕ ದೂರದ ಬೇರೊಂದು ಫ್ಯಾಸಿಮೈಲ್ ಯಂತ್ರಕ್ಕೆ ರವಾನಿಸುತ್ತದೆ. ಎರಡನೆಯ ಯಂತ್ರ ಆ ಎಲೆಕ್ಟ್ರಾನಿಕ್ ಬಿಂಬವನ್ನು ಮೂಲ ಪ್ರತಿಯ ಪಡಿಯಚ್ಚನ್ನು ರೂಪಿಸುತ್ತದೆ.

ಮೊದಲಿದ್ದ ಫ್ಯಾಕ್ಸ್ ಯಂತ್ರಗಳಿಗೆ ಒಂದು ಕಡೆ ರಾಸಾಯನಿಕ ದ್ರವ್ಯವನ್ನು ಬಳಿದ ಹಾಳೆಯನ್ನು ಬಳಸಬೇಕಿತ್ತು. ಆದರೆ ಈಗ ಸಾಧಾರಣ ಹಾಳೆಯ ಮೂಲಕವೂ ಸಹ ಫ್ಯಾಕ್ಸ್ ಪ್ರತಿಗಳನ್ನು ಪಡೆಯಬಹುದು.

ಥರ್ಮಲ್ ಫ್ಯಾಕ್ಸ್ ಯಂತ್ರಗಳು ಸುಮಾರು ರೂ. ೧೫,೦೦೦ಕ್ಕೆ ದೊರೆಯುತ್ತವೆ. ಸಾಧಾರಣ ಹಾಳೆಯನ್ನು ಬಳಸುವ ಫ್ಯಾಕ್ಸ್ ಯಂತ್ರದ ಬೆಲೆ ಸುಮಾರು ರೂ. ೪೦,೦೦೦. ಈ ಫ್ಯಾಕ್ಸ್ ಯಂತ್ರಗಳಿಗೆ ಕಂಪ್ಯೂಟರ್ ಮತ್ತು ಸ್ಕ್ಯಾನರ್‌ಗಳ ಜೋಡಣೆ ಬಯಸಿದರೆ, ಒಟ್ಟು ರೂ. ೯೦,೦೦೦ ವನ್ನು ಖರ್ಚು ಮಾಡಬೇಕಾಗುತ್ತದೆ.

ಫ್ಯಾಕ್ಸ್ ಕಳುಹಿಸಲು ಪರ್ಸನಲ್ ಕಂಪ್ಯೂಟರ್‌ಗಳನ್ನು ಬಳಸಬಹುದು. ಕಂಪ್ಯೂಟರ್‌ಗಳಲ್ಲಿ ಇದಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಕಂಪ್ಯೂಟರ್‌ಗಳಲ್ಲಿ ಇರುವ ಸಾಫ್ಟ್‌ವೇರ್ ಕಂಪ್ಯೂಟರ್ ಭಾಷೆಯ ಫೈಲನ್ನು ಫ್ಯಾಸಿಮೈಲ್ ರೂಪಕ್ಕೆ ಪರಿವರ್ತಿಸಿ ರವಾನಿಸುತ್ತದೆ.

ಬಹಳಷ್ಟು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸುದ್ದಿ ಸಂಸ್ಥೆಗಳಾದ ಪಿಟಿಐ, ಯುಎನ್‌ಐ, ಎಪಿ, ರಾಯ್ಟರ್, ಮೊದಲಾದವುಗಳು ಸುದ್ದಿ ಚಿತ್ರಗಳನ್ನು ಏಕ ಕಾಲದಲ್ಲಿ ಸಾವಿರಾರು ದಿನ ಪತ್ರಿಕೆಗಳ ಕಛೇರಿಗಳು ಪಡೆಯುತ್ತವೆ. ಫ್ಯಾಸಿಮೈಲ್ ಯಂತ್ರ ಹಾಗೂ ಉಪಗ್ರಹಗಳ ಸಹಾಯದಿಂದ ಬೇರೆ ಬೇರೆ ಕಡೆಗಳಲ್ಲಿ ಒಂದೇ ದಿನ ಪತ್ರಿಕೆಯನ್ನು ಏಕ ಕಾಲದಲ್ಲಿ ಮುದ್ರಿಸಬಹುದು. ಆದರೆ ಈ ಮುದ್ರಣಕ್ಕೆ ಪತ್ರಿಕೆಯ ಪುಟಗಳನ್ನು ಸಿದ್ಧಪಡಿಸುವುದು ಕೇವಲ ಒಂದು ಕಡೆ ಮಾತ್ರ.

ಅಂಚೆಯ ಮೂಲಕ ಪತ್ರವನ್ನು ಕಳುಹಿಸುವುದಕ್ಕಿಂತಲೂ ಫ್ಯಾಕ್ಸ್ ಮೂಲಕ ಕಳುಹಿಸುವುದು ಹೆಚ್ಚು ವೆಚ್ಚದಾಯಕ ಆದರೂ ಅನೇಕ ಕಂಪನಿಗಳು ಮಾಹಿತಿ ಕಳುಹಿಸಲು ಫ್ಯಾಕ್ಸ್ ಯಂತ್ರಗಳನ್ನೇ ಬಳಸುತ್ತಾರೆ. ಏಕೆಂದರೆ ಇದರಲ್ಲಿ ರವಾನೆ ಅತಿ ಶೀಘ್ರ ಮತ್ತು ವಿಶ್ವಾಸ ಯೋಗ್ಯ. ಆದರೆ ಫ್ಯಾಕ್ಸ್ ಗ್ರಾಹಕವು ಸ್ವಂತ ಒಡೆತನದಲ್ಲಿ ಇಲ್ಲದ ಕಡೆಗೆ ಗೌಪ್ಯ ವಿಷಯಗಳನ್ನು ಫ್ಯಾಕ್ಸ್ ಮಾಡಬಾರದು.

ಎಲೆಕ್ಟ್ರಾನಿಕ್ ಅಂಚೆ :

ಇದರ ಸಂಕ್ಷಿಪ್ತ ರೂಪ ಇ-ಮೈಲ್. ಇದು ಈಗ ಅತಿ ಹೆಚ್ಚು ವೇಗವಾಗಿ ಬೆಳೆಯುತ್ತಿರುವ ಸಂವಹನ ಪದ್ಧತಿ. ಕಂಪ್ಯೂಟರ್ ಜಾಲಗಳ ಮೂಲಕ ಸುದ್ದಿಯನ್ನೇ ಸುಲಭವಾಗಿ ರವಾನಿಸಬಹುದು. ಇತ್ತೀಚಿನ ದಿನಗಳಲ್ಲಿ ಜಗತ್ತಿನಾದ್ಯಂತ ಲಕ್ಷಾಂತರ ಜನರನ್ನು ಇ-ಮೈಲ್ ಮೂಲಕ ತಲುಪಬಹುದು.

ಭಾರತದಲ್ಲಿ ಅನೇಕ ಖಾಸಗಿ ಕಂಪನಿಗಳೂ, ವಿದೇಶ ಸಂಚಾರ ನಿಗಮ ಇ-ಮೈಲ್ ಸೇವೆಯನ್ನು ಒದಗಿಸುತ್ತಿವೆ. ಫ್ಯಾಕ್ಸ್ ಕಳುಹಿಸುವುದಕ್ಕಿಂತಲೂ ಇ-ಮೈಲ್ ಕಳುಹಿಸುವಲ್ಲಿ ಅನುಕೂಲ ಅನಾನುಕೂಲತೆ ಎರಡೂ ಇವೆ. ಉದಾಹರಣೆಗೆ—ಇ-ಮೈಲ್ನಲ್ಲಿ ಸುದ್ದಿಯನ್ನು ತಕ್ಷಣ ರವಾನಿಸಲು ಸಾಧ್ಯವಾಗುವುದಿಲ್ಲ. ಆದರೂ, ಇ-ಮೈಲ್ ಫ್ಯಾಕ್ಸ್‌ಗಿಂತಲೂ ಅಗ್ಗ. ಇ-ಮೈಲ್‌ನಲ್ಲಿ ಸುದ್ದಿ ಅಥವಾ ಮಾಹಿತಿ ಕಂಪ್ಯೂಟರ್‌ನಲ್ಲಿ ಇರುವುದರಿಂದ ಕಾಗದದ ಬಳಕೆ ಕಡಿಮೆ. ಫ್ಯಾಕ್ಸ್‌ನಲ್ಲಿ ಪಡೆದ ಪ್ರತಿ ಕೆಲವೊಮ್ಮೆ ಸ್ಪಷ್ಟವಾಗಿ ಕಾಣಿಸದೆ ಇರಬಹುದು. ಆದರೆ, ಇ-ಮೈಲ್‌ನಲ್ಲಿ ಪಡೆದ ಪ್ರತಿ ಯಾವಾಗಲೂ ಸ್ಪಷ್ಟವಾಗಿರುತ್ತದೆ. ಫ್ಯಾಕ್ಸ್ ಯಂತ್ರದಲ್ಲಿ ನೀವು ಇ-ಮೈಲ್ ಕಳುಹಿಸಲು ಸಾಧ್ಯವಿಲ್ಲ. ಆದರೆ, ಇ-ಮೈಲ್‌ನಲ್ಲಿ ನೀವು ಫ್ಯಾಕ್ಸ್ ಕಳುಹಿಸಬಹುದು.

ಆದರೆ, ಒಂದು ಎಚ್ಚರಿಕೆ : ಇ-ಮೈಲ್ ಮಾಡಲು ನೀವು ಕಳುಹಿಸಬೇಕಾದ ಸುದ್ದಿಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಬೇಕಾಗುತ್ತದೆ. ಅಂದರೆ ಸುದ್ದಿಯನ್ನು ಟೈಪ್ ಮಾಡಲೂ ಸಹ ನೀವು ಟೆಲಿಫೋನ್ ಸಮಯವನ್ನು ಬಳಸಿಕೊಳ್ಳುತ್ತೀರಿ. ಇದು ಅನವಶ್ಯಕ ವೆಚ್ಚದಾಯಕ. ಆದುದರಿಂದ ಸುದ್ದಿಯನ್ನು ಕಂಪ್ಯೂಟರಿನಲ್ಲಿ ಮೊದಲೇ ಟೈಪು ಮಾಡಿರಿಸಿ, ಅದನ್ನು ರವಾನಿಸಲು ಮಾತ್ರ ಟೆಲಿಫೋನ್ ಲೈನ್ ಬಳಸಿ. ಆಗ ವೆಚ್ಚ ಕಡಿಮೆಯಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಅಷ್ಟೇ ಏಕೆ ಸಾಮಾನ್ಯ ಜನರೂ ಸಹ ಇ-ಮೈಲ್ ಅನ್ನು ಹೆಚ್ಚು ಹೆಚ್ಚಾಗಿ ಬಳಸುತ್ತಿದ್ದಾರೆ. ವಿದೇಶಗಳಲ್ಲಿ ಇರುವ ನಿಮ್ಮ ಮಕ್ಕಳಿಗೆ ಅತಿ ಹೆಚ್ಚು ಹಣ ಖರ್ಚು ಮಾಡಿ ಫೋನ್‌ನಲ್ಲಿ ಮಾತನಾಡುವುದಕ್ಕಿಂತ ಇ-ಮೈಲ್‌ನಲ್ಲಿ ಸುದ್ದಿ ಕಳುಹಿಸಿ, ಉತ್ತರ ಪಡೆಯುವುದು ಕಡಿಮೆ ವೆಚ್ಚದಾಯಕ.

ಇಂಟೆಲಿಜೆಂಟ್ ನೆಟ್‌ವರ್ಕ್‌ಗಳು :

ಅನೇಕ ದೇಶಗಳಲ್ಲಿನ ವ್ಯಾಪಾರಿ ಸಂಘಟನೆಗಳು ತಮ್ಮ ಗ್ರಾಹಕರಿಗೆ ದೂರದ ದರ ರಹಿತ ಕರೆಗಳನ್ನು ಮಾಡುವ ಸೌಲಭ್ಯ ಕಲ್ಪಿಸಿಕೊಟ್ಟಿವೆ. ಭಾರತದಲ್ಲಿ ಈ ಸೌಲಭ್ಯ

ವನ್ನು ಟೆಲಿಕಮ್ಯುನಿಕೇಷನ್ ವಿಭಾಗ ಮತ್ತು ಎಂ.ಎಸ್.ಟಿ.ಎಲ್ ನಿಗಮಗಳು ನೀಡುತ್ತಿವೆ.

ಈ ಸೌಲಭ್ಯದನ್ವಯ ಯಾವುದೇ ಕಂಪನಿಯು ಯಾವುದಾದರೊಂದು ಸಾಮಾನ್ಯ ನಂಬರ್‌ಗೆ ಚಂದಾದಾರ ಆಗಬಹುದು. ಇದರಿಂದ, ದೇಶದ ಯಾವುದೇ ಭಾಗದಿಂದ ಮಾಡುವ ಕರೆಯನ್ನು ಈ ನಂಬರಿನ ಮೂಲಕ ಪೂರ್ವನಿರ್ಧಾರಿತ ಸ್ಥಳಕ್ಕೆ ವರ್ಗಾಯಿಸಬಹುದು. ಇಂತಹ ಸಂದರ್ಭಗಳಲ್ಲಿ ಟೆಲಿಫೋನ್ ವೆಚ್ಚವನ್ನು ಕರೆಯನ್ನು ಗ್ರಹಿಸಿದ (ಪಡೆದ) ಕಂಪನಿಯೇ ಭರಿಸುತ್ತದೆ. ದೂರದ ಗಿರಾಕಿಗಳನ್ನೂ, ಹೊಸ ಗಿರಾಕಿಗಳನ್ನೂ ಈ ರೀತಿಯಾಗಿ ಆಕರ್ಷಿಸಬಹುದೆಂದು ಅನೇಕ ಕಂಪನಿಗಳು ತಿಳಿದುಕೊಂಡಿವೆ. ಇದರಿಂದ ಅವರ ವ್ಯಾಪಾರ ಹೆಚ್ಚಾಗುತ್ತದೆ.

ಪ್ರತಿ ವರ್ಷ ಅಮೆರಿಕೆಯಲ್ಲಿ ದಶಲಕ್ಷಗಟ್ಟಲೆ ದರ ರಹಿತ ಕರೆಗಳನ್ನು ಮಾಡಲಾಗುತ್ತದೆ. ಜಗತ್ತಿನ ಅರವತ್ತೇಳು ದೇಶಗಳಿಂದ ಈ ಬಗೆಯ ದರ ರಹಿತ ಕರೆಗಳನ್ನು ಅಮೆರಿಕೆಯ ಕಂಪನಿಗಳಿಗೆ ಮಾಡಬಹುದಾಗಿದೆ.

ಸಿಟಿಜನ್ ಬ್ಯಾಂಡ್ ರೇಡಿಯೋ :

ಸುಮಾರು ೨೦ ಕಿ. ಮೀ. ವ್ಯಾಪ್ತಿಯೊಳಗೆ ಧ್ವನಿ ಸಂವಹನಕ್ಕೆ ಈ ಸಾಧನ ಅತ್ಯುತ್ತಮವಾದುದು. ಈ ತಂತ್ರಜ್ಞಾನವು ಸಿ. ಬಿ. ರೇಡಿಯೋ ಎಂದೇ ಪ್ರಸಿದ್ಧವಾಗಿದೆ. ೨೭ ಎಂ.ಹೆಚ್–೩ ಸುತ್ತಲ ಬ್ಯಾಂಡನ್ನು ಯಾರು ಬೇಕಾದರೂ ಸುದ್ದಿ ಕಳುಹಿಸುವ ಕಾರಣಕ್ಕಾಗಿ ಖಾಲಿ ಇರಿಸಲಾಗಿದೆ. ಹ್ಯಾಂ ರೇಡಿಯೋ ಒಂದು ಹವ್ಯಾಸ. ಆದರೆ ಸಿ. ಬಿ ರೇಡಿಯೋ ಒಳ್ಳೆಯ ವ್ಯಾವಹಾರಿಕ ಬಳಕೆ ಸಮರ್ಥವಾದುದು. ಸಿ.ಬಿ. ಸೆಟ್‌ಗಳನ್ನು ಬಳಸುವುದು ಸುಲಭ ಮತ್ತು ಮಿತವ್ಯಯ ಹೀಗಾಗಿ ಇವು ಅಭಿವೃದ್ಧಿಶೀಲ ರಾಷ್ಟ್ರಗಳಿ ಆದರ್ಶಪ್ರಾಯವಾದವುಗಳು.

ಭಾರತದಲ್ಲಿ ಸಿ. ಬಿ. ರೇಡಿಯೊ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಳ ಯಾಗಬಹುದಾಗಿದೆ. ಭಾರತ ಸರಕಾರದ ವೈರ್‌ಲೆಸ್ ಪ್ಲಾನಿಂಗ್ ಅಂಡ್ ಕೋ ಆರ್ಡಿನೇಷನ್ ವಿಭಾಗವು ಇದಕ್ಕಾಗಿ ನಲವತ್ತು ಚಾನೆಲ್‌ಗಳನ್ನು ಕಾಯ್ದಿರಿಸಿದೆ.

ಉಪಗ್ರಹ ಸಂವಹನ :

ರಾಷ್ಟ್ರೀಯ ಮಾಹಿತಿ ಜಾಲಗ ಜಂಜಾಟಕ್ಕೆ ಸಿಲುಕದೆ ಉಪಗ್ರಹಗ ಮೂಲಕ ವೈಯಕ್ತಿಕ ಸಂವಹನ ಬೆಳೆಸು ವುದು ಭವಿಷ್ಯತ್ತಿನಲ್ಲಿನ ಆಕರ್ಷಣೆ. ಅನೇಕ ದೊಡ್ಡ ದೊಡ್ಡ ಕಂಪನಿಗಳು ತಮ್ಮದೇ ಆದ ಉಪಗ್ರಹಗಳನ್ನು ಹಾರಿಸುವ ವಿವಿಧ ಹಂ ಗಳಿವೆ. ೪೮ ಉಪಗ್ರಹಗಳ ಮೂಲಕ ಗ್ಲೋಬಲ್ ಸ್ಟಾರ್, ೬೬ ಉಪಗ್ರಹಗಳ ಮೂಲಕ ಇರಿಡಿಯಂ, ೧೨ ಉಪಗ್ರಹಗಳ ಮೂಲಕ ಒಡಿಸ್ಸೀ ಕಂಪನಿಗಳು ಈ ಉಪ ಗ್ರಹ ಸೇವೆಯನ್ನು ನೀಡಲಿವೆ. ಇದರ ಬಳಕೆಯ ಸಾಧನದ ಬೆಲೆ ೫೦೦ ಡಾಲರ್ ಗಳಿಂದ ೩೦೦೦ ಡಾಲರ್‌ಗಳು. ಉಪಗ್ರಹ ಬಳಸುವಾಗಿನ ಬೆಲೆ ಪ್ರತಿ ನಿಮಿಷಕ್ಕೆ ಮೂರ ರಿಂದ ಐದು ಡಾಲರುಗಳು. ಬಹುಶಃ ಈ ಶತಮಾನದ ಕೊನೆಯಲ್ಲಿ ಈ ಸೇವೆ ದೊರೆಯ ಬಹುದು.

ಅಂದು—ಇಂದು

ಡಾ|| ಸ. ಜ. ನಾಗಲೋಟಿಮಠ
೨೫, "ಶಾಂತಾ" ಬಸವ ಕಾಲನಿ
ಬೆಳಗಾವಿ-೫೯೦ ೦೧೦

ಸ್ವಾತಂತ್ರ್ಯ ಎಂದರೆ ಸ್ವಾಚ್ಛಂದ್ಯ ಅಲ್ಲ ಸಾಮಾಜಿಕವಾಗಿ ಅಹಿತಕರವಲ್ಲದ ಮತ್ತು ನೈತಿಕವಾಗಿ ಅಶುದ್ಧವಲ್ಲದ ಕರ್ತವ್ಯ ನಿರ್ವಹಣೆಗೆ ಪರವಾನಿಗೆ ಎಂದರ್ಥ. ಇಂಥ ಸಮಾಜದಲ್ಲಿ ಮಕ್ಕಳು ಸಮಾಜದ ಪ್ರೀತಿಯ ಜವಾಬ್ದಾರಿಕೆಗೆ ಪಾತ್ರವಾಗಿ ಸರ್ವಾಂಗೀಣ ಪ್ರಗತಿ ಪಡೆಯುತ್ತವೆ. ಹೀಗಿಲ್ಲದಲ್ಲಿ? ನೋಡಿ ಉಭಯ ಮುಖಗಳನ್ನು ಈ ಲೇಖನದಲ್ಲಿ.

ಅಂದು (೧೯೪೭).

ಇದೊಂದು ಘಟನೆ. ಇದು ಜರಗಿದ್ದು ೧೯೪೭ ರಲ್ಲಿ. ಸ್ವಾತಂತ್ರ್ಯ ಸಿಕ್ಕಿತ್ತು. ಒಂದು ಹಳ್ಳಿಯಲ್ಲಿ ಬಡ ಕುಟುಂಬ ವಾಸಿಸುತ್ತಿತ್ತು. ಗಂಡ, ಹೆಂಡತಿ ಹಾಗೂ ಎರಡು ಗಂಡು ಮಕ್ಕಳು ಅವರ ಮನೆ ಮಂದಿ. ದೊಡ್ಡ ಹುಡುಗನಿಗೆ ಆಗ ಹತ್ತು ವರ್ಷ. ಶಾಲೆಗೆ ಹೋಗುತ್ತಿದ್ದ. ಅವನಿಗೆ ಲೆಕ್ಕ, ಬಾಯಿಲೆಕ್ಕ ಚೆನ್ನಾಗಿ ಬರುತ್ತಿದ್ದವು. ಮನೆಗೆ ಬೇಕಾದ ದಿನಸಿ ಸಾಮಾನು, ತರಕಾರಿ ತರಲು ಅವನನ್ನೇ ಕಳಿಸಲು ಪ್ರಾರಂಭಿಸಿದ್ದರು. ಅವನೂ ಸಹ ಹುರುಪಿನಿಂದ ಕೈಯಲ್ಲಿ ಚೀಲ ಹಿಡಿದುಕೊಂಡು ಅಂಗಡಿಗೆ ಹೋಗಿ ಬೇಕಾದ ಸಾಮಾನುಗಳನ್ನು ಕಟ್ಟಿಸಿಕೊಂಡು ಸರಿಯಾದ ಹಣ ಕೊಟ್ಟು ಉಳಿದ ಚಿಲ್ಲರೆಯನ್ನು ಕೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಮನೆಗೆ ಮರಳಿ ತಾಯಿಯ ಕೈಯಲ್ಲಿಟ್ಟು ಎಲ್ಲ ವಿವರ ಕೊಡುವುದು ಅವನ ವಾಡಿಕೆ. ಹುಡುಗನ ತಂದೆ ತನ್ನ ಕಾರ್ಯಕ್ಕೆ ಬೇಗನೆ ಹೋಗುತ್ತಿದ್ದ. ಮಗ ಕೈಗೆ ಬಂದ ಎಂಬ ಹೆಮ್ಮೆ ಅವನಿಗಿತ್ತು. ಹುಡುಗನ ತಾಯಿ ಕಲಿತವಳಲ್ಲ, ಆದರೂ ಆಕೆ ವ್ಯವಹಾರದಲ್ಲಿ ಚತುರೆ, ಮಗನಿಗೆ ಬಾಯಿ ಲೆಕ್ಕ ಹೇಳಿ ಕಲಿಸುತ್ತಿದ್ದಳು. ಈ ಮಗನೂ ಒಳ್ಳೆಯ ಜವಾಬ್ದಾರಿಯಿಂದ ವ್ಯವಹಾರ ಮಾಡುತ್ತಿದ್ದ. ಒಂದೆರಡು ತಿಂಗಳಲ್ಲಿ ತಾಯಿ ಮಗನ ಮೇಲೆ ನಿಗಾ ಇಡುವುದನ್ನು ಬಿಟ್ಟಳು. ಅಂಗಡಿಗೆ ಹೋಗಿ ದಿನಸಿ ಸಾಮಾನು ತಂದು ಉಳಿದ ಹಣವನ್ನು ಒಂದು ಡಬ್ಬಿಯಲ್ಲಿ ಹಾಕಿ ಇಡಲು ಹೇಳಿದಳು. ಹುಡುಗನೂ ಅದೇ ಮಾರ್ಗದಲ್ಲಿದ್ದ.

ಒಂದು ದಿನ ಅವನಿಗೆ ಬೇರೆ ವಿಚಾರ ಬಂದಿತು. ಅವನ ಶಾಲೆಯ ಸಮೀಪದಲ್ಲಿ ಒಂದು ಚಹಾದ ಅಂಗಡಿ ಪ್ರಾರಂಭವಾಗಿತ್ತು. ಊರಿನಲ್ಲಿ ಕೆಲವರು ಅಂಗಡಿಗೆ

ಬಂದು ಹೊರಗಿನ ಕಟ್ಟೆಯ ಮೇಲೆ ಕುಳಿತು ಸೂಸಲು, ಉಪ್ಪಿಟ್ಟು ತಿನ್ನುತ್ತ ಸಂಗೀತ ಕೇಳುತ್ತ ಕೂಡ್ರುತ್ತಿದ್ದರು. ಹುಡುಗ ಅವರನ್ನೇ ನೋಡುತ್ತ ಶಾಲೆಗೆ ಹೋಗುತ್ತಿದ್ದ. ಅಂದು ಚಹಾದ ಅಂಗಡಿ ಎಂದರೆ ಇಂದಿನ ಹೊಟೆಲ್‌ಗಳು. ಚಹಾದ ಅಂಗಡಿಗಳಲ್ಲಿ ಮುಖ್ಯ ಆಕರ್ಷಣೆ ಎಂದರೆ ಚಹಾ. ಅದು ಬಂದು ಬಹಳ ವರ್ಷಗಳಾಗಿರಲಿಲ್ಲ. ಅದು ಪ್ರಾರಂಭವಾಗಬೇಕಾದರೆ ಊರಿನ ಹಿರಿಯರು ವಿರೋಧಿಸಿದ್ದರು. ಊರಿನ ಜನರು ಮನೆಯಲ್ಲಿ ತಿನ್ನುವುದನ್ನು ಬಿಟ್ಟು ಇಲ್ಲಿ ಬಂದು ಹೊಲಸು ತಿನ್ನುತ್ತ ಕೂಡ್ರುವರು ಎಂಬ ಭಯ. ಎರಡನೆಯ ವಿರೋಧ ಎಂದರೆ ಯುವಕರು ನಸುಕಿನಲ್ಲಿ ಎದ್ದು ಹೊಲದ ಕೆಲಸಕ್ಕೆ ಹೋಗದೆ ಬೇರೆಯವರ ಬಗ್ಗೆ ಸಲ್ಲದ ಮಾತುಗಳನ್ನು ಆಡುತ್ತ ಕಾಲಹರಣ ಮಾಡುತ್ತಾರೆ ಎಂದು. ಆದರೆ ಊರಿಗೆ ಬಂದವರಿಗೆ ಅಲ್ಲಿಂದ ಬೇರೆ ಕಡೆಗೆ ಹೋಗುವ ಪ್ರವಾಸಿಗರಿಗೆ ಅನುಕೂಲ ಇರಲಿ ಎಂದು ಅದನ್ನು ಪ್ರಾರಂಭಿಸಿದರು. ಹೆಸರೇ ಹೇಳುವಂತೆ ಅದು ಪ್ರಾರಂಭವಾದದ್ದು ಕೇವಲ ಚಹಾ ತಯಾರಿಸಲು. ಅಂದು ಈ ಅಂಗಡಿಗಳಲ್ಲಿ ಒಂದೆರಡು ಪದಾರ್ಥಗಳು ಮಾತ್ರ ಇರುತ್ತಿದ್ದವು. ಒಂದು, ಚುರಮುರಿಗೆ ಖಾರ ಹಚ್ಚಿದ ಚೂಡಾ, ಚುರಮುರಿಯನ್ನು ತೊಸಿ ಒಗ್ಗರಣೆ ಕೊಟ್ಟ—ವಗ್ಗರಣೆ—ಸೂಸಲು ಬಹಳ ಎಂದರೆ ಉಪ್ಪಿಟ್ಟು.

ಹುಡುಗನಿಗೆ ಅವುಗಳ ರುಚಿ ನೋಡಬೇಕೆಂಬ ಆಸೆ. ಆದರೆ ಹಣ ಇಲ್ಲ. ಎರಡನೆಯದಾಗಿ ತಮ್ಮನೂ ಸಂಗಡವೇ ಬಂದು ಹೋಗುತ್ತಾನೆ. ತಿಂದರೆ ಅವನನ್ನು ತಪ್ಪಿಸಿ ತಿನ್ನಬೇಕು. ತಿನ್ನಬೇಕಾದರೆ ಹಣಬೇಕು. ಹಣವನ್ನು ಮನೆಯಲ್ಲಿ ಕೊಡುವುದಿಲ್ಲ. ತಿನ್ನಲು ಬೇಕೆನಿಸಿದರೆ ರೊಟ್ಟಿ, ಚಟ್ನಿ, ನುಚ್ಚು ಮೊಸರು ಮನೆಯಲ್ಲಿ ಸದಾ ಇರುತ್ತಿದ್ದವು. ಅವರ ಮನೆ ಸ್ಥಿತಿವಂತರದು ಎನ್ನುತ್ತಿದ್ದರು. ಅವರ ಕಾರಣವೆಂದರೆ ಅವರ ಮನೆಯಲ್ಲಿಯ ರೊಟ್ಟಿಯ ಪುಟ್ಟಿಯಾವಾಗಲೂ ತುಂಬಿರುತ್ತಿತ್ತು. ವಿಚಾರ ಮಾಡಿ ಕೊನೆಗೆ ಅವನು ಒಂದು ಯೋಜನೆ ತಯಾರಿಸಿದ. ಅದೆಂದರೆ ದಿನಸಿ ಅಂಗಡಿಗೆ ಹೋಗಿ ವಸ್ತುಗಳನ್ನು ಖರೀದಿಸುವಾಗ ಕಡಿಮೆ ಖರೀದಿಸಿ ಹಣ ಉಳಿಸುವುದು. ಉಳಿದ ಹಣದಿಂದ ಚಹಾದ ಅಂಗಡಿಯ ಚೂಡಾ ತಿನ್ನುವುದು.

ಅಂಗಡಿಗೆ ಹೋಗುವ ದಿನವೂ ಬಂದಿತು. ಪ್ರತಿ ಸಲ ಅವನು ಒಂದಾಣೆಯ ಜೀರಿಗೆ, ಒಂದಾಣೆಯ ಸಾಸಿವೆ ಖರೀದಿಸುವವನು. ಇಂದು ಕೇವಲ ಮೂರು ದುಡ್ಡಿನ ಸಾಮಾನು ಕೊಡಲು ಹೇಳಿದ. ಬೆಲ್ಲ ಖರೀದಿಸುವಾಗ ಎಂಟಾಣೆಯ ಬೆಲ್ಲ ಬಿಟ್ಟು ಆರು ದುಡ್ಡಿನ ಬೆಲ್ಲ ಕೊಡಲು ಹೇಳಿದ. ಅವರಿಗೆ ಹಣ ಕೊಟ್ಟು ಚಿಲ್ಲರೆ ತೆಗೆದುಕೊಂಡ. ಮನೆಗೆ ಹೋಗಿ ತಾಯಿಗೆ ಎಲ್ಲ ಸಾಮಾನು ಒಪ್ಪಿಸಿದ. ಒಂದಾಣೆ ಜೀರಿಗೆ, ಒಂದಾಣೆ ಸಾಸಿವೆ, ಎರಡಾಣೆಯ ಬೆಲ್ಲ ಎಂದು ಹೇಳಿದ. ತಾಯಿ ಒಪ್ಪಿದಳು. ಆ ವ್ಯವಹಾರದಿಂದ ಅವನ ಜೇಬಿಗೆ ಒಂದಾಣೆ ಉಳಿಯಿತು- ಜೀರಿಗೆಯಲ್ಲಿ ಒಂದು ದುಡ್ಡು, ಸಾಸಿವೆಯಲ್ಲಿ ಒಂದು ದುಡ್ಡು, ಬೆಲ್ಲದಲ್ಲಿ ಎರಡು ದುಡ್ಡು ಉಳಿದವು. ಹುಡುಗ ಹೆದರಿದ್ದ. ಆದರೂ ಅವನ ಯೋಜನೆ ಯಶಸ್ವಿ ಆಗಿತ್ತು. ಮರು ದಿನ ಚಹಾದ ಅಂಗಡಿಗೆ ಹೋಗಿ ತಿನ್ನುವುದು ಬಾಕಿ

ಉಳಿದಿತ್ತು. ಅವನಿಗೆ ಒಂದು ಹೊಸ ಮಾರ್ಗ ಸಿಕ್ಕಿತ್ತು.

ಮರುದಿನ ಎದ್ದು ತನ್ನ ಶಾಲೆಯ ಪಾಠಗಳನ್ನು ಸರಿ ಮಾಡುತ್ತಿದ್ದ. ಅಷ್ಟರಲ್ಲಿ ಅವರ ತಂದೆಯನ್ನು ಕರೆಯಲು ಯಾರೋ ಬಂದರು. ತಂದೆಯೂ ಹೋದ. ಅವನಿಗೆ ಹೆದರಿಕೆ ಇನ್ನೂ ಕಡಿಮೆಯಾಯಿತು. ಗಡಿಬಿಡಿ ಮಾಡಿದ. ತನಗೆ ಗುರುಗಳು ಶಾಲೆಗೆ ಬೇಗನೇ ಬರಲು ಹೇಳಿದ್ದಾರೆ ಎಂದು ಹೇಳಿ ತಮ್ಮನನ್ನು ಹಿಂದೆ ಬಿಟ್ಟು ಶಾಲೆಗೆ ಹೊರಟೇಬಿಟ್ಟ. ಅವನು ಕಾಲು ಹೊರಗೆ ಇಡುತ್ತಿರುವಂತೆ ತಂದೆ ಎದುರು ಬಂದರು. ನಗುತ್ತ ತಲೆಯ ಮೇಲೆ ಕೈಯಿಟ್ಟು ಯಾಕೆ ಇಷ್ಟು ಬೇಗನೆ ಶಾಲೆ ಎಂದರು. ಇವನು ಮತ್ತೆ ಅದೇ ರಾಗವನ್ನು ಹಾಡಿದ. ತಂದೆಯವರು ನಾನು ನಿನ್ನೊಡನೆ ಬರುತ್ತೇನೆ ಎಂದಾಗ ಇವನ ಎದೆ ಒಡೆಯಿತು. ಸುಮ್ಮನೆ ನಿಂತ.

ತಂದೆಯವರು ತಾಯಿಯನ್ನು ಕರೆದು ಅಂಗಡಿಯಿಂದ ತರಿಸಿದ ಸಾಮಾನು ತೋರಿಸಲು ಹೇಳಿದರು. ಆಕೆಗೆ ಇದೆಲ್ಲಿ ವಿಚಿತ್ರ ಎನಿಸಿತು. ಹೊಸದೆನಿಸಿತು. ಗುಣುಗುತ್ತ ಪುಡಿಕೆ ತಂದಿಟ್ಟಳು. ತಂದೆ ಅವುಗಳನ್ನು ಎತ್ತಿಕೊಂಡು ಕೇಳಿದರು "ಜೀರಿಗೆ, ಸಾಸಿವೆ, ಬೆಲ್ಲ ಎಷ್ಟೆಷ್ಟು ಬೆಲೆಯವು?" ತಾಯಿಗೆ ಹೇಳಿದಂತೆ ಧೈರ್ಯದಿಂದ ಹೇಳಲು ಆಗಲಿಲ್ಲ. ತೊದಲುತ್ತ ಅವುಗಳ ಬೆಲೆ ಹೇಳಿದ. ತಂದೆ ಸಮೀಪ ಕರೆದು ಜೋರಿನಿಂದ ಕೆನ್ನೆಗೆ ಬಿಟ್ಟರು. ತಲೆಯ ಮೇಲಿನ ಟೊಪ್ಪಿಗೆ ಹಾರಿ ಹೋಯಿತು.

ಅಣ್ಣನಿಗೆ ಸಿಕ್ಕ ಬಹುಮಾನ ನೋಡಿ ತಮ್ಮ ಚೀರುತ್ತ ತಾಯಿಯ ಸೀರೆಯ ಸೆರಗಿನಲ್ಲಿ ಸೇರಿದನು. ತಾಯಿಗೂ ಗೊಂದಲ ಏನೆಂದು ಕೇಳಿದಳು. ಆಗ ಹೂರಣ ಹೊರಬಿತ್ತು. ಮುಂಜಾನೆ ಅಂಗಡಿಯ ಶೆಟ್ಟರು ಕರೆಸಿದ್ದರು. ಕರೆಸಿ ನಿನ್ನೆ ಇವನು ಒಂದಾಣೆಯ ಸಾಮಾನು ಕಟ್ಟಿಸದೆ ಮೂರು ದುಡ್ಡಿನ ಸಾಮಾನು ಕಟ್ಟಿಸಿದನಂತೆ. ಬೆಲ್ಲ ಎಂಟಾಣೆಯ ಬದಲು ಆರು ದುಡ್ಡಿನದು ಕಟ್ಟಿಸಿದನಂತೆ. ಶೆಟ್ಟರಿಗೆ ಆಗಲೇ ಸಂಶಯ ಬಂದಿತು. ಹುಡುಗ ಜಾಣ ವಿದ್ಯಾರ್ಥಿ ಬಹುಶಃ ತುಡುಗು ಮಾಡಲು ಪ್ರಾರಂಭಿಸುತ್ತಿರಬಹುದೆಂದು ಸಂಶಯ ಬಂದಿತಂತೆ. ಹೀಗೆಯೇ ಬಿಟ್ಟರೆ ಒಳ್ಳೆಯ ಹೆಸರು ಮಾಡುವಂಥ ತಮ್ಮೂರಿನ ಬಾಲಕ ತುಡುಗುಮಾಡಿ ಕೆಟ್ಟದಾರಿಗೆ ಬೀಳುವನಲ್ಲ ಎಂದು ವಿಚಾರಿಸಿ ನನ್ನನ್ನು ಕರೆಸಿ ಹೇಳಿದರು ಎಂದು ತಂದೆ ಹೇಳಿದರು.

ಅಂಗಡಿಯ ಶೆಟ್ಟಿ ಇಷ್ಟು ಬುದ್ಧಿವಂತ ಎನ್ನುವುದು ಹುಡುಗನಿಗೇನು ಗೊತ್ತು. ಈಗ ಕಂಗಾಲಾದ. ಒಂದು ತಾಸಿನ ಹಿಂದೆ ಗೆದ್ದ ಹುರುಪು ಈಗ ಮಾಯವಾಗಿ ಸೋಲಿನ ಕಹಿ ಬಂದಿತ್ತು. ಅಳು ತಾನಾಗಿಯೇ ಹೊರಬಂದಿತು. ಬೆನ್ನಿನ ಮೇಲೆ ಡುಂ ಎಂಬ ಗುದ್ದು. ತತ್ತರಿಸಿ ಹೋದ. ತಂದೆಯ ಕೈ ಮೇಲೆದ್ದಿತು. ಅಷ್ಟರಲ್ಲಿ ಹುಡುಗ ಕಿಸೆಯಲ್ಲಿ ಕೈಹಾಕಿ ಒಂದಾಣೆಯನ್ನು ತೆಗೆದು ಹಳ್ಳು ಚೆಲ್ಲುವಂತೆ ಚೆಲ್ಲಿದ. ತಾಯಿ ಹೇಳಿದಳು "ಇನ್ನೊಂದು ಹಾಕಿರಿ....ಹುಡುಗನಿಗಂತೂ ಜಗತ್ತೇ ಶೂನ್ಯವಾಯಿತು. ತಂದೆ ಅವನ ಕಿವಿ ಹಿಡಿದು ಹೊರಗೆ ಎಳೆದುಕೊಂಡು ಹೋದರು. ಓಣಿಯಲ್ಲಿ ಎಲ್ಲರೂ ಕೇಳುವವರೇ. ನೇರವಾಗಿ ದಿನಸಿ ಅಂಗಡಿಗೆ

ಒಯ್ದರು. ಅಲ್ಲಿ ಶೆಟ್ಟರ ಕಾಲಿಗೆ ನಮಸ್ಕರಿಸಲು ಹೇಳಿದರು. ತಪ್ಪಾಯಿತು ಎನಿಸಿದರು. ಇನ್ನೊಮ್ಮೆ ಹೀಗೆ ಮಾಡುವುದಿಲ್ಲ ಎಂದು ಹೇಳಿಸಿದರು. ರಾಮಾಯಣ ಮುಗಿಯಿತು.

ಅದೇ ಹುಡುಗ ಓದಿದ, ಚೆನ್ನಾಗಿ ಓದಿ ಇಂದು ಪೆನ್‌ಶಿನ್ ಪಡೆಯುತ್ತಿರುವ ದೊಡ್ಡ ವ್ಯಕ್ತಿ. ಇಂದಿಗೂ ಶೆಟ್ಟರನ್ನು ನೆನೆಸುತ್ತಾನೆ. ಆಗ ಇಡೀ ಸಮಾಜವೇ ಪಾಲಕರಂತೆ ಇತ್ತು. ಯಾವೊಬ್ಬ ಹುಡುಗ ಎಲ್ಲಿಯೂ ತಪ್ಪು ಎಸೆಗದಂತೆ ಎಚ್ಚರ ವಹಿಸುತ್ತಿತ್ತು. ಮಕ್ಕಳನ್ನು ಹೇಗೆ ಬೆಳೆಸಬೇಕೆಂಬುದನ್ನು ಸಮಾಜದ ಎಲ್ಲರೂ ವಿಚಾರಿಸುತ್ತಿದ್ದರು. ತಮ್ಮ ಲಾಭದ ಬಗ್ಗೆ ಚಿಂತಿಸದೇ ಸಮಾಜದ, ಊರಿನ, ದೇಶದ ಲಾಭ ವಿಚಾರಿಸುತ್ತಿದ್ದರು. ತಮ್ಮೂರಿನ ಯಾವ ಹುಡುಗರೂ ಕೆಡಬಾರದು. ಅವರಿಗೆ ಕಲ್ಯಾಣ ಆಗಬೇಕು ಎಂಬುದೇ ಅವರ ಗುರಿ ಇರುತ್ತಿತ್ತು.

ಇಂದು—(೧೯೯೭).

ಇದು ಇನ್ನೊಂದು ಘಟನೆ. ಇದು ನಡೆದದ್ದು ನಡೆಯುತ್ತಿರುವುದು ೧೯೯೭ರಲ್ಲಿ. ಸ್ವಾತಂತ್ರ್ಯ ಸಿಕ್ಕು ಈಗ ಐವತ್ತು ವರ್ಷಗಳಾಗಿವೆ.

ಒಂದು ಚಿಕ್ಕ ಕುಟುಂಬ. ಕುಟುಂಬದಲ್ಲಿ ಗಂಡ, ಹೆಂಡತಿ, ಒಂದು ಗಂಡು ಮಗು ಒಂದು ಹೆಣ್ಣು ಮಗು ಇದ್ದರು. ಬಹಳ ಅನ್ಯೋನ್ಯವಾಗಿದ್ದರು. ಗಂಡ ಒಂದು ಕಾಲೇಜಿನಲ್ಲಿ ಪ್ರಾಧ್ಯಾಪಕ. ಸಂಬಳ ಸಾಕಷ್ಟಿತ್ತು. ಮಕ್ಕಳಿಗೆ, ತಮಗೆ ತಿಂದುಡಲು, ಮನೋರಂಜನೆಗೆ ಯಾವುದೇ ಕಡಿಮೆ ಇರಲಿಲ್ಲ. ಮಕ್ಕಳು ಬೇಡಿದ್ದು ಕೊಡಿಸುವ ಆತುರ ಹಾಗೂ ಸಂತೋಷ ಇಬ್ಬರಲ್ಲೂ ಇದ್ದವು. ಹುಡುಗ ಸುಮಾರು ೧೦ ವರ್ಷದವನು. ಹುಡುಗಿ ೮ ವರ್ಷದವಳು. ಮಕ್ಕಳು ಸ್ಕೂಲಿಗೆ ಹೋಗುವಾಗ ಅವರ ಕಿಸೆಯಲ್ಲಿ "ಪಾಕೆಟ್‌ಮನಿ" ಎಂದು ಒಂದೆರಡು ರೂಪಾಯಿ ಇಡುವುದು ವಾಡಿಕೆ. ಬರಬರುತ್ತ ಮಕ್ಕಳಿಗೆ 'ಪಾಕೆಟ್‌ಮನಿ'ಯ ರುಚಿ ಹತ್ತಿತು. ತಂದೆ-ತಾಯಂದಿರು ಮರೆತರೂ ಮಕ್ಕಳು ನೆನಪಿಟ್ಟು ಕೇಳುತ್ತಿದ್ದವು. ಅದಕ್ಕೆ ತಂದೆ-ತಾಯಂದಿರು ಹೆಮ್ಮೆಪಡುತ್ತಿದ್ದರು. ಅಂದರೆ ತಮ್ಮ ಮಕ್ಕಳು ತಮಗಿಂತ ಚೂಟಿ ಎಂದು. ತಾವು ಮರೆತರೂ ಅವರು ಮರೆಯದೇ ಕೇಳುವುದು ಒಂದು ರೀತಿಯ ಪದವಿಯೇ ಎನಿಸಿತ್ತು.

ಮಗನ ಶಾಲೆಯ ಎದುರಿಗೆ ಒಂದು ಚಿಕ್ಕ ಅಂಗಡಿ. ಅಂಗಡಿಯ ಮಾಲೀಕ ಯಾವ ಊರಿನವನೋ ಎಂಬುದು ಗೊತ್ತಿಲ್ಲ. ಅವನು ಒಳ್ಳೆಯವನೋ ಕೆಟ್ಟವನೋ ಎನ್ನುವುದೂ ಗೊತ್ತಿರಲಿಲ್ಲ. ಅವನ ಅಂಗಡಿಯಲ್ಲಿ ತರತರದ ಪೆಪ್ಪರಮೆಂಟು, ಚಾಕಲೇಟು, ಕೆಲವು ಸಿಹಿ ತಿನಿಸು, ಹಣ್ಣುಗಳು ಇರುತ್ತಿದ್ದವು. ಮಕ್ಕಳಿಗೆ ಬಿಡುವು ಆದೊಡನೆ ಎಲ್ಲವೂ ಜಿಗಿಯುತ್ತ ಇವನ ಅಂಗಡಿಗೆ ದಾಳಿ ಮಾಡುತ್ತಿದ್ದವು. ತಮ್ಮ ತಮ್ಮ "ಪಾಕೆಟ್‌ಮನಿ" ಯನ್ನು ಕೊಟ್ಟು ಬೇಕಾದ ತಿನಿಸು ಪಡೆದು ಕೇಕೆ ಹಾಕುತ್ತ ತಿನ್ನುತ್ತಿದ್ದವು. ಹದಿನೈದು ಇಪ್ಪತ್ತು ಮಿನಿಟುಗಳಲ್ಲಿ ಅವನಿಗೆ ನೂರಾರು ರೂಪಾಯಿಗಳ ವ್ಯಾಪಾರ ನಡೆಯುತ್ತಿತ್ತು. ಅವನಿಗೆ ಖುಷಿಯೋ ಖುಷಿ. ಕೆಲಮಕ್ಕಳು ಹಣ ತರದಿದ್ದರೂ ಅವರಿಗೆ ಬೇಕಾದ ವಸ್ತು ಕೊಟ್ಟು ನಾಳೆ ತರಲು ಹೇಳುತ್ತಿದ್ದ. ಇದ

ರಿಂದ ಮಕ್ಕಳು ಅವನನ್ನು ಬಹುವಾಗಿ ಮೆಚ್ಚುತ್ತಿದ್ದವು.

ಒಂದೊಂದು ಸಲ ಮಕ್ಕಳು ರೂಪಾಯಿ –ಎರಡು ರೂಪಾಯಿಗಳಲ್ಲ, ನೂರಾರು ರೂಪಾಯಿಗಳನ್ನು ತಂದುಕೊಡುತ್ತಿದ್ದವು. ಹಣ ತೆಗೆದುಕೊಂಡು ಅವರಿಗೆ ಶಬ್ಬಾಸ ಹೇಳಿ ಅವರು ಉಳಿದ ಮಕ್ಕಳಿಗಿಂತ ಜಾಸ್ತಿ ಜಾಣರು ಎನ್ನುವಂತೆ ಮಾತಾಡುತ್ತಿದ್ದ. ಉಳಿದವರೂ ಹಾಗೆ ಮಾಡಲು ಮನಸ್ಸಾಗು ವಂತೆ ಮಾಡುತ್ತಿದ್ದ. ಇದರಿಂದ ಉತ್ತೇಜನ ಗೊಂಡ ಮಕ್ಕಳು ತಾವೂ ಹೆಚ್ಚಿನ ಹಣ ತರತೊಡಗಿದವು. ಅಷ್ಟು ಹಣವನ್ನು ಪಾಲಕರು ಮಕ್ಕಳಿಗೆ ಕೊಡುವುದು ಸಾಧ್ಯ ವಿರಲೇ ಇಲ್ಲ. ಅಷ್ಟು ಹಣ ಅವರಿಗೆ ದೊರೆಯಬೇಕಾದರೆ ಅವರು ಏನು ಮಾಡು ತ್ತಿರಬಹುದೆಂದು ಅಂಗಡಿಯವನು ತರ್ಕಿಸ ಬಹುದಿತ್ತು. ಅವನು ಅದರ ಗೋಜಿಗೆ ಹೋಗಲೇ ಇಲ್ಲ. ಬಂದಷ್ಟು ಹಣವನ್ನು ಡಬ್ಬಿಗೆ ಹಾಕುವ ಕೆಲಸವನ್ನು ತ್ವರೆಯಾಗಿ ಮಾಡುತ್ತಿದ್ದ. ಆತನಿಗೆ ಇನ್ನೂ ಬೇಗನೇ ಜಾಸ್ತಿ ಹಣ ಮಾಡುವ ಆಸೆ. ಕಾರಣ ಅವನು ಹೊಸ ಯೋಜನೆ ಮಾಡಿದ. ಸ್ಥಿತಿ ವಂತರ ಮಕ್ಕಳಿಗೆ ಜಾಸ್ತಿ ಹಣ ತರಬಲ್ಲ ಮಕ್ಕಳಿಗೆ ಒಂದು ದಿನ ಪುಸಲಾಯಿಸಿ ಯಾವುದೋ ಗುಳಿಗೆಗಳನ್ನು ಕೊಟ್ಟು ನುಂಗಲು ಹೇಳಿದ. ಮಕ್ಕಳು ಆ ಗುಳಿಗೆ ಗಳನ್ನು ಸೇವಿಸಿದವು. ಗುಳಿಗೆ ನುಂಗಿದ ತರುವಾಯ ಮಕ್ಕಳು ಒಂದು ಗುಂಗಿನಲ್ಲಿ ಇಳಿದವು. ಆ ಗುಂಗು ಅವರನ್ನು ಬೇರೆ ಲೋಕಕ್ಕೆ ತಳ್ಳಿತು. ವರ್ಗಗಳಿಗೆ ಹಾಜರಾಗು ವುದನ್ನೇ ಬಿಟ್ಟು ಒಂದು ಗಿಡದ ನೆರಳಿಗೆ ಕೂಡ್ರತೊಡಗಿದವು. ಬರಬರುತ್ತ ಅಂಥ ಗುಳಿಗೆಗಳೇ ಬೇಕೆಂದು ಹಠ ಹಿಡಿಯುತ್ತಿ ದ್ದವು. ಅಂಗಡಿಕಾರ ಪ್ರಾರಭದಲ್ಲಿ ಕೊಡುತ್ತ ಬಂದ. ಮುಂದೆ ಅವುಗಳ ಬೆಲೆ ಹೆಚ್ಚು. ಕಾರಣ ಹೆಚ್ಚು ಹಣ ಕೊಟ್ಟರೆ ಮಾತ್ರ ಅವು ದೊರೆಯುತ್ತವೆ ಎಂದು ಹೇಳಿದ. ಕೆಲ ಮಕ್ಕಳು ನೋಟಿನ ಮಡಿಕೆ ತಂದವು. ಗುಳಿಗೆ ಕೊಟ್ಟು ಹಣ ಮಾಡಿದ.

ಈ ಮಕ್ಕಳ ಮೇಲೆ ಮನೆಯವರಿಗೂ ಶಾಲೆಯ ಮಾಸ್ತರರಿಗೂ ಸಂಶಯ ಮೂಡಿತು. ಸೂಕ್ಷ್ಮವಾಗಿ ನೋಡತೊಡ ಗಿದರು. ಮಕ್ಕಳು ಮನೆಯಲ್ಲಿಟ್ಟ ಹಣ ವನ್ನು ಕದಿಯಲು ಪ್ರಾರಂಭಿಸಿವೆ ಎಂಬುದು ತಿಳಿಯಿತು. ಶಾಲೆಗೆ ವರ್ಗಗಳಿಗೆ ಗೈರು ಹಾಜರ ಉಳಿಯುವುದೂ ಗೊತ್ತಾಯಿತು. ಇವೆರಡಕ್ಕಿಂತ ಹೆಚ್ಚಿನದೆಂದರೆ ಆ ಗುಂಪಿನ ಮಕ್ಕಳು ಮತ್ತು ತರುವ ಗುಳಿಗೆಗಳಿಗೆ ವ್ಯಸನಿ ಆಗಿದ್ದರು. ತಂದೆ–ತಾಯಂದಿರು ಎದೆ ಒಡೆದುಕೊಂಡರು. ಅತ್ತರು, ನೊಂದರು. ಮಕ್ಕಳನ್ನು ವಿಶೇಷ ಉಪಚಾರ ಕ್ಕೆಂದು ತಜ್ಞರ ಕಡೆಗೆ ಓಡಿದರು.

ಸ್ವಾತಂತ್ರ್ಯ ಬಂದಾಗ ಜನರಲ್ಲಿ ಇದ್ದ ಸಂಸ್ಕೃತಿ ಇಂದು ಬದಲಾಗಿದೆ. ಯಾರದೋ ಮನೆಯ ಹುಡುಗ ಒಂದಾಣೆ ಕದಿಯುವು ದನ್ನು ಸಂಶಯಪಟ್ಟ ಅಂಗಡಿಕಾರ ಹುಡು ಗನ ತಂದೆಯನ್ನು ಕರೆಸಿ ಹೇಳಿ ಹುಡುಗ ನಿಗೆ ಸರಿಯಾದ ಬುದ್ಧಿ ಕಲಿಸುವುದು ಅಂದಿನ ಸಂಸ್ಕೃತಿ ಆಗಿತ್ತು. ಇಂದಿನ ಸಂಸ್ಕೃತಿ ಹುಡುಗರಿಗೆ ಕಳವು ಮಾಡಲು ಪ್ರಚೋದಿಸುವುದು ಮತ್ತಿನ ಮದ್ದು ಗಳನ್ನು ಸೇವಿಸುವುದನ್ನು ಕಲಿಸುವುದು. ಏನೇ ಮಾಡಿ ತಾನು ಹಣವಂತನಾಗುವುದು ಇಂದು ಬದಲಾದ ಸಂಸ್ಕೃತಿ.

ಅಂಗವಿಕಲ ಕೊಯೋಟ್ ಕಲಿಸಿದ ಪಾಠ

ಸರಸ್ವತಿ ಬಡೆಕ್ಕಿಲ
ಎಂ.ಐ.ಜಿ ೩, ೧೦ನೇ ಅಡ್ಡ ರಸ್ತೆ
೨ನೇ ಮುಖ್ಯ ರಸ್ತೆ
ಶಾರದಾದೇವಿ ನಗರ, ಮೊದಲನೆ ಹಂತ
ಮೈಸೂರು-೫೭೦ ೦೨೩

ಉತ್ತರ ಅಮೆರಿಕದ ವಿಶಾಲ ಹುಲ್ಲುಗಾವಲುಗಳಲ್ಲಿ ವಾಸಿಸುವ ಪುಟ್ಟ ತೋಳವೇ ಕೊಯೋಟ್. ಇದರ ಜೀವನಕ್ರಮ ಮಾನವ ಜೀವನಕ್ಕೆ ಸದೃಶವಾದದ್ದು. ಮಾನವನ ಕ್ರೌರ್ಯಕ್ಕೆ ಬಲಿಯಾದರೂ ಸಾಯದೇ ತನ್ನ ಬದುಕಿನಿಂದ ಬುದ್ಧಿ ಮಾನವನಿಗೇ ಆ ಕೊಯೋಟ್ ನೀಡಿದ ವಿಶ್ವಾಸವೇ ಈ ಲೇಖನದ ವಸ್ತು.
"ಹೋರಾಟವಿಕ್ಕಿಸಲು ಬೇರಾದೆಯಲ್ಲದೆ ಬೇರುಂಟೆ ಜಗದೊಳಗೆ ನೀನಲ್ಲದೆ? ಆರು ಅರಿಯರು ನೀನು ಬೇರಾದ ಪಂಗಳನು ಮಾರಾರಿ ಶಿವ ಷಡಕ್ಷರಿ ಲಿಂಗವೆ!"

ನನ್ನ ಪತಿ ಹೇಳಿದರು "ಇದೊಂದು ವನ್ಯ ಜೀವಿ, ಇದರ ಜೀವನದೊಳಕ್ಕೆ ನಮ್ಮ ಪ್ರವೇಶ ಸರಿಯಲ್ಲ." ಆದರೆ ನನಗೂ ಮಕ್ಕಳಿಗೂ ಬೇರೆಯೇ ಆಲೋಚನೆಗಳಿದ್ದುವು, ಕಲ್ಪನೆಗಳಿದ್ದುವು.

ಮುಂಬೆಳಗು ಇನ್ನೂ ಹರಿದಿಲ್ಲ. ಅರುಣೋದಯಕ್ಕೆ ಮೊದಲಿನ ಸುಖನಿದ್ದೆಯಿಂದ—ಒಂದು ವಿಚಿತ್ರ ಸ್ವರ–ನನ್ನನ್ನು ಧುಗ್ಗನೆ ಎಚ್ಚರಿಸಿತು. ಅದು ಅಂತಿಂಥ ಸ್ವರವಲ್ಲ. ಈ ಲೋಕದ್ದೇ ಅಲ್ಲವೇನೋ ಎಂಬ ಸಂದೇಹ ಮೂಡುವಂಥಾದ್ದು. ಬಹುಶಃ ಸಾವಿರ ಸಾವಿರ ಪಿಶಾಚಿಗಳ ಅಳು ಇರಬಹುದೇನೋ! ಆ ಆಕ್ರಂದನ ನನ್ನ ಕಿವಿಯನ್ನು ಕಿಟ್ಟಾರನೆ ಕೀಲೈಸಿ ನಿದ್ದೆಯನ್ನು ಹೊಡೆದೋಡಿಸಿತ್ತು. ಮರಗಿಡಗಳೊಂದೂ ಬೆಳೆಯದ, ಏರು ತಗ್ಗಿಲ್ಲದ ಸಮಭೂಮಿ ಅರಿಜೋನಾ, ಇಲ್ಲಿರುವುದು ನಿಸರ್ಗನಿರ್ಮಿತ ಹುಲ್ಲುಗಾವಲು ಪ್ರೈಯರೀ. ಜನವಸತಿ ಅತಿವಿರಳ, ನಿರ್ಜನವೆಂದೇ ಹೇಳಬಹುದು. ಇಂಥದೊಂದು ತಾಣದಲ್ಲಿ ನಮ್ಮ ವಾಸ. ರಾತ್ರಿಯ ಹೊತ್ತು ವನ್ಯಮೃಗ ಪಕ್ಷಿಗಳ ವಿವಿಧ ಸ್ವರಗಳು ಕೇಳಿಸುತ್ತಿರುವುದು ತೀರಾ ಸಾಮಾನ್ಯ. ದೊಡ್ಡ ಗೂಬೆಯ 'ಹೂಂ'ಕಾರ, ಬಯಲು ಬೆಕ್ಕು ಬಾಬ್ ಕ್ಯಾಟ್‌ನ ಮಿಯಾಂವ್, ಸೂರ್ಯೋದಯಕ್ಕೆ ಮುನ್ನ ಮನೆಸೇರಲು ಧಾವಿಸುವ ಹಿಂಡು ಹಿಂಡು ಬಾವಲಿಗಳ ಕೀಚ್ ಕೀಚ್ ಧ್ವನಿ, ಎಲ್ಲ ಪ್ರತಿನಿತ್ಯದ ಹಾಡು.

ಆದರೆ ಇಂಥ ವಿದ್ಯುತ್ತಿನ ಆಘಾತದಂತೆ ಅತ್ಯಂತ ತೀಕ್ಷ್ಣ ಶಬ್ದ ಕೋಲಾಹಲ ಅಂದಿನವರೆಗೂ ನನ್ನ ಕಿವಿಗಳಿಗೆ ಅಪ್ಪಳಿಸಿದ್ದಿಲ್ಲ. ಇಂಥ ಭಯಂಕರ ಧ್ವನಿ ನಿಸ್ಸಂದೇಹ

ವಾಗಿಯೂ 'ಕೊಯೊಟೆ'ಗಳದ್ದೇ (ಪುಟ್ಟ ತೋಳ) ಇನ್ನಾವ ಪ್ರಾಣಿಗೂ ಇದು ಶಕ್ಯವಿಲ್ಲ. ಅದರಲ್ಲೂ ನನ್ನ ಮಲಗುವ ಕೊಠಡಿಯ ಕಿಟಕಿಯ ಬುಡದಿಂದಲೇ ಹೊರಟಿದೆ! ನೋಡಲು ಸ್ವಲ್ಪಮಟ್ಟಿಗೆ ನರಿಯನ್ನು ಹೋಲುವ ಈ ಪ್ರೈಯರೀ ತೋಳಗಳ ಅರಚುವಿಕೆಯಲ್ಲಿ, ಹತ್ತು ಹನ್ನೆರಡು ಸ್ಥಾಯಿಗಳ ಏರಿಳಿತ ವಿದೆಯೆನ್ನಬಹುದು ವಿಧವಿಧವಾದ ಅಪಸ್ವರಗಳು! ಅತ್ಯುಚ್ಚಸ್ಥಾಯಿಯ ಚೀರಾಟದಿಂದ ಪ್ರಾರಂಭಗೊಂಡು, ತೀರಾ ಮಂದ್ರದ, ಮತ್ತೆ ಮತ್ತೆ ಕಿವಿಯೊಳಗೆ ಗುಂಯಿಗುಡುವ ಗೂಬೆಯ ಸ್ವರಗಳ ಏಳಿತ, ಮೊರೆತದ ವರೆಗಿನ ಸ್ವರ ಸಂಘಾತ! ಎರಡೇ 'ಕೊಯೊಟೆ'ಗಳ—ಅರ್ಥಾತ್ ಇತ್ತ ನರಿಯೂ ಅಲ್ಲದ ತೋಳವೆನ್ನಲ್ಲೂ ಆಗದ ಈ ವಿಶಿಷ್ಟ ಜೀವಿಗಳ—ಕೂಗು ಒಂದೇ ವಿಧವಾಗಿರುವುದೂ ಉಂಟು; ಆದರೆ ನಾಲ್ಕು ಕೊಯೊಟೆಗಳ ಅರಚಾಟ ಹೇಗಿರುತ್ತದೆಂದರೆ ಹುಚ್ಚು ಹಿಡಿದ 'ಸಿಂಫೋನಿ' ವಾದ್ಯವೃಂದ ಪರ್ವತ ಶಿಖರಕ್ಕೆ ಬಡಿದು ಮತ್ತೆ ಪ್ರತಿಧ್ವನಿಸುತ್ತಿದೆಯೇನೋ ಅನ್ನಿಸಿಬಿಡುತ್ತದೆ.

ನಮ್ಮ ಸಾಕು ಪ್ರಾಣಿಗಳಿಗೆ ಅಪಾಯಕಾರಿಗಳಿವು! ನಿಜ. ಆದರೆ ಬಹು ಜಾಗರೂಕತೆಯುಳ್ಳ, ಯಾರಕ್ಕೈಗೂ ಸಿಗದಂತೆ ನುಣಿಚಿಕೊಳ್ಳಬಲ್ಲ ಬುದ್ಧಿಜೀವಿಗಳನ್ನು ನಮ್ಮ ಹುಲ್ಲು ಹೊಲದ ಹೊದರುಗಳೆಡೆಯಲ್ಲಿ ಕಾಣಲು ತವಕಿಸುತ್ತಿತ್ತು ನನ್ನ ಮನಸ್ಸು!

ನಿದ್ದೆ ಕಳೆದು ಹಾಸಿಗೆಯಲ್ಲೇ ಕುಳಿತಿದ್ದಾಗ ದೆವ್ವಗಳ ಕೂಗಿನ ಅಬ್ಬರ ತೀವ್ರತೆಯನ್ನೇರುತ್ತಾ ಏರುತ್ತಾ ಉಬ್ಬರಿಸಿ ಅತ್ಯುಚ್ಚಸ್ಥಾಯಿಗೇರಿ ಕರ್ಣಭೇದಕವಾಯಿತು. ಮತ್ತೆ 'ತತ್‌ಕ್ಷಣ'ದಲ್ಲಿ ಎಲ್ಲೆಡೆ ನಿಸ್ತಬ್ಧತೆ. ಕಿಟಕಿಯಾಚೆ ಸತ್ತಪ್ರಾಣಿಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿರಬಹುದೆಂದು ಎದ್ದು ಬಂದು ನೋಡಿದೆ. 'ಡ್ಯಾಂಡೇಲಿಯೊ' ಮರದ ಹಳದಿ ಹೂವುಗಳು ಉದುರಿಬಿದ್ದಿರುವಂತೆ ಮೊಲದ ರೋಮ ಗುಚ್ಛಗಳು ಮಾತ್ರ ಅಲ್ಲಲ್ಲಿ ಕಂಡು ಬಂದುವು.

ನನ್ನ ನೋಟ 'ಬಿಲ್'ನೆಡೆಗೆ (ನನ್ನ ಪತಿ) ಚಲಿಸಿತು. ಅವನಾಗಲೇ ಹುಲ್ಲುಗಾವಲಿನಲ್ಲಿದ್ದ. ಅವನಿದ್ದ ನೀಲಿಬಣ್ಣದ ಟ್ರ್ಯಾಕ್ಟರ್ ಒಂದು ಕಿಲೋಮೀಟರ್ ದೂರದಲ್ಲಿ ಕಾಣುತ್ತಿತ್ತು. ಮಧುರಸುಗಂಧ ಸೂಸುವ ಆಲ್ಫಾಲ್ಫಾ (ಹೆಚ್ಚಾಗಿ ಉತ್ತರ ಆಫ್ರಿಕದಲ್ಲಿ ಕಾಣಸಿಗುವ ದಪ್ಪ ಎಸಳಿನ ಹುಲ್ಲು) ಹುಲ್ಲಿನ ವಿಶಾಲ ಬಯಲ ಮೇಲೆ ಮುಸುಕಿದ್ದ ಬಿಳಿಯ ಮಂಜು ಟ್ರ್ಯಾಕ್ಟರ್‌ನ 'ಹೆಡ್‌ಲೈಟ್'ನ ಬೆಳಕಿನಲ್ಲಿ ಅಂಬೆಗಾಲಿಡುತ್ತಾ ಮೆಲ್ಲನೆ ಚಲಿಸುತ್ತಿರುವಂತೆ ಕಾಣಿಸುತ್ತಿತ್ತು. ಹಿಂದಿನ ದಿನವಷ್ಟೇ, ಎಣ್ಣೆ ಹಚ್ಚಿ ಮಸೆದು ಹರಿತಗೊಳಿಸಿದ್ದ ಹುಲ್ಲು ಕತ್ತರಿಗಳ ಉಕ್ಕಿನ ತಗಡುಗಳನ್ನು ಟ್ರ್ಯಾಕ್ಟರಿಗೆ ಹಚ್ಚಲಾಗಿತ್ತು. ಟ್ರಾಕ್ಟರಿನ ಬೆಳಕಿನಲ್ಲಿ ಅವು ಥಳಥಳಿಸುತ್ತಿದ್ದುವು. ಹುಲ್ಲು ಕತ್ತರಿಸುತ್ತಾ ಟ್ರ್ಯಾಕ್ಟರ್ ಮುನ್ನುಗ್ಗುತ್ತಾ ಇತ್ತು.

ಹನ್ನೆರಡು ಮತ್ತು ಒಂಬತ್ತು ವರ್ಷ ವಯಸ್ಸಿನ 'ಬೆಕ್ಕೀ' ಮತ್ತು 'ಜೇವಿಸ್' ಯರಿಗಾಗಿ ಉಪಾಹಾರ ಸಿದ್ಧಪಡಿಸುತ್ತಿದ್ದಂತೆ, ಕೊಯೊಟ ನನ್ನ ಯೋಚನಾಲಹರಿಯಿಂದ ಪೂರ್ತಿ ಮರೆಯಾಯಿತು.

ಮಕ್ಕಳಿಬ್ಬರೂ ಕರುಗಳಿಗೆ, ಮೊಲದಮರಿಗಳಿಗೆ, ತಿನ್ನಿಸುತ್ತಾ ಹೊರಗೆ ಹಿತ್ತಿಲಲ್ಲಿದ್ದರು. ಆಗ ಅಚಾನಕವಾಗಿ ಬೊಬ್ಬಿಡುತ್ತಾ ಅಡುಗೆಮನೆಗೆ ಓಡಿಬಂದಳು, "ಅಮ್ಮಾ, ಅಪ್ಪ ಒಂದು ಕೊಯಾಟೆಯನ್ನು ಕೊಂದೇ ಬಿಟ್ಟರು! ಇದೇ ಈಗ! ಓ ಅಲ್ಲಿ! ಬಯಲಲ್ಲಿ ನಾನೇ ಕಣ್ಣಾರೆ ಕಂಡೆ! ಅದು ಮೇಲಕ್ಕೆ, ಅಷ್ಟೆತ್ತರಕ್ಕೆ ನೆಗೆದು ಬಿದ್ದು ಹೋಯಿತು."

ಹುಲ್ಲುಕತ್ತರಿಸುತ್ತಾ ಮುನ್ನುಗ್ಗುವಾಗ ದಾರಿಗೆ ಅಡ್ಡಹಾಯುವ ಪ್ರಾಣಿಗಳ ಬಗ್ಗೆ ಯೋಚನೆ, ತಾಳ್ಮೆ, ನನ್ನ ಪತಿ ಮಹಾಶಯರಿಗೆ ಇರುವುದೇ ಇಲ್ಲ. ಆತನ ಟ್ರಾಕ್ಟರ್ ಸಾಗಿಹೋದ ದಾರಿಗುರುತು ಯಾವಾಗಲೂ 'ಬಿಟ್ಟ ಬಾಣದಂತೆ' ನೇರವಾಗಿರುತ್ತದೆ, ದಾರಿಯ ಎಡ ಬಲಗಳಲ್ಲಿ ಕತ್ತರಿಸಿದ ಹುಲ್ಲುಸಮಾನ ಅಂತರದಲ್ಲಿ ಪೇರಿಸಲಾಗಿರುತ್ತದೆ. ಒಂದು ದಿನ, ಹುಲ್ಲುಮೆದೆಯೊಳಗೆ ಬಾತುಕೋಳಿಯೊಂದು ಸತ್ತುಹೋಗಿತ್ತು. ಅಂದಿನಿಂದ ಮಕ್ಕಳಿಬ್ಬರೂ, ತಮ್ಮಪ್ಪನಿಗೆ ಎಚ್ಚರಿಕೆ ನೀಡತೊಡಗಿದ್ದರು. ಪ್ರತಿದಿನ ಸತ್ತ ಬಾತನ್ನು ನೆನಪಿಸುತ್ತಿದ್ದರು. "ಕ್ವೇಯಿಲ್‌ಗಳ ಗೂಡುಗಳಿವೆಯೋ ನೋಡಿಕೊಳ್ಳಿ ಅಪ್ಪಾಜಿ" ಎಂದು 'ಬೆಕ್ಕೀ' ಸೂಚಿಸುತ್ತಿದ್ದ 'ಹಾಂ! ಅಲ್ಲಿ ಬೆಕ್ಕು! ಅದರ ಮರಿಗಳೂ ಅಲ್ಲಿವೆಯೋ, ಏನೋ! ಮತ್ತೆ, ನಮ್ಮ ಮೊಲದ ಮರಿಗಳೆಲ್ಲಾ ಅಲ್ಲೇ ಆ ಗದ್ದೆಯಲ್ಲೇ ಇವೆಯಲ್ಲಾ!' ಜೇಮಿಯ ಕಳಕಳಿಯ ವಿವರಣೆ.

"ಆದರೆ ಅವೆಲ್ಲ ನನ್ನ ಬೆಳೆಯ ಅರ್ಧಾಂಶವನ್ನೂ ಹಾಳುಗೆಡವುತ್ತವೆಯಲ್ಲಾ? ನಮ್ಮ ಹಸುಗಳಿಗೆ ಉತ್ತಮ ಮೇವು ಬೆಳೆಸುವುದೇ ನನ್ನ ಗುರಿ! ಮರಿಗಳಿಗೆ ಗುಟುಕು ತಿನ್ನಿಸುವ ಪಕ್ಷಿ, ಮೊಲಗಳನ್ನು ಸಾಕುವುದು ನನಗೆ ಬೇಕಿಲ್ಲ!" ಹೀಗೆನ್ನುತ್ತಾ ಒಂದಿಷ್ಟೂ ಕ್ಷಮಾದಾನವಿಲ್ಲದೆ ಟ್ರಾಕ್ಟರ್ ಓಡಿಸುವುದು ಬಿಲ್‌ನ ಕ್ರಮ. ಹಿಂದೆ ಇಕ್ಕಡೆಗಳಲ್ಲೂ ಉಳಿಯುತ್ತವೆ ನೇರವಾದ ಸಾಲು, ಸಾಲು! ಹುಲ್ಲ ರಾಶಿಯು ಬೇಲು ಬೇಲು. ಅದೃಷ್ಟವಶಾತ್ ಇಂದಿನವರೆಗೂ ನಡೆದ ದುರಂತವೆಂದರೆ ಬಾತುಕೋಳಿಯದ್ದೊಂದೇ!

ಬಿಲ್ ಉಪಾಹಾರಕ್ಕೆಂದು ಮನೆಯೊಳಗೆ ಬಂದವನು, ಬೆವರಿ ತೊಯ್ದ ಹ್ಯಾಟನ್ನು ಗೋಡೆಯ ಮೊಳೆಗೆ ತಗಲಿಸಿ ಸೌದೆಒಲೆಯ ಪಕ್ಕದ ಕುರ್ಚಿಯಲ್ಲಿ ಉಸ್ಸೆಂದು ಕುಳಿತ.

"ನಾನೊಂದು ಕೊಯೋಟೆಯನ್ನು ಹೊಡೆದುಹಾಕಿದೆ! ಬರೀ ಅನುಮಾನವಲ್ಲ! ಜೇಮೀ ಕೂಡಾ ಹೇಳಿದಳು." ಚಿಂತೆಯ ಗೆರೆಗಳು ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದುವು. "ಕೆಲವು ದಿನಗಳಿಂದೀಚೆ, ಕಾಯಿಲೆಯಿಂದ ಸೋತು ಕಂಗಾಲಾದ ಒಂದು ಕೊಯೋಟೆಯನ್ನು ಹುಲ್ಲುಮೆದೆಯಾಚೆಯ ಹೊದರುಗಳಲ್ಲಿ ನೋಡುತ್ತಾ ಇದ್ದೆ. ಅದರ ಮುಖ ಕರುಣಾಜನಕವಾಗಿತ್ತು. ಅದು ಇಲಿಗಳನ್ನು ಹಿಡಿಯಲು ಟ್ರಾಕ್ಟರ್‌ನ ಹಿಂಭಾಗದ ಟೇಲರ್ ಬಳಿಯಲ್ಲಿ ಬರುತ್ತಿದ್ದುದನ್ನು ಟ್ರಾಕ್ಟರ್‌ನ ಹಿಂಗಾವು ಕನ್ನಡಿಯಲ್ಲಿ ಒಮ್ಮೆ ಕಂಡೂ ಇದ್ದೆ. ಒಂದಿಷ್ಟೂ ಭಯವಿರಲಿಲ್ಲ ಅದಕ್ಕೆ! ಈಗ ನೋಡು ಹೀಗಾಯಿತು!" ಸ್ವಲ್ಪ ಹೊತ್ತು ಸುಮ್ಮನಿದ್ದು ಬಿಲ್ ಹೇಳಿದ—

"ಅದೊಂದು ಹೆಣ್ಣು ಕೊಯೋಟಿ ಮೈಯ್ಯೆಳೆದುಕೊಂಡು ಪಕ್ಕದ ಹೊಲಕ್ಕೆ ಹೋಗಿ ಬಹುಶಃ ಅಲ್ಲಿ ಸತ್ತಿರಬೇಕು!"

"ಹೇಗೆ ಗೊತ್ತಾಯಿತು, ಅದು ಹೆಣ್ಣೆಂದು?"

"ಹೊಟ್ಟೆ ದೊಡ್ಡದಿತ್ತು" ಬಿಲ್ ಹೇಳಿದ "ಬಸುರಿ!"—ನನ್ನ ಎದೆ ನಡುಗಿತು.

"ಕೊಂದಿದ್ದೇನೆಂದು ನಿನ್ನ ಅನುಮಾನವಷ್ಟೇ ಇರಬಾರದೇಕೆ?"

"ಇಲ್ಲ! ಅದು ಸತ್ತಿದೆ. ಅದನ್ನು ತಿನ್ನಲು ರಣಹದ್ದುಗಳು ಬರುತ್ತಿವೆಯೇ ಎಂದು ಕಾಯುವುದರ ಹೊರತು ಇನ್ನೇನೂ ಮಾಡಲಾರೆವು ನಾವು."

ಆದರೆ ರಣಹದ್ದುಗಳು ಮಾತ್ರ ಆಕಡೆ ಸುಳಿಯಲೂ ಇಲ್ಲ. ಹೆಚ್ಚಿನಂಶ ಅದು ಅಲ್ಲೆಲ್ಲೋ ಬಿದ್ದು ನರಳುತ್ತಿರಬಹುದೇನೋ! ಅದರ ಬಗ್ಗೆ ಚಿಂತೆಯಾಗುವುದನ್ನು ನಿಲ್ಲಿಸಲಾಗಲಿಲ್ಲ ನನಗೆ.

ಬೇಸಗೆ ಕಳೆದು ಶರದೃತುವಿಗೆ ಜಾರುತ್ತಿತ್ತು ಕಾಲ. ಕೊಯೋಟೆಯ ನೆನಪುಗಳು ಮಸುಕಾಗತೊಡಗಿದ್ದುವು. ಮುಂದೆ ಹೇಮಂತ ಹತ್ತಿರವಾಗುತ್ತಾ ಇತ್ತು ಸುತ್ತುಮುತ್ತ ಹರಡಿದ್ದ ಮರಳುಗಾಡಿನ ಮೃಗಗಳು ಹಸಿವಿಂದ ಕಂಗೆಟ್ಟು ನಮ್ಮ ಹೊಲದೆಡೆಗೆ ನುಗ್ಗುವ ಧೈರ್ಯ ತೋರತೊಡಗಿದ್ದುವು. ಹಸಿವು ಅವುಗಳಲ್ಲಿ ಹುಚ್ಚು ಧೈರ್ಯ ತುಂಬ ತೊಡಗಿತ್ತು. ಆಹಾರ ಹುಡುಕುತ್ತಾ ನಮ್ಮ ಕೊಟ್ಟಿಗೆಗಳವರೆಗೂ ಬರತೊಡಗಿದುವು. ನೆತ್ತಿಯಲ್ಲಿ ಜುಟ್ಟಿನಂತೆ ಗೊಂಡೆಕೂದಲಿರುವ 'ಸ್ಕಂತ್' (ಅಳಲಿನ ಆಕಾರದ ಮಾಂಸಹಾರಿ ಪ್ರಾಣಿ) ಕರಡಿಯ ವಂಶಕ್ಕೆ ಸೇರಿದ ಚಿಕ್ಕಮೃಗ 'ಕೋಟಿ ಮುಂಡಿ', ಮುಳ್ಳುಹಂದಿ, ಮುಂತಾದ ಕ್ಷುದ್ರ ಮೃಗಗಳು ರಾತ್ರಿಯ ಹೊತ್ತು ನಮ್ಮ ಹಿತ್ತಿಲಿಗೆ ಆಕ್ರಮಣ ನಡೆಸತೊಡಗಿದುವು. ಹಾಲುತುಂಬಿದ ಜೋಳದ ಎಳೆಯ ಕಾಳುಗಳನ್ನು ತಿನ್ನಲು ಬರುವುದೂ ಹೆಚ್ಚಾಯಿತು.

ಜನವರಿ ಹಿಮಗಾಳಿಯನ್ನು ಹೊತ್ತು ತಂದಿತ್ತು. ಕೋಳಿ ಮನೆಗಳಲ್ಲಿ ಉಷ್ಣಮಾನ ಹೆಚ್ಚಿಸುವ ದೀಪಗಳನ್ನು ಉರಿಸಬೇಕಿನ್ನು, ಕುದುರೆಗಳಿಗೆ ಕಂಬಳಿಯ ಹೊದಿಕೆ ಹೊದೆಯಿಸಿ ಬಿಗಿದು ಕಟ್ಟಬೇಕಿನ್ನು! ಕೊಯೋಟೆಗಳು ನಮ್ಮ ಹೊಲಗಳಿಗೆ ಮತ್ತೊಮ್ಮೆ ದಾಳಿಇಡುವ ಋತುಮಾನ!

ಮಧ್ಯರಾತ್ರಿಯ ಸಮಯ! ಪೈಶಾಚಿಕ ಕಿರುಚಾಟದ ಪ್ರಥಮ ಸುರುಳಿ ನನ್ನ ಕಿವಿಗಳನ್ನು ಕೊರೆಯಿತು. ನಮ್ಮ ಕೋಳಿಗೂಡಿನ ಬಳಿಯಿಂದಲೇ ಹೊರಟಂತಿತ್ತು ಆ ಕರ್ಕಶಸ್ವರ. ನಾನು ತತ್‌ಕ್ಷಣ ಮೇಲುಡುಗೆ ಧರಿಸಿ ಹೊರಗೆ ಧಾವಿಸಿದೆ. ನನ್ನ ಟಾರ್ಚ್ ಲೈಟಿನ ಬೆಳಕಿನ ಝರಿಯಲ್ಲಿ ಕಂಡದ್ದೇನು? —ಒಂದು ಮುದಿಯಾದ ಕೊಯೋಟೆ. ಅದಕ್ಕೆ ಕಾಲುಗಳು ಮಾತ್ರ ಮೂರೇ! ಎಡಹಿಂಗಾಲಿನ ಮೊಣಗಂಟಿನ ಕೆಳಗೆ ಏನೂ ಇರಲಿಲ್ಲ! ಕಾಲು ಮೊಂಡಾಗಿತ್ತು.

"ಓಹ್! ಬಿಲ್‌ನ ಟ್ರಾಕ್ಟರ್ ಅದರ ಕಾಲೊಂದನ್ನು ಮಾತ್ರ ಕತ್ತರಿಸಿ ಹಾಕಿತ್ತು ಹಾಗಿದ್ದರೆ!" ನಾನು ಯೋಚಿಸಿದೆ. ಆದರೆ ಅದು ಬದುಕಿ ಉಳಿದದ್ದಾದರೂ ಹೇಗೆ? ಮೊಲಗಳನ್ನು ಹಿಡಿಯಲು ಹಿಂದಿನಂತೆ ಅದಕ್ಕೆ ಸಾಧ್ಯವೇ?

ಅದರ ಸ್ಥಿತಿ ದಯನೀಯವಾಗಿತ್ತು. ಕೇವಲ ಮೂಳೆಯ ಹಂದರವದು! ಮೈಯ ತುಪ್ಪಳವೆಲ್ಲ ಉದುರಿ ಇಲಿಯಂತಾಗಿತ್ತು. ಒಂದು ಕಾಲದಲ್ಲಿ ಪೊದೆಯಂತಿದ್ದ ಬಾಲ ಅಲ್ಲಲ್ಲಿ ಬೋಳಾಗಿ ಕುರುಚಲು ಕಟ್ಟಿತ್ತು.

ಅದರ ಮುಖದಲ್ಲಿ ಭಯವಾಗಲೀ, ಆಶ್ಚರ್ಯವಾಗಲೀ ಎರಡೂ ಇರಲಿಲ್ಲ. ದುರ್ದೆಶೆಯೇ ರೂಪುತಳೆದಂತಿದ್ದ ಮುಖದಲ್ಲಿನ ದುಃಖಾರ್ದ್ರ ಕಣ್ಣುಗಳು ದಯಾಯಾಚನೆ ಮಾಡುತ್ತಿರುವಂತೆ ಕಂಡಿತು. ಬಿಲ್‌ನ ದಾರಿಗೆ ಅಡ್ಡ ಬಂದ ಕೊಯೊಟಿ ಇದೇ ಸರಿ. ಅನುಮಾನವೇ ಇಲ್ಲ. ಹಾಗಿದ್ದಲ್ಲಿ ಅದರ ಮರಿಗಳೇನಾದುವು? ಅಪಘಾತದಿಂದಾಗಿ ಒಂದೆರಡು ಮರಿಗಳು ಮಾತ್ರವೇ ಬದುಕಿ ಉಳಿದಿರಬಹುದೇ? ಬದುಕಿದ್ದರೂ ಈ ಮೊಲೆಯುಣ್ಣುವ ಕಾಲ ಮುಗಿದಿರಬೇಕಲ್ಲ? ಸುತ್ತು ಮುತ್ತು ಬೆಳಕು ಹಾಯಿಸಿ ನೋಡಿದೆ. ಎಲ್ಲೂ ಮರಿಗಳಿಲ್ಲ.

ಶರೀರ ಒಣಗಿದ್ದರೂ ಆ ಸೂಕ್ಷ್ಮಮತಿ ಕೊಯೊಟೆಯ ಆಕರ್ಷಕ ಮುಖಕ್ಕೆ ಶೋಭೆ ನೀಡುವಂತಿದ್ದುವು, ಅದರ ಅಸಾಮಾನ್ಯ ಕಿವಿಗಳು. ಕಂದು ಹಳದಿಮಿಶ್ರ (ಆ್ಯಂಬರ್) ಬಣ್ಣದ ಕಣ್ಣುಗಳ ಮೇಲೆ ನೀಲ ವರ್ಣದ ಪರೆ ಹೊದೆಯಿಸಿದಂತಿತ್ತು. ಅವು ಕತ್ತಲಲ್ಲಿ ನೀಲಬೆಳಗಿನ ಚೆಂಡಿನಂತೆ ಗ್ಲಾಸ್ ಜೆಟ್‌ಗಳಲ್ಲಿ ಕಾಣಬರುವಂತೆ, ಪ್ರಕಾಶಿಸುತ್ತಿದ್ದುವು. ಬಡಪಾಯಿ ಕೊಯೊಟೆ! ಬಹುಶಃ ಅದಕ್ಕೆ ಕಣ್ಣು ಸರಿಯಾಗಿ ಕಾಣಿಸುತ್ತಿದೆಯೋ ಇಲ್ಲವೋ? ಅದರಿಂದಾಗಿಯೇ ಈ ರೀತಿ ಅಪಘಾತಕ್ಕೆ ಈಡಾಗಿರಬಹುದೇ?

ನನ್ನ ಯೋಚನೆಗಳಿಗೆ ಉತ್ತರ ನೀಡುತ್ತಿದೆಯೋ ಎಂಬಂತೆ ಅದರ ತುಟಿಗಳು ಅದುರಿದುವು. ಕೋರೆ ಹಲ್ಲುಗಳು ಹೊಳೆದುವು. ಅದರ ಕಣ್ಣು ಸರಿಯಾಗಿಯೇ ಇದೆ. ಮರಿಯ ಸಂರಕ್ಷಣೆಯ ಹೊಣೆ ಹೊತ್ತ ತಾಯಿಯ ಮುಖಭಾವ ಅಲ್ಲಿತ್ತು. ಖಂಡಿತವಾಗಿ ಅಥವಾ ಬೆಚ್ಚಿನಂತ, ಹತ್ತಿರದಲ್ಲೇ ಅದರ ಮರಿ ಇದೆ. ಕೊಯೊಟಿ ಮತ್ತು ನಾನು, ಪರಸ್ಪರ ಎವೆಯಿಕ್ಕದೆ ನೋಡುತ್ತಿದ್ದಂತೆ, ಅದಕ್ಕೆ ನಾನು ಅಪಾಯಕಾರಿಯಲ್ಲ ಎಂದು ಅರ್ಥವಾಗಿರಬೇಕು. ಬೆಳದಿಂಗಳಿಂದ ಉಂಟಾಗಿದ್ದ ನೆರಳಿನ ದಾರಿಯಲ್ಲಿ ಅದರ ಪಾಡಿಗೆ ಹೊರಟು ಹೋಗಲಿ” ಎಂದು ಯೋಚಿಸಿ ಅದರ ಮೋರೆಯ ಮೇಲೆ ಹಾಯಿಸಿದ್ದ ಬೆಳಕನ್ನು ನಂದಿಸಿದೆ. ಆ ಕ್ಷಣದಲ್ಲಿ ಕೊಯೊಟಿಗೆ ನನ್ನವರಿಂದಾದ ಅಪಚಾರದ ಫಲವಾಗಿ ದೊರೆತ ಈ ದುರಂತಮಯ ಜೀವನವೆಂಬ ವಿಚಾರ ಮನದಲ್ಲಿ ಮೂಡಿ ಹೃದಯ ಹಿಂಡಿದಂತಾಯಿತು. ಅದೊಂದು ಕೊಳ್ಳೆಗಾರನೆಂಬ ಭಾವ ಮನದಿಂದ ಮರೆಯಾಗಿ ಅಪರಾಧಿಗಳು ನಾವೆಂದು ಎದೆ ತಲ್ಲಣಿಸಿತು.

ಹಸಿವು ಅವನ್ನು ಸಾವಿನ ಅಂಚಿನವರೆಗೆ ಎಳೆದು ತಂದಿತ್ತು. ನಿಸರ್ಗನಿಯಮದಂತೆ ಕೊಯೊಟಿಗಳ ಆಹಾರ ಹಕ್ಕಿಗಳು, ಸಣ್ಣಪುಟ್ಟ ಕೀಟಗಳು, ಮೊಲ, ಇಲಿ, ಹೆಗ್ಗಣಗಳು. ಆದರೆ ಹಣ್ಣುಗಳೂ ಅವಕ್ಕೆ ಇಷ್ಟವೆಂದು ಕೇಳಿದ್ದೆ. ನಮ್ಮ ನಾಯಿಗೆಂದು ತಯಾರಿಸಿದ್ದ ಸೇಬುಹಣ್ಣಿನ ಮಿಶ್ರಣವನ್ನು ತಿನ್ನುವುದೋ ಏನೋ!

ನಾಯಿಡ್ಯೂಕ್, ಕೆಲವೊಮ್ಮೆ ಕಾಳಿನ ಕಣಜದ ಕಾವಲು ಬೆಕ್ಕುಗಳು ಅದರ ಊಟದ ಬಟ್ಟಲಿನಿಂದ ತಿನ್ನತೊಡಗಿದರೆ ಆಕ್ಷೇಪಿಸುವುದಿಲ್ಲ. ಆದರೆ ಇದೇ ಕೊಯೊಟಿ ಕೆಲವು ತಿಂಗಳ ಹಿಂದೆ ನಮ್ಮ ಸಾಕು ಮೊಲವನ್ನು ಈ ಜಾಗದಲ್ಲೇ ಕೊಂದು ಎಳೆದುಕೊಂಡು ಹೋದದ್ದನ್ನು ನೋಡಿದ್ದ ಡ್ಯೂಕ್ ಈಗ ತನ ಅನ್ನದ ಬಟ್ಟಲಿಂದಲೇ

ನ್ನಲು ಬಿಟ್ಟೇತೇ? ಅವರಲ್ಲೂ ತಾನು
ನ್ನದೆ ಉಳಿಸಿದ್ದನ್ನು?

ಆದರೀಗ ಈ ಬಗ್ಗೆ ನಾನು ಪ್ರಯತ್ನಿಸಲೇ
ಬೇಕು. ಮನೆಯೊಳಗೆ ಇಕ್ಕಿದ್ದ ನಾಯಿಯ
ಂಡಿಯನ್ನು ಡ್ಯೂಕನ ತಟ್ಟೆಗೆ ತುಂಬಿ
ೊಯೆಟಿಯ ಮುಂದಿಟ್ಟು ಮಲಗಲು
ಹೊರಟೆ. ಅಷ್ಟರಲ್ಲಿ ವಿಚಿತ್ರ ಸ್ವರ ನನ್ನನ್ನು
ಚಕಿತಗೊಳಿಸಿತು. ಹಿಂದೆ ತಿರುಗಿ ನೋಡಿ
ದಾಗ ಅನ್ನದ ತಟ್ಟೆಯ ಇಕ್ಕೆಡೆಗಳಲ್ಲಿ
ನಾಡುನಾಯಿಗೂ ಕಾಡು ನಾಯಿಗೂ
(ಕೊಯೋಟೆಗಳು ಒಂದು ರೀತಿಯಲ್ಲಿ ನಾಯಿ
ಗಳೇ ಎನ್ನಬಹುದು) ಕದನ ಪ್ರಾರಂಭ
ೊಳ್ಳುವ ಹಂತದಲ್ಲಿತ್ತು. ಅವುಗಳ ಮೈಯ್ಯ
ರೋಮಗಳು ಸೆಟೆದು ನಿಂತಿದ್ದವು.
ಕೊಯೋಟೆಯ ಕಿವಿಗಳು ಹಿಂದಕ್ಕೆ ಸರಿದು
ಅರಳಿ ನಿಂತಿದ್ದವು. ಹೊಟ್ಟೆಯನ್ನು ನೆಲಕ್ಕೆ
ತಗಲಿಸಿ, ಹಿಂಗಾಲು ಮುಂಗಾಲುಗಳನ್ನು
ಮಡಚಿ ಊರಿ ಎದುರಾಳಿಯನ್ನು ಗದರಿ
ಸುತ್ತಾ ನಡುನಡುವೆ ಬೊಗಳುತ್ತಾ
ಟ್ಟಿಲಿನ ಚಳಿಗೆ ಮೂತಿ ತರುತ್ತಾ ಇತ್ತು.
ಡ್ಯೂಕ್ ಥರಥರನೆ ಕಂಪಿಸುತ್ತಾ ಗುರು-
ಗುಡುತ್ತಾ ಇತ್ತು. ಕೊನೆಗೆ ತನ್ನ ದೊಡ್ಡ
ತಲೆಯನ್ನು ಮುಂಗಾಲುಗಳ ನಡುವೆ
ಹುದುಗಿಸಿ ಅಳುತ್ತಿರುವಂತೆ ಅರಚತೊಡ
ಗಿತು. ಸೋಲು ಅನುಭವಿಸಿದ ವ್ಯಥೆಯಿಂದ
ಅಲ್ಲೇ ಮುದುರಿ ಬಿದ್ದುಕೊಂಡಿತು.
ಕೊಯೊಟಿ ಮುಂದಕ್ಕೆ ಮುಖ ಚಾಚಿ
ತಟ್ಟೆಯ ಅನ್ನವನ್ನೆಲ್ಲಾ ಗಬಗಬನೆ ಗವಳಿ
ಸಿತು.

ಪತಿ ಬಿಲ್‌ಗೆ ಈ ವಿಷಯ ತಿಳಿಸಿದಾಗ
ತಲೆ ಕೊಡಹುತ್ತಾ ಆತ ಹೇಳಿದ—"ನಾವು
ಪ್ರಕೃತಿ ನಿಯಮಕ್ಕೆ ಅಡ್ಡಬರಬಾರದು.
ಈ ಪ್ರಾಣಿಗೆ ತನ್ನನ್ನು ತಾನೇ ಸಾಕಿ
ಕೊಳ್ಳುವ ಸಾಮರ್ಥ್ಯವಿಲ್ಲ. ಈಗ ನಮಗೆ
ಉಳಿದಿರುವುದು ಎರಡೇ ದಾರಿ. ಒಂದೋ
"ಈ ದಾರುಣ ಜೀವನದಿಂದ ಅದನ್ನು ಮುಕ್ತ
ಗೊಳಿಸಬೇಕು ಅಥವಾ ಪ್ರಕೃತಿಗೆ ಬಿಟ್ಟುಬಿಡ
ಬೇಕು."

"ಇಷ್ಟು ಕಾಲಬದುಕಿದೆ, ಬದುಕಲು
ಸಾಧ್ಯವಾಗಿದೆ ಅದಕ್ಕೆ ಎಂದ ಮೇಲೆ" ನಾನು
ಆಕ್ಷೇಪಿಸಿದೆ. "ಸಶಕ್ತವಾದುದೇ ತಾಳುವುದು,
ಬಾಳುವುದು ಎಂದು ನಿಮ್ಮ ಸಿದ್ಧಾಂತ
ವಾದರೆ ಇದು ಕೂಡ ಶಕ್ತಿಸಂಪನ್ನವಾಗಿದೆ
ಎನ್ನಬೇಕಲ್ಲ? ಒಂದು ಸಣ್ಣ ಸಹಾಯ
ಮಾಡುತ್ತಿದ್ದೇವೆ ನಾವು ಅಷ್ಟೇ!

ಮುಂದಿನ ಮೂರು ತಿಂಗಳಲ್ಲಿ ಕುಂಟುತ್ತಾ
ನಡೆವ, ನೆಗೆಯುವ ಆ ಕೊಯೋಟೆ ಹಲವಾರು
ಬಾರಿ ಮನೆಯ ಬಳಿ ಸುಳಿದಾಡಿದೆ. ಹಗಲೆಲ್ಲ
ಅದಕ್ಕೆ ಡ್ಯೂಕನ ತಟ್ಟೆಯಲ್ಲಿ ಉಣಬಡಿಸು
ತ್ತಿದ್ದೆ. ಆದರೆ ಆ ಸಮಯದಲ್ಲೆಲ್ಲ ಪ್ರತಿ
ಬಾರಿಯೂ ದೂರ ದೂರದವರೆಗೂ ಹರಡಿದ
ನಿರ್ಜನ ಹುಲ್ಲುಗಾವಲಿನಾಚೆಯಿಂದ ಅಳು
ತ್ತಿರುವ ಮುಲಗುತ್ತಿರುವ ಸದ್ದು ಕೇಳಿಬರು
ತ್ತಿತ್ತು. ಏನಾಗಿರಬಹುದು? ತಾಯಿಗಾಗಿ
ಅಳುವ ಮರಿ ಇರಬಹುದೇ? ಅಥವಾ
ಮರಿಯ ತಂದೆಯೂ ಅಲ್ಲಿ ಹಸಿವಿಂದ ನರಳು
ತ್ತಿರುವುದೇ? ಕೊಯೋಟೆಗಳ ದಾಂಪತ್ಯ
ಜೀವಮಾನಪರ್ಯಂತದ್ದು! ಅವು ಸಾಮೀಪ್ಯ
ವನ್ನು ಬಯಸುವ ಬೇಡಿಕೆಯಂತೂ, ಕೇಳು
ಗರ ಮನಮಿಡಿಯುವಂಥದ್ದು! ಮೊದಲ
ಬಾರಿ ಅದಕ್ಕೆ ಉಣಿಸು ನೀಡಿ ಎಂಟು ವಾರ
ಗಳು ಕಳೆದಾಗ ಕಂದು, ಕೇಪು, ಕಪ್ಪು
ಬಣ್ಣಗಳು, ಅದರ ಬಿಳಿ ಬೂದುತುಪ್ಪಳದ
ನಡುನಡುವೆ ಇಣುಕತೊಡಗಿದ್ದವು.
ಬಡಕಲು ಮೈಯ್ಯೂ ತುಸು ತುಂಬಿ
ಬಂದಿತ್ತು. ಒಂದು ದಿನ ಬೆಳಗ್ಗೆ ನನ್ನ

ಮಕ್ಕಳಿಗೆ ಹೇಳಿದೆ—ನಮ್ಮ ಕೊಯೋಟಿ ಈಗ ಆರೋಗ್ಯ ಹೊಂದುತ್ತಾ ಇದೆ. ಮುಂದೆ ಕೆಲವೇ ದಿನಗಳಲ್ಲಿ ಮೊದಲಿದ್ದಂತೆಯೇ ಆಗುವುದು."

"ಅಮ್ಮಾ, ಖಂಡಿತವಾಗಿಯಾ?"

"ಹೌದು, ನನಗೆ ಪೂರ್ಣ ವಿಶ್ವಾಸ ಇದೆ." ನನ್ನ ಬೆರಳುಗಳನ್ನು ಶಿಲುಬೆಯಾಕಾರದಲ್ಲಿಡುತ್ತಾ ಹೇಳಿದೆ.

ಸುತ್ತಮುತ್ತಲ ಎಲ್ಲ ಮೃಗ ಪಕ್ಷಿಗಳಿಗೆ ಒಂದೊಂದು ಹೆಸರಿಡುವ ನನ್ನ ಜೇಮೀ ಮುಗುಳು ನಗುತ್ತಾ ಹೇಳಿದಳು—ಹಾಂ ಅದೇ ಸರಿ. ನಾವದನ್ನು 'ವಿಶ್ವಾಸ್' ಎಂದು ಕರೆಯೋಣ!

ಬೆಚ್ಚಗಿನ ಹವೆ, ಆದರೆ ಎಂದಿನಂತಿಲ್ಲದೆ, ತುಂತುರು ಮಳೆಯಿಂದ ಒದ್ದೆಯಾದ ಏಪ್ರಿಲ್ ತಿಂಗಳು, ಸಮೃದ್ಧವಾಗಿ ಹಾತೆ, ಹುಳು, ಜೀರುಂಡೆಗಳಿಗೆ ಜನ್ಮ ನೀಡಿತು. ಮನೆಯ ಕಿಟಕಿ, ಬಾಗಿಲು, ಪರದೆಗಳನ್ನು ಹಿಂಡು ಹಿಂಡಾಗಿ ಬಂದು ಆಕ್ರಮಿಸಿಕೊಂಡುವು. ಅಲ್ಲಿಂದ ಮೆಲ್ಲನೆ ಮನೆಯೊಳಗೆ ನುಸುಳಿ ಹರಿದಾಡಲು, ಹಾರಾಡಲು ಪ್ರಾರಂಭಿಸಿದುವು. ಇವುಗಳ ಕಾಟದಿಂದ ಮುಜುಗರಪಟ್ಟು 'ಬಿಲ್' ಅವುಗಳನ್ನು ಆಕರ್ಷಿಸಿ ಕೊಲ್ಲಲು ಒಂದು ಮಿನುಗು ದೀಪ ತಂದಿಟ್ಟ. ಹುಳುಗಳು ದೀಪದೆಡೆಗೆ ಹಾರುತ್ತಿದ್ದುವು. ದೀಪವನ್ನು ಸುತ್ತುವರಿದ ಸರಿಗೆ ಬಲೆಯಲ್ಲಿ ಹರಿಯುಬಿಟ್ಟಿದ್ದ ವಿದ್ಯುತ್ತಿನ ಆಘಾತದಿಂದ ಫಡಫಡಿಸಿ ಕ್ಷಣಾರ್ಧದಲ್ಲಿ ಉರಿದು ಕರಕಾಗಿ, ಮಳೆ ಸುರಿವ ತೆರದಲ್ಲಿ ಕಾಂಕ್ರೀಟಿನ ನೆಲದ ಮೇಲೆ ರಾಶಿರಾಶಿಯಾಗಿ ಉದುರಿದುವು. ಅವನ್ನು ತಿನ್ನಲೂ ನಮ್ಮ ಧಾನ್ಯದ ಕಣಜದ ಕಾವಲು ಬೆಕ್ಕುಗಳ ದಂಡೇ ಬಂದುಬಿಟ್ಟಿತು.

ಒಂದು ದಿನ ಅಡುಗೆ ಮನೆಯಲ್ಲಿ ಮಿಕ್ಕಿದ್ದ ಆಹಾರವನ್ನು 'ವಿಶ್ವಾಸ್'ಗೆ ಕೊಡೋಣವೆಂದು ಯೋಚಿಸುತ್ತಿದ್ದಾಗಲೇ ಪರಿಚಿತವಾದ ಊಳಿಡುವ ಸದ್ದು ಕೇಳಿತು. ನಮ್ಮ ವಾಸದ ಕೋಣೆಯ ಕಿಟಕಿಯಿಂದ ಇಣುಕಿ ನೋಡಿದೆ. ದೀಪದೆಡೆಗೆ ಹಾರಿ ಉರಿದು ಹೊಗೆಯಾಡುತ್ತಿದ್ದ ಕೀಟಗಳನ್ನು ಅವು ನೆಲಕ್ಕೆ ಬೀಳುವ ಮೊದಲೇ ಆಕಾಶದಲ್ಲೇ ಹಾರಿ ಹಿಡಿದು ಕಚಕಚನೆ ಕಡಿದು ತಿನ್ನುತ್ತಾ, ಚಪ್ಪರಿಸುತ್ತಾ, ಮಲಗುತ್ತಾ ಇತ್ತು. ಜೇಮೀ ಮೆಲ್ಲನೆ ಪಿಸು ಧನಿಯಲ್ಲಿ ಹೇಳಿದಳು—ಖಂಡಿತವಾಗಿ ವಿಶ್ವಾಸ್ ಗೆ ಹಸಿಯಾಗಿ ತಿನ್ನುವುದಕ್ಕಿಂತ ಬೆಂದ ಆಹಾರವೇ ಇಷ್ಟವಿರಬೇಕು!" ಓದುತ್ತಿದ್ದ ಸಮಾಚಾರ ಪತ್ರಿಕೆಯ ಮೇಲಂಚಿನಿಂದ ಬಿಲ್ ಇಣಕಿ ನೋಡಿದ. ಕೊನೆಗೂ, ಹೋರಾಡಿ ಅಸ್ತಿತ್ವ ಉಳಿಸಿಕೊಂಡು ಸಶಕ್ತ ಜೀವಿಯೆನಿಸಿದ ಕೊಯೋಟೆಯ ಬಗ್ಗೆ ಅತನ ಆಸಕ್ತಿ ಹೆಚ್ಚುತ್ತಿರುವುದನ್ನು, ನಗೆಯಿಂದ ಅರಳಿದ್ದ ಅವನ ಕಣ್ಣುಗಳು ಸ್ಪಷ್ಟಪಡಿಸುತ್ತಿದ್ದುವು. ಮುಂದೆ ಕೆಲವು ದಿನ ಕಳೆದು ಅವುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಪುಸ್ತಕವೊಂದನ್ನು ಖರೀದಿಸಿ ತಂದಿದ್ದ. ಅದರಲ್ಲಿ ಬರೆದಿದ್ದ ವಿಚಾರಗಳು—ಮಳೆಯೇ ಬಾರದೆ ಕ್ಷಾಮ ಉಂಟಾದಾಗ ಕೂಡ ಕೊಯೋಟೆಗಳು ಇತರ ಸಣ್ಣ ಪುಟ್ಟ ಜೀವಿಗಳನ್ನೆಲ್ಲ ಹಿಮ್ಮೆಟ್ಟಿಸಿ ತಮ್ಮ ಜೀವ ಕಾಪಾಡಿಕೊಳ್ಳಬಲ್ಲವು. ಅವಕ್ಕಿರುವ ಅಪೂರ್ವವಾದ ಗಂಧಗ್ರಹಣ ಶಕ್ತಿಯಿಂದ ನೆಲದೊಳಗೆ ಮೇಲ್ಪದರದಲ್ಲಿರಬಹುದಾದ ನೀರ ಒರತೆಯನ್ನು ಕಂಡು ಹಿಡಿಯಬಲ್ಲವು ಮತ್ತು ಹಾಗೆ ಗೊತ್ತಾದ ಜಾಗದಲ್ಲಿ ಮೂತಿ, ಮುಂಗಾಲು ಹಿಂಗಾಲುಗಳಿಂದ

ತೂತು ಕೊರೆದು, ನೀರು ಕುಡಿದು, ಅಲ್ಲೆ
ಅವಿತಿದ್ದು, ಬಾಯಾರಿ ನೀರನ್ನರಸಿ ಬರುವ
ಹಕ್ಕಿ, ಚಿಕ್ಕ ಪ್ರಾಣಿಗಳ ಮೇಲೆರಗಿ ತಮ್ಮ
ಹಸಿವೆಯನ್ನೂ ನೀಗಿಸಿಕೊಳ್ಳಬಲ್ಲುವು.”

‘ವಿಶ್ವಾಸ್’ ನಮ್ಮ ಅಂಗಳಕ್ಕೆ
ಮತ್ತೊಮ್ಮೆ ಬಂದಾಗ ಗರ್ಭವತಿಯಾಗಿ
ದ್ದುದು ಗೊತ್ತಾಯಿತು. ಅದರ ಮೆಯ್
ತುಪ್ಪಳ ಬೆಳೆದು ಸುಂದರವಾಗಿತ್ತು. ಬಾಲ
ವಂತೂ ಅದ್ಭುತವಾಗಿತ್ತು. ಅದರ ಮಯ್ಯ
ಸೊಬಗಿಗೆ ಕಳೆ ಏರುವಂತೆ ಗುಜುರು ಗುಜು
ರಾಗಿ ಪೊದೆಯಂತೆ ಬೆಳೆದಿತ್ತು.

ಬಿಲ್‌ನ ಪುಸ್ತಕದಿಂದ ನನಗೆ ಇನ್ನಷ್ಟು
ವಿಷಯಗಳು ತಿಳಿದುವು—ಈ ಪ್ರಾಣಿ ವರ್ಗ
ದಲ್ಲಿ ಒಂದು ಬಸಿರಿಗೆ ಒಂದೇ ಮರಿ ಜನಿಸು
ವುದು—ಮೇಲ್ಜಾತಿಯ ಪ್ರಥಮ ವರ್ಗದ
ಪಶುಗಳ ಹಾಗೆ. ಇನ್ನೊಂದು ವಿಶೇಷವೆಂದರೆ
ಗರ್ಭಾವಸ್ಥೆಯ ಕೊನೆಯ ತಿಂಗಳಲ್ಲಿ
ಬಸುರಿಯು ಒಂದು ಗುಹೆ ಅಥವಾ ಮರದ
ಪೊಟರೆಯೊಳಗೆ ಆಶ್ರಯ ಪಡೆಯುತ್ತದೆ.
ಆ ಸಮಯ ಅದನ್ನು ಸಾಕುವ ಹೊಣೆ
ಅದರ ಸಂಗಾತಿಯದು ಮಾತ್ರವಲ್ಲ, ಅದರ
ಹಿಂಡಿನ ಎಲ್ಲ ಸದಸ್ಯರ ಜವಾಬ್ದಾರಿಕೂಡ.
ಮರಿಯು ಹೊರ ಬಂದು ಅದು ಮೊಲೆ
ಯುಣ್ಣುತ್ತಿರುವಷ್ಟು ಕಾಲವೂ ಈ ರೀತಿ
ಆರೈಕೆ ನಡೆಯುತ್ತಿರುತ್ತದೆ. ಮೊಲೆಯೂಡು
ವುದು ನಿಂತೊಡನೆ ತಾಯಿ ತನ್ನ ಆಹಾರ
ತಾನೇ ಹುಡುಕಿಕೊಳ್ಳಬೇಕು.

ಪುಸ್ತಕ ಕೊಂಡುತಂದಮೇಲೆ ಬಿಲ್‌ನ
ನಡವಳಿಕೆಯಲ್ಲಿ ಹಠಾತ್ತನೆ ಬದಲಾವಣೆ
ಕಂಡು ಬಂತು. ಅದು ಪ್ರಾರಂಭವಾದುದು
ಹೀಗೆ—ಒಂದು ದಿನ ಹುಲ್ಲು ಕತ್ತರಿಸುತ್ತಾ
ಟ್ರಾಕ್ಟರಿನಲ್ಲಿ ಮುಂದುವರಿದಿದ್ದ. ಆತನ
ಹಿಂಭಾಗದ ಅಷ್ಟಗಲ ಹುಲ್ಲು ಕತ್ತರಿಸದೆ
ಹಾಗೇ ಉಳಿದಿತ್ತು. ಬಯಲಿನ ಉಳಿದೆಲ್ಲ
ಕಡೆ ಹುಲ್ಲು ಕತ್ತರಿಸಿ ಹಾಕಿದ್ದ. ‘ಇದೇಕೆ
ಹೀಗೆ’ ಎಂದು ಕೇಳಿದ್ದಕ್ಕೆ—“ಇನ್ನೊಂದು
ಮೂರ್ಖ ಬಾತು! ಅಲ್ಲಿ ಗೂಡು ಕಟ್ಟಿ
ಕೊಂಡಿದೆ!” ಬಿಲ್ ಮಣ ಮಣಿಸಿದ.
ವಾರ ಕಳೆದು ಇನ್ನೊಂದು ದಿನ, ಒಂದು
ಉದ್ದ ಕಿವಿಯ ಮೊಲ-ಹೆಚ್ಚಾಗಿ ಅಮೇರಿಕ
ದಲ್ಲಿ ಕಾಣಸಿಗುವ—ಜ್ಯಾಕ್ ರ್‍ಯಾಬಿಟ್
ಆಲ್ಫಾಲ್ಫಾ ಹುಲ್ಲಿನ ಮೇಲೆ ನಿಶ್ಚಿಂತೆಯಿಂದ
ಕುಳಿತು “ಬಿಲ್ ನಿರಪಾಯಕಾರಿ” ಎಂದು
ಸಾದರ ಪಡಿಸಿತು! ಅದು ಹೀಗೆ!—
ಮತ್ತೊಂದು ಬಾರಿ ಬಿಲ್ ತನ್ನ ಬಿಟ್ಟ
ಬಾಣದಂತೆ ಸಾಗುವ ತನ್ನ ಪದ್ಧತಿಯನ್ನು
ಬದಲಾಯಿಸಿದ. ಕತ್ತರಿಗಳು ಬಳಸಿಕೊಂಡು
ಓರೆಕೋರೆಯ ದಾರಿ ನಿರ್ಮಿಸಿದುವು.

ಆಗಸ್ಟ್ ತಿಂಗಳ ಸುಡು ಬಿಸಿಲಲ್ಲಿ ಕತ್ತರಿ
ಸಿದ ಹುಲ್ಲನ್ನು, ಬಿಲ್ ರಾಶಿ ಒಟ್ಟು
ತ್ತಿದ್ದಾಗ ಇನ್ನೂ ದೊಡ್ಡ ಆಶ್ಚರ್ಯ
ಘಟಿಸಿತು. ಮೂರು ಕಾಲಿನ ಕೊಯೋಟೆ
ತನ್ನ ಪುಟ್ಟ ಮರಿಯೊಂದಿಗೆ, ಗದ್ದೆಯ
ಅಂಚಿನಲ್ಲೇ ಇತ್ತ ಕಡೆ ಬರುತ್ತಾ ಇತ್ತು.
ವಿಶ್ವಾಸ್‌ಗೆ ಈಗ ಯಾವ ಅಂಜಿಕೆಯೂ
ಇರಲಿಲ್ಲ. ಮೂರು ಕಾಲಲ್ಲೇ ನೆಗೆಯುತ್ತಾ
ಟ್ರಾಕ್ಟರ್ ಪಕ್ಕಕ್ಕೇ ನುಗ್ಗಿತು. ಬಿಲ್
ನೋಡುತ್ತಿದ್ದಂತೆ, ಭರಭರನೆ ರಾಶಿಮಾಡುವ
ಬ್ಲೇಡುಗಳ ಬಾಯ ಬಳಿಯಲ್ಲೇ,—
ಹುಲ್ಲೊಳಗೆ ಅಡಗಿದ್ದ ಇಲಿಗಳು ಹೊರ
ಬಂದು ಅತ್ತಿತ್ತ ಓಡುತ್ತಿದ್ದುವು.
ವಿಶ್ವಾಸ್‌ನ ಮರಿ-ಇಲಿಗಳ ಬೆನ್ನಟ್ಟು
ತ್ತಿತ್ತು, ಹಾರಿ ಹಿಡಿದು ತಿನ್ನುತ್ತಿತ್ತು.
ಹಲವಾರು ಇಲಿಗಳು ಅದರ ಹೊಟ್ಟೆಯನ್ನು
ಸೇರಿದರೂ ಇಲಿ ಬೇಟೆಯ ಆಟ ಮುಂದು
ವರಿಯುತ್ತಾ ಇತ್ತು. ಕೊನೆಗೆ ವಿಶ್ವಾಸ್
ಮರಿಯ ಕತ್ತನ್ನು ತನ್ನ ಬಾಯಲ್ಲಿ

ಅಮರಿಸಿ ಹಿಡಿದೆತ್ತಿ ನೆಲಕ್ಕೆ ಕೊಡವಿತು; ಮರಿಯು ಬಾಯೊಳಗಿಂದ ಇಲಿಯು ಕೆಳಕ್ಕೆ ಬೀಳುವಂತೆ ಕುಕ್ಕಿತು. ಉದುರಿದ ಇಲಿಯುನ್ನು ತಾನೇ ತಿಂದಿತ್ತು. ತಾಯಿ, ಮಗು, ಗದ್ದೆಯ ಏರಿಯಲ್ಲೇ ಮಲಗಿದುವು. ಬಿಲ್‌ನ ಆಶ್ಚರ್ಯಕ್ಕೆ ಎಣೆಯೇ ಇರಲಿಲ್ಲ. ಅಂದು ರಾತ್ರಿ ಬಿಲ್ ಈ ಕತೆಯನ್ನು ಹೇಳಿ ಮುಗಿಸಿದಾಗ ಮಗ ಕೇಳಿದ—"ಅಪ್ಪಾಜಿ, ಅವುಗಳು ಅಲ್ಲೇ ನಿದ್ದೆ ಹೊಡೆದವಾ?"

"ಬಹುಶಃ ಇಲ್ಲ" ಬಿಲ್ ಹೇಳಿದ... "ಮರಿಯಂತೂ ಖಂಡಿತ ನಿದ್ದೆ ಮಾಡಿರಲಾರದು." ಬಿಲ್‌ನ ಸ್ವರದಲ್ಲಿ ಅಕ್ಕರೆ ತುಂಬಿತ್ತು—ಮರಿ ತಾಯಿಯ ಮೂತಿಯನ್ನು ಕಚ್ಚಿತು. ಕಿವಿಗಳನ್ನು ನೆಕ್ಕಿತು. ಮತ್ತೆ ಅಲ್ಲೇ ತಾಯ ಬಗಲಲ್ಲೇ ಸುರುಳಿ ಸುತ್ತಿ ಮಲಗಿತು. ಎಷ್ಟು ತೃಪ್ತಿಯಿಂದ ವಿಶ್ವಾಸ್ ಮಲಗಿತ್ತೆಂದರೆ, ನೀನು ಪುಟ್ಟ ಮಗುವಾಗಿದ್ದಾಗ ನಿದ್ದೆ ಮಾಡುತ್ತಿದ್ದರೆ, ಅಮ್ಮ ನಿನ್ನ ಬಳಿಯಲ್ಲೇ ಮಲಗಿ ಸಂತೋಷದಿಂದ ನಿದ್ರಿಸುತ್ತಿದ್ದಂತೆ ಕಂಡಿತು". ಬಿಲ್ ನನ್ನೆಡೆಗೆ ನೋಡಿ ನಸುನಗೆ ಬೀರಿದ.

ಮುಂದೆ ಚಳಿಗಾಲ ಬರುತ್ತಿದ್ದಂತೆ, ನಾವೆಲ್ಲ ವಿಶ್ವಾಸ್‌ನ ಬಗ್ಗೆ ಯೋಚಿಸತೊಡಗಿದೆವು. ಈ ಭೀಕರ ಚಳಿಯಲ್ಲಿ ಅದರ ಕಥೆ ಏನಾದೀತು? ಮರಿಗೆ ಹಾಲೂಡುವುದು ಮುಗಿದಿದೆ. ಅದರ ಬಂಧುಗಳು ಇನ್ನೂ ಏಕೆ ಆಹಾರ ತಂದು ಕೊಟ್ಟಾವು? ಅದು ಮತ್ತೊಮ್ಮೆ ನಮ್ಮನ್ನು ಆಶ್ರಯಿಸಲು ಬಂದೀತೇ?

ಸರ್ವೋಚ್ಚ ಜೀವಿಗಳೆನಿಸಿದ ನಾವೂ ಅವುಗಳಿಂದ ಪಾಠ ಕಲಿಯಬಹುದು; ಅವುಗಳಂತೆ ಬಾಳಿನ ಕಷ್ಟಕೋಟಲೆಗಳನ್ನು ಎದೆಗುಂದದೆ ಎದುರಿಸಬಹುದು; ಮಾನವ ವಂಶವನ್ನು ಉಳಿಸಿಕೊಳ್ಳಬಹುದು.

ಪ್ರತಿರಾತ್ರಿ ಮಲಗುವ ಮುನ್ನ ಅದಕ್ಕಾಗಿ ಡ್ರ್ಯಾಕನ ತಟ್ಟೆಯಲ್ಲಿ ಹೆಚ್ಚು ಅನ್ನಾಹಾರ ಇರಿಸತೊಡಗಿದೆ. ಆದರೆ ಪ್ರತಿ ಮುಂಜಾನೆ ತಟ್ಟೆ ತುಂಬಿಕೊಂಡೇ ರಾತ್ರಿ ಹೇಗಿತ್ತೋ ಹಾಗೇ ಇರುತ್ತಿತ್ತು. ಒಂದು ದಿನವೂ ಖಾಲಿಯಾಗಲಿಲ್ಲ. ಪರಿಚಿತವಾದ ಕೂಗು ಅರಚಾಟಗಳು ರಾತ್ರಿಯಷ್ಟೇ ಅಲ್ಲ, ಹಗಲಿನಲ್ಲೂ, ದಿನೇ ದಿನೇ ಹೆಚ್ಚುತ್ತಿದ್ದುವು ಯಾವುದರ ಅಳು? ವಿಶ್ವಾಸ್‌ದೇ? ಮರಿಗಳದೇ, ಅದರ ಹಿಂಡಿನದೇ? ತಿಂಗಳುಗಳು ಭರದಿಂದ ಸಾಗುತ್ತಿದ್ದುವು.

ಕೊಯಿಲು ಮತ್ತೊಮ್ಮೆ ಪ್ರಾರಂಭವಾಯಿತು. 'ಬಿಲ್'ನ ಕಟಾವಿನ ಸಾಲುಗಳು ಅಂಕುಡೊಂಕಾಗುವುದು ಹೆಚ್ಚಿತು. ಕತ್ತರಿಸದೆ ಉಳಿಮಹೋದ ಹಸುರು ಹುಲ್ಲಲ್ಲಿ–ಲೆವೆಂಡರ್ ಹೂವುಗಳು–ಚಿತ್ತಾರವಿಟ್ಟಂತೆ ಅರಳಿಕೊಂಡುವು ನನ್ನ ಪ್ರಶ್ನಾರ್ಥಕ ನೋಟಕ್ಕೆ ಬಿಲ್ ಮುಜುಗರಗೊಂಡು ಹೇಳಿದ—ಅಲ್ಲೊಂದು ಕ್ವೇಯಿಲ್ ಹಕ್ಕಿಯ ಗೂಡಿದೆ. ಇತ್ತ ಕಡೆ ಮೂರ್ಖ ಮೊಲದಂಪತಿಗಳು! "ಬಿಲ್‌ನ ಕಣ್ಣಲ್ಲಿ ಹೊಳಪು ಮಿಂಚಿತ್ತು 'ಹಾಂ' ಅದಕ್ಕೇನೀಗ? ಸ್ವಲ್ಪ ಬಳಸು ದಾರಿಯಲ್ಲಿ ಟ್ರ್ಯಾಕ್ಟರ್ ಸಾಗಿಸಿದರಾಯಿತು ಅಷ್ಟೇ!" ಎಂಬ ಭಾವ ಇತ್ತು ಆ ನೋಟದಲ್ಲಿ.

ಏಪ್ರಿಲ್ ತಿಂಗಳ ಕೊನೆಯ ದಿನಗಳವು. ಅವನ ಟ್ರ್ಯಾಕ್ಟರ್‌ನ ಮಸೆದು ಹರಿತಗೊಂಡ ಕತ್ತರಿಗಳ ಸನಿಹದಲ್ಲೇ-ಕೆಲವೇ ಸೆಂಟಿಮೀಟರ್‌ಗಳ ಅಂತರದಲ್ಲಿ, ಹೆಣ್ಣು ಕೊಯೋಟೆಯೊಂದು ಗಾಡಿ ಚಲಿಸಿದಲ್ಲೆಲ್ಲಾ

ಜತೆಯಲ್ಲೇ ಬರುತ್ತಾ ಇತ್ತು. ಆರೋಗ್ಯ ತಾರುಣ್ಯ, ತುಂಬಿಕೊಂಡಿದ್ದ ಗರ್ಭಿಣಿ!

"ಒಂದು ಗಂಟೆ ಕಾಲ ನನ್ನನ್ನು ಹಿಂಬಾಲಿಸಿತು." ಬಿಲ್ ಹೇಳಿದ—ನನ್ನ ಭಯ ಅದಕ್ಕೆ ಎಳ್ಳಷ್ಟೂ ಇರಲಿಲ್ಲ. ಚೆನ್ನಾಗಿ ಪಳಗಿದ ಬೇಟೆಗಾರನ ತೆರದಲ್ಲಿ ಇಲಿಗಳನ್ನು ಹಿಡಿಯುತ್ತಾ, ತಿನ್ನುತ್ತಾ, ಹುಲ್ಲುಕತ್ತರಿಯ ಧಾರೆಯಿಂದ ತಪ್ಪಿಸಿಕೊಳ್ಳುತ್ತಾ ಹಿಂಬಾಲಿಸಿತು."

ಆ ಹಳೆಯ ಬೇಟೆಗಾರ್ತಿ? ಅದೆಲ್ಲಿದೆ? ಈ ಹೆಣ್ಣು ಬಹುಶಃ ವಿಶ್ವಾಸ್‌ನ ಇನ್ನೊಂದು ಮರಿ ಇರಬಹುದೇ? ಇದುವರೆಗೂ ನಾನು ಕಂಡಿರದ ಮರಿಯೇ? ವಿಶ್ವಾಸ್ ಈಗ ಎಲ್ಲಿರಬಹುದು? ಕೋಳಿಮರಿಗಳ ಗೂಡಿನ ಹತ್ತಿರದ ನೆರಳಲ್ಲಿ ಅವಿತಿರಬಹುದೇ? ಮೊದಲ ಬಾರಿಗೆ 'ವಿಶ್ವಾಸ್'ನ್ನು ಕಂಡ ಜಾಗದಲ್ಲಿ? ಅದರ ಮೊದಲ ಮರಿಯೇ ಈ ಬಸುರಿ ಕೊಯೋಟೆ ಇರಬಹುದೇ? ತನ್ನ ತಾಯಿ, ತಮ್ಮ—ಕಳೆದ ಬೇಸಿಗೆಯಲ್ಲಿ, ನಮ್ಮ ಹೊಲದಲ್ಲಿ ಇಲಿ ಬೇಟೆಯಾಡುತ್ತಿದ್ದುದನ್ನು ನೋಡುತ್ತ ನೋಡುತ್ತ ಕಲಿತಿರಬಹುದೇ? ಇಲ್ಲವಾದಲ್ಲಿ ಅದೆಂತು ಈ ರೀತಿ ನಿರ್ಭೀತಿಯಿಂದ ಹಿಂಬಾಲಿಸುತ್ತ ಇಲಿಗಳ ಬೇಟೆಯಾಡಿತು?

ಆ ದಿನ ರಾತ್ರಿ ಒಂದು ಕೊಯೋಟೆಯ ಕೂಗು ಕೇಳಿ ವಿಶ್ವಾಸ್‌ನ ಸ್ಮರಣೆ ಮತ್ತೆ ಮೂಡಿತು. ಅದರ ದುಃಖಾರ್ದ್ರ ಮುಖ. ಮತ್ತೆ ಫಳಕ್ಕನೆ ಕಾಣಿಸಿಕೊಳ್ಳುವ ಅದರ ಹಲ್ಲುಗಳು! "ನಮ್ಮ ವಿಶ್ವಾಸ್ ಎಂಥ ದೃಢಕಾಯದ ಪ್ರಾಣಿ ಎಂಬುದು ಇಂದು ನನಗೆ ಸ್ಪಷ್ಟವಾಗಿದೆ. ಅಂಗವಿಕಲೆಯಾದರೂ ಬದುಕಿರಲು, ಬದುಕಿ ತನ್ನ ವಂಶ ಬೆಳಸಲು, ಅದು ನಡೆಸಿದ ಹೋರಾಟವೆಂಥದು! ನಿಸರ್ಗ ನಿರ್ಮಿತ ಋತುಮಾನದ ಪೀಡನೆ, ತೊಡಕುಗಳ ನಡುವೆ,-ಮಾನವ ನಿರ್ಮಿತ ಕ್ರೌರ್ಯ ದೌರ್ಜನ್ಯಗಳ ನಡುವೆ—ಅದು ಮರಿಗಳನ್ನು ಹಡೆಯಿತು, ಅವುಗಳಿಗೆ ಬದುಕುವ ದಾರಿ ತೋರಿಸಿತು, ಪಳಗಿಸಿ ಸಮರ್ಥರನ್ನಾಗಿ ಮಾಡಿತು!"

"ನಿನ್ನ ಮಾತು ನಿಜ" ನಗೆಮೊಗದಿಂದ 'ಬಿಲ್' ಹೇಳಿದ— ಕೊಯೋಟ್‌ಗಳು ಬದುಕಿನ ಹೋರಾಟದಲ್ಲಿ ಗೆಲ್ಲುವಂಥವು; ಎಂಥ ಪರಿಸ್ಥಿತಿಯಲ್ಲೂ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ಎದೆಗಾರಿಕೆಯುಳ್ಳವುಗಳು".

"ನಿಜವಾಗಿಯೂ" ನಾನೆಂದೆ ಸಂತಸದಿಂದ.

* * *

ವಿಶ್ವಾಸ್ ನಮ್ಮಿಬ್ಬರಿಗೂ ಕಠಿಣ ಪರಿಶ್ರಮದ ಬಗ್ಗೆ, ಆ ಪರಿಶ್ರಮದ ಒಳಗೆ ಅಡಗಿರುವ ಅಂತಃಶಕ್ತಿಯ ಬಗ್ಗೆ ತಿಳಿಸಿಕೊಟ್ಟಿತ್ತು! ಸತತ ಪ್ರಯತ್ನ, ನಿರಂತರ ಕ್ರಿಯಾಶೀಲತೆ ಮತ್ತು ಸಹಾಯ ಹಸ್ತದ ಮಹತ್ವ ಇವೆಲ್ಲವುಗಳ ಅರಿವು ಮೂಡಿಸಿತ್ತು. ಕ್ಷುದ್ರ ಪ್ರಾಣಿಗಳೆಂದು ಮನುಷ್ಯರಿಂದ ಅವಗಣಿಸಲಾದ ಕೊಯೋಟೆಗಳ ಜೀವನದಲ್ಲೂ ಒಂದು ಅರ್ಥವಿದೆ, ಒಂದು ಉದ್ದೇಶವಿದೆ; ಒಂದು ಸಂದೇಶವಿದೆ; ಜೀವನ ಸಂಗೀತವಿದೆ!

ಸರ್ವೋಚ್ಚ ಜೀವಿಗಳೆನಿಸಿದ ನಾವೂ ಅವುಗಳಿಂದ ಪಾಠ ಕಲಿಯಬಹುದು; ಅವುಗಳಂತೆ ಬಾಳಿನ ಕಷ್ಟ ಕೋಟಲೆಗಳನ್ನು ಎದೆಗುಂದದೆ ಎದುರಿಸಬಹುದು; ಮಾನವ ವಂಶವನ್ನು ಉಳಿಸಿಕೊಳ್ಳಬಹುದು.

ನನ್ನ ವಿದ್ಯಾರ್ಜನೆ

ಬ್ರಿಗೇಡಿಯರ್ ಮಹಾದೇವ ಗೋಖಲೆ
(ಸೇನಾನಿವೃತ್ತ)
೨೦೪, ವೃಂದಾವನ, ೨ನೇ ಹಂತ
ಮೈಸೂರು-೫೭೦ ೦೨೦

ಎಂಬತ್ತರ ಈ ಜ್ಞಾನವಯೋವೃದ್ಧ ವೈದ್ಯರ, ಸೇನೆಯಲ್ಲಿ ರಣರಂಗದ ಮುಂಚೂಣಿಯಲ್ಲಿ ಸಲ್ಲಿಸಿದ ವೈದ್ಯಕೀಯ ನೆರವಿಗಾಗಿ ವಿಶಿಷ್ಟ ಸೇವಾಪದಕ ಗಳಿಸಿರುವ ಸೇವಾಪರಾಯಣರ ಮತ್ತು ಸದಾಜ್ಞಾನಕ್ಕಾಗಿ ತ್ರಿವಿಸುತ್ತಿರುವ ಗೋಖಲೆಯವರ ನೆನಪಿನ ಸುರುಳಿ ಎಂದರೆ ಸಂದ ಕಾಲಕ್ಕೆ ತೆರೆದಿಟ್ಟ ಕಿಂಡಿ.

ಸರಕಾರೀ ಕಾಲೇಜು, ಮಂಗಳೂರು

ಕಳೆದ ಲೇಖನದಲ್ಲಿ ಈ ಕಾಲೇಜಿನಲ್ಲಿ ೧೯೩೪ ರಿಂದ ೧೯೩೬ರ ತನಕ ಇಂಟರ್‌ಮಿಡಿಯಟ್ (ಈಗಿನ ಪಿ.ಯು.ಸಿ.) ಎರಡು ವರುಷಗಳ ವಿದ್ಯಾರ್ಜನೆಯ ವಿಷಯ ಬರೆದಿದ್ದೆ. "ಪುಸ್ತಕದ ಹುಳು" ವಾದ ನನಗೆ ಅಲ್ಲಿನ ಗ್ರಂಥಾಲಯವೆಂದರೆ ಬೇಕುಬೇಕಾದಾಗ "ತಿಂಡಿ ತಿನಸು" ಸಿಗುವಹಾಗೆ ಹೆಚ್ಚಿನ ಜ್ಞಾನ ಒದಗಿಸುತ್ತಿತ್ತು. ಕ್ಲಾಸು ಇಲ್ಲದಿದ್ದಾಗ ನಾನು ಇರುತ್ತಿದ್ದುದೇ ಗ್ರಂಥಾಲಯದಲ್ಲಿ. ಅಲ್ಲಿ ಮಾಡಿದ ಅಧ್ಯಯನದಿಂದಲೂ, ನಮ್ಮ ಕನ್ನಡ ಪಂಡಿತರಾಗಿದ್ದ ಉಡುಪಿ ಸೀತಾರಾಮಾಚಾರ್ಯರ ಪಾಂಡಿತ್ಯ ಮತ್ತು ಅಧ್ಯಾಪನ ಕೌಶಲದಿಂದಲೂ ನನಗೆ ಕನ್ನಡದಲ್ಲಿ ಪಾರಿತೋಷಿಕ ಸಿಕ್ಕಿತು.

ಪ್ರಿನ್ಸಿಪಾಲರಾಗಿದ್ದ ಗೋವಿಂದ ಕೃಷ್ಣ ಚೆಟ್ಟೂರ್ ನಮಗೆ ಶೇಕ್ಸ್‌ಪಿಯರ್ ಪಾಠ ಮಾಡುತ್ತಿದ್ದರು. ಆಕ್ಸ್‌ಫರ್ಡ್‌ನ ಎಂ.ಎ. ಪದವೀಧರರಾಗಿದ್ದ ಅವರು ಅರ್ಥಭಾವ ಸಹಿತ ಕಲಿಸಿದ "ದಿ ಟ್ರಜಡಿ ಆಫ್ ಕಿಂಗ್ ರಿಚರ್ಡ್ ದಿ ಸೆಕೆಂಡ್" ನನಗೆ ಮುಂದೆ ಮೈಸೂರಿನಲ್ಲಿ (೧೯೪೫-೧೯೪೭) ಎಂ.ಎ. ಕಲಿಯುವಾಗಲೂ ಎಷ್ಟು ಪ್ರಯೋಜನಕಾರಿ ಆಯಿತೆಂದು ವರ್ಣಿಸಲು ಅಸಾಧ್ಯ. ಸದಾ ವ್ಯಾಸಂಗಶೀಲರಾಗಿದ್ದ ಚೆಟ್ಟೂರರ ಕ್ಲಾಸಿನಲ್ಲಿ ಕುಳಿತುಕೊಳ್ಳುವುದೆಂದರೆ ಅದೊಂದು ಅವರ್ಣನೀಯ ಅಮೋಘ ಆನಂದ. ಅಂಥ ಪ್ರತಿಭಾವಂತ ಶಿಕ್ಷಕರು ಸಿಗುವುದು ವಿದ್ಯಾರ್ಥಿಗಳ ಪೂರ್ವಪುಣ್ಯ.

ಮದರಾಸು ಕ್ರಿಶ್ಚನ್ ಕಾಲೇಜು

ಮುಂದೆ ೧೯೩೬ ರಿಂದ ೧೯೩೮ರ ತನಕ ನನ್ನ ಬಿ.ಎ. ಡಿಗ್ರಿಯ ಶಿಕ್ಷಣ ಸುಪ್ರಸಿದ್ಧ ಮದರಾಸು ಕ್ರಿಶ್ಚನ್ ಕಾಲೇಜಿನಲ್ಲಾಯಿತು. ನಿಜಕ್ಕೂ ಇದೊಂದು ಹೆಸರಾಂತ ಮಾದರಿ ಕಾಲೇಜು ಶ್ರೇಷ್ಠ ಅಧ್ಯಾಪಕರೂ

ತತ್ತ್ವಜ್ಞಾನಿಯೂ ಆದ ಡಾ|| ಸರ್ವಪಳ್ಳಿ ರಾಧಾಕೃಷ್ಣನ್ ಈ ಕಾಲೇಜಿನ ವಿದ್ಯಾರ್ಥಿಯಾಗಿದ್ದರು. ಆದುದರಿಂದ ಇದನ್ನು 'ಡಾ|| ರಾಧಾಕೃಷ್ಣನ್ ಕಾಲೇಜು' ಎಂದೂ ಕರೆಯುತ್ತಿದ್ದರು. ಈ ಕಾಲೇಜಿಗೆ ಪ್ರವೇಶ ಸಿಗುವುದೆಂದರೆ ಸುಲಭಸಾಧ್ಯವಲ್ಲ. ನನಗೆ ಪ್ರವೇಶ ಸಿಕ್ಕಿದುದು ಯೋಗಾಯೋಗ, ಏಕೆಂದರೆ ಅನೇಕ ಪ್ರಶಸ್ತಿಗಳನ್ನು ಪಡೆದ ಪತ್ರಿಕೋದ್ಯಮಿ, "ದಿ ಇಲ್ಯುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ"ದ ಸಂಪಾದಕರಾಗಿದ್ದ ಎಂ. ವಿ. ಕಾಮತ್‌ರವರಿಗೂ ಇಲ್ಲಿ ಪ್ರವೇಶ ಸಿಗಲಿಲ್ಲವೆಂದು ಒಂದು ಕಡೆ ಅವರೇ ಹೇಳಿರುತ್ತಾರೆ.

ಇಲ್ಲಿ ದಿನದ ಪಠ್ಯಕ್ರಮದಲ್ಲಿ ಪ್ರತಿ ದಿನವೂ ಪ್ರಥಮ ಪಾಠವೆಂದರೆ "ನೀತಿಬೋಧೆ." ಬೈಬಲ್‌ನಿಂದಲಾಗಲೀ ಇತರ ಪುರಾತನ ದಾರ್ಶನಿಕ ಗ್ರಂಥಗಳಿಂದಾಗಲೀ ಉದ್ಧರಣೆಗಳನ್ನು ವಿವರಿಸಿ ವಿದ್ಯಾರ್ಥಿಗಳು ಜೀವನದಲ್ಲಿ ಅನುಸರಿಸಬೇಕಾದ ತತ್ತ್ವಗಳನ್ನು ಬೋಧಿಸುತ್ತಿದ್ದರು. ಈ ಬೋಧನೆ ನನ್ನ ಭವಿಷ್ಯದ ಪಥಕ್ಕೆ ಹೊಸ ರೂಪವನ್ನೂ ಮನಸ್ಸಿನ ಮೇಲೆ ಮರೆಯಲಾರದ ಪ್ರಭಾವವನ್ನೂ ಬೀರಿತು.

ಸಾಹಿತ್ಯಿಕ ಮೌಲ್ಯ

ಇಲ್ಲಿ ಶಿಕ್ಷಕರು ಪಾಠಗಳಲ್ಲಿರುವ ಸಾಹಿತ್ಯಿಕ ಮೌಲ್ಯಗಳನ್ನರಿತು ವಿದ್ಯಾರ್ಥಿಗಳ ಮೇಲೆ ಯೋಗ್ಯ ಪರಿಣಾಮವಾಗುವಂತೆ ಕಲಿಸುತ್ತಿದ್ದರು ಎಂದೇ ವಿದ್ಯಾರ್ಥಿಗಳು ಸಾಹಿತ್ಯಿಕ ಮೌಲ್ಯಗಳ ಶ್ರೇಷ್ಠತೆಯನ್ನೂ, ವೈಶಾಲ್ಯವನ್ನೂ ತಿಳಿಯುವಲ್ಲಿ ಸಫಲರಾಗುತ್ತಿದ್ದರು. ಸಾಹಿತ್ಯಿಕ ಮೌಲ್ಯವೆಂಬುದು ಬೋಧನೆಯ ವಿಷಯದಲ್ಲಿ ಸೌದೆಯಲ್ಲಿರುವ ಬೆಂಕಿಯಂತೆ ಅಥವಾ ಎಳ್ಳಿನಲ್ಲಿರುವ ಎಣ್ಣೆಯಂತೆ ಎನ್ನುತ್ತಾರೆ ಪರಿಣತರು.

ಈ ಕಾಲೇಜಿನಲ್ಲಿ ನಾನು ಅಭ್ಯಸಿಸುತ್ತಿದ್ದ ವಿಷಯಗಳು ಇಂಗ್ಲಿಷ್, ಕನ್ನಡ, ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ (ಉಪಮುಖ್ಯ) ಭೌತಶಾಸ್ತ್ರ(ಪ್ರಾಮುಖ್ಯ) ಹೆಸರಿಗೆ ಬಿ.ಎ. ಆಗಿದ್ದರೂ ವಿಜ್ಞಾನದ ವಿಷಯಗಳ ಮಟ್ಟ ಬಿ.ಎಸ್‌ಸಿ.ಗೆ ಸರಿಸಮಾನವಾಗಿತ್ತು ಬಿ.ಎ. ಎಂಬ ನಾಮಕರಣದ ಕಾರಣಗಳು ಮೂರು:

೧) 'ಇಂಗ್ಲಿಷ್'ನ ಪಠ್ಯಕ್ರಮ ವಿಶಾಲವಾಗಿತ್ತು. 'ಬಿ.ಎಸ್‌ಸಿ.'ಯವರಿಗೆ 'ಬಿ.ಎ.'ಯ ಅರ್ಧ ಎನ್ನಬಹುದು. ಇಂಗ್ಲಿಷ್ ಮೊದಲನೆಯ ವರುಷದಲ್ಲಿ ಮಾತ್ರ.

೨) 'ಕನ್ನಡ' ಪಠ್ಯಕ್ರಮವೂ ವಿಶಾಲವಾಗಿತ್ತು. 'ಬಿ.ಎಸ್‌ಸಿ'ಗೆ ಎರಡನೇ ಭಾಷೆಯೇ ಇಲ್ಲ.

೩) ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರು ಅಲ್ಲಿ 'ಬಿ.ಎ.' ಎಂದೇ ನಾಮಕರಣ ಮಾಡಿದ್ದರು. ಬ್ರಿಟಿಷರ ಆಳ್ವಿಕೆಯ ಕಾಲ ಅದು. (೧೯೩೬–೩೮).

ಈ ಕಾಲೇಜಿನ ಒಂದು ವೈಶಿಷ್ಟ್ಯವೆಂದರೆ, ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಯ ಉದ್ದೇಶದಿಂದ ಪಠ್ಯ ಮತ್ತು ಪಠ್ಯೇತರ ವಿಷಯಗಳಿಗೆ ಕೊಟ್ಟ ಪ್ರಾಧಾನ್ಯ

ಪ್ರಶಂಸನೀಯವಾಗಿತ್ತು. ಇದೂ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರು ಹಾಕಿಕೊಟ್ಟ 'ಮೇಲ್ಪಂಕ್ತಿ'ಯ ಮಾದರಿಯೇ.

ಕನ್ನಡ ಪಂಡಿತ ನರಸಿಂಗರಾಯರು

"ಬಿ.ಎ." ಕ್ಲಾಸುಗಳಲ್ಲಿ ಎರಡು ವರುಷ ನನ್ನ ಕನ್ನಡ ಸಾಹಿತ್ಯದ ವಿದ್ಯಾರ್ಜನೆಯ ಬಗ್ಗೆ ಎರಡು ಮಾತು. ಕನ್ನಡ ಪಂಡಿತರು ಬಳ್ಳಾರಿಯ ನರಸಿಂಗರಾಯರು. ಇವರ ಮಾತೃಭಾಷೆ ತೆಲುಗು ಆಗಿದ್ದರೂ ಅವರು ಕನ್ನಡ ವಿದ್ವಾಂಸರು. ಇವರ ಪಾಂಡಿತ್ಯ ಕೇವಲ ಕನ್ನಡಕ್ಕೆ ಸೀಮಿತವಾಗಿರಲಿಲ್ಲ. ಇಂಗ್ಲಿಷಿನಲ್ಲಿ ಕೂಡಾ ಅಷ್ಟೇ ನುರಿತವರು. ಅವರದು ಹಳೆಯ ಕಾಲದ ಪಂಡಿತರ ಪೋಷಾಕು—ಕಚ್ಚೆ ಹಾಕಿ ಉಟ್ಟ ಬಿಳೀ ಧೋತ್ರ (ಮೈಸೂರಿನ ಶಬ್ದ 'ಪಂಚೆ') —ಮುಂಡು ಅಲ್ಲ. ಕುತ್ತಿಗೆಯಿಂದ ಕೆಳಗಿನವರೆಗೆ ಗುಂಡಿಗಳಿರುವ 'ಬಂದ್' ಕೋಟು, ತಲೆಗೆ ಮುಂಡಾಸು ('ಮೈಸೂರು ಪೇಟ'ದಂತೆ ಅಲ್ಲ), ಖ್ಯಾತಗಾಯಕ ಮಲ್ಲಿಕಾರ್ಜುನ ಮನ್ಸೂರ್ ಕಟ್ಟುತ್ತಿದ್ದರಲ್ಲಾ ಆ ರೀತಿ. ಓದುಗರು ದಯವಿಟ್ಟು ಕ್ಷಮಿಸಬೇಕು. ನಾನು ಅರ್ವತ್ತು ವರುಷಗಳ ಹಿಂದಿನ ವಿಷಯ ಬರೆಯುತ್ತಿದ್ದೇನೆ. ನಮ್ಮ ಪಠ್ಯಪುಸ್ತಕಗಳ ಪೈಕಿ ಎರಡು ನೆನಪಿಗೆ ಬರುತ್ತವೆ:—

೧) "ಸಾಕ್ರೆಟೀಸನ ಕೊನೆಯ ದಿನಗಳು". (ಎ. ಎನ್. ಮೂರ್ತಿರಾವ್)

೨) "ಕೃಷ್ಣನ ಬಾಲ ಲೀಲೆಗಳು." (ಇದು ಕಾವ್ಯ)

ಸಾಕ್ರೆಟೀಸನ ನ್ಯಾಯವಾದ, ಅವನ ನಿಷ್ಪಕ್ಷಪಾತ ಮನೋಭಾವ, ಅವನ ಸಕಾರಣವೂ, ಸಮಂಜಸವೂ, ಆದ ವೈಚಾರಿಕ ಪರಿಣತಿ—ಈ ಗುಣಗಳನ್ನು ಪರಿಷ್ಕರಿಸಿ ವಿವರಿಸುವ ಈ ಅಧ್ಯಾಪಕರ ಬೋಧನಾ ಕೌಶಲ್ಯ ವಿದ್ಯಾರ್ಥಿಯನ್ನು ಆಕರ್ಷಿಸುವಂತೆ, ಸ್ಫೂರ್ತಿಸುವಂತೆ ಇತ್ತು. "ಕೃಷ್ಣನ ಬಾಲಲೀಲೆಗಳು" ಎಂಬ ಪುಸ್ತಕ ನರಸಿಂಗರಾಯರಿಗೆ ಪ್ರಾಣ. ಪುಸ್ತಕವಿಡೀ ಕವಿತೆಗಳು. ಕಲಿಸುವ ವಿಶಿಷ್ಟ ರೀತಿ ಹೀಗಿತ್ತು :— ಪಾಠ ಪ್ರಾರಂಭಿಸುವ ಮುನ್ನ ಕೆಲವು ಕ್ಷಣ ಶ್ರೀಕೃಷ್ಣನ ಧ್ಯಾನ. ಆನಂತರ ಕಾವ್ಯದ ಒಂದು ಭಾಗವನ್ನು ಆರಿಸಿ—

ಕಠಿಣಶಬ್ದಗಳ ಅರ್ಥವನ್ನೂ, ಸಂಧಿ, ಸಮಾಸ, ಛಂದಸ್ಸು, ಅಲಂಕಾರ ಇತ್ಯಾದಿಗಳನ್ನು ವಿವರಿಸುತ್ತಿದ್ದರು. ಬಳಿಕ ಪದ್ಯದ, ತತ್ವ ಹಾಗೂ ಭಾವಾರ್ಥವನ್ನು ವಿಶದೀಕರಿಸುತ್ತಿದ್ದರು. ಇವರಿಗೆ ಅಧ್ಯಾಪನ ಕೇವಲ ಒಂದು ವೃತ್ತಿಯಾಗಿರದೆ ಅದೊಂದು ಮನೋಧರ್ಮವೇ ಆಗಿತ್ತು. ನರಸಿಂಗರಾಯರ ಇಂಗ್ಲಿಷ್ ಸಾಹಿತ್ಯದ ಜ್ಞಾನ ಅವರ ಆಳವಾದ ವ್ಯಾಸಂಗವನ್ನು ತೋರ್ಪಡಿಸುತ್ತಿತ್ತು. ಅವರಿಗೆ ಶೇಕ್‌ಸ್ಪಿಯರ್, ವಿಲ್ಸನ್, ಶೆಲ್ಲಿ, ಕೀಟ್ಸ್, ಬ್ರೌನಿಂಗ್, ಸ್ವಿಫ್ಟ್ ಮೊದಲಾದ ವಿದ್ವಾಂಸರ ಗ್ರಂಥಗಳಿಂದ ಉದ್ಧರಣೆಗಳನ್ನು ವಿವರಿಸುವುದೆಂದರೆ ಮಕ್ಕಳಾಟದಂತೆ ಅತಿ ಸುಲಭವಾಗಿತ್ತು. ನರಸಿಂಗರಾಯರು "ಮಹೋಪಾಧ್ಯಾಯ"ರೆಂಬ ಪದವಿ ಪಡೆದವರಲ್ಲದಿದ್ದರೂ, ನಿಜವಾಗಿಯೂ ಅವರು ಮಹೋಪಾಧ್ಯಾಯರೇ ಆಗಿದ್ದರು.

ಅಧ್ಯಾಪನವೆಂದರೆ ಅದೊಂದು ಮನೋಧರ್ಮ

ಅಧ್ಯಾಪನವೆಂಬುದು ಕೇವಲ ವೃತ್ತಿಯಲ್ಲ; ಅದೊಂದು ಪ್ರವೃತ್ತಿ. ಅಧ್ಯಾಪಕನ ವಿದ್ಯಾಬೋಧನೆಯು ಅವನ ಮನೋಧರ್ಮಕ್ಕನುಗುಣವಾಗಿ ಇರುತ್ತದೆ. ಶ್ರದ್ಧಾಪೂರ್ವಕವಾದ ಬೋಧನಾ ಸಾಮರ್ಥ್ಯ, ಕಲಿಸುವ ವಿಷಯದ ಪಾಂಡಿತ್ಯ, ವಿದ್ಯಾರ್ಥಿಗಳ ಜ್ಞಾನವಿಕಾಸದಲ್ಲಿ ಆಸಕ್ತಿ, ಸತತ ಅಧ್ಯಯನ ಶೀಲತೆ, ಇವುಗಳಿಂದ ಕೂಡಿದ ವ್ಯಕ್ತಿತ್ವ ಇರುವವನು ವಿದ್ಯಾರ್ಥಿಗಳ ಪ್ರೀತಿ, ಆದರ, ಗೌರವಗಳನ್ನು ಸಹಜವಾಗಿಯೇ ಪಡೆಯಬಲ್ಲನು. ಇಂಥ ಅಧ್ಯಾಪಕನೇ ಧನ್ಯ, ಮಾನ್ಯ.



ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ ?

ಪರಭಾಷೆಯ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳನ್ನು ಅವರದೇ ಆದ ಭೂಮಿಯಲ್ಲಿ ಪರದೇಶಿಗಳನ್ನಾಗಿ ಮಾಡಿದೆ.

ತಾಳ್ಮೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ—ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು.

—ಗಾಂಧೀಜಿ

ಮುಸ್ಸಂಜೆ

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೇಸ್ಟೇಷನ್ ರಸ್ತೆ
ಕೆ. ಆರ್. ಸಾಗರ ೫೭೭ ೪೦೧

ನಾರ್ಮನ್ ಗಾರ್ಟ್ಸ್‌ಬೈ ಹೈಡ್ ಪಾರ್ಕಿನ ಕಲ್ಲುಬೆಂಚೊಂದರ ತುದಿಯಲ್ಲಿ ಕುಳಿತಿದ್ದ. ಅವನ ಹಿಂದೆ ಪೊದೆಯಂತಹ ಹುಲ್ಲಿನ ಬೇಲಿ. ಆಗ ಮುಸ್ಸಂಜೆ—ಮಾರ್ಚಿ ತಿಂಗಳ ಸಂಜೆ ಸುಮಾರು ಆರೂವರೆಯ ಸಮಯ. ವಾತಾವರಣದಲ್ಲಿ ಸಂಜೆ ಸೂರ್ಯನ ಇಳಿಬೆಳಕು, ಚಂದ್ರನ ಮಂದಬೆಳಕಿನ ಜತೆಗೆ ಬೀದಿದೀಪಗಳ ಬೆಳಕಿನ ಮಿಶ್ರಣವೂ ಸಹಾ ಒಟ್ಟಾಗಿ ಸೇರಿತ್ತು. ಮಂದ ಬೆಳಕಿನಲ್ಲಿ ಇಡೀ ಸ್ಥಳ ನಿರ್ಜನವೆನಿಸಿದರೂ, ಒಬ್ಬಿಬ್ಬರು ಸುತ್ತಾಡುತ್ತಲೋ ಅಥವಾ ಇತರ ಕಲ್ಲುಬೆಂಚುಗಳ ಮೇಲೋ ಕುಳಿತಿದ್ದರು. ಅವರೆಲ್ಲರೂ ಹೆಣ್ಣು ಗಂಡುಗಳಂತೆ ಕಾಣುತ್ತಿದ್ದು, ಜೀವನದ ನಿತ್ಯ ಹೋರಾಟದಲ್ಲಿ ಸೋತು ಸೊರಗಿದವರಂತಿದ್ದರಲ್ಲದೆ ಮುಸ್ಸಂಜೆಯು ತಮ್ಮ ಕೊಳಕು ಬಟ್ಟೆ ಹಾಗೂ ರಕ್ತಮಾಂಸಗಳಿಲ್ಲದ ತಮ್ಮ ತಡಿಕೆಯಂತಹ ದೇಹಗಳನ್ನು ತಮ್ಮ ಜತೆಗಾರರ ಚುಚ್ಚುವ ಹಾಗೂ ಕುತೂಹಲದ ಕಣ್ಣುಗಳಿಂದ ಮರೆಮಾಚಲು ಅಲ್ಲಿಗೆ ಬಂದವರಂತಿದ್ದರು. ಮುಸ್ಸಂಜೆಯು ಆ ಮಂದಬೆಳಕಿನಲ್ಲಿ ಗಾರ್ಟ್ಸ್‌ಬೈನ ಕಲ್ಪನೆ ತೃಪ್ತ ವದನದ ಆ ಅಲೆಮಾರಿಗಳ ಬಗ್ಗೆ ಹಲವಾರು ಚಿತ್ರಗಳನ್ನು ಚಿತ್ರಿಸುತ್ತಿತ್ತು, ಅವರ ಬಡತನ, ಹತಾಶೆಗಳಿಗೆ ಕಾರಣಗಳನ್ನು ಕಲ್ಪನೆಯಲ್ಲಿಯೇ ಕಾಣುತ್ತಿತ್ತು.

ಕಲ್ಲುಬೆಂಚಿನ ಮೇಲೆ ಅವನ ಪಕ್ಕ ಬದುಕಿನಲ್ಲಿ ಬಹಳ ನೋವು ಉಂಡಿದ್ದರೂ ಅದನ್ನು ಮುಖದಲ್ಲಿ ತೋರಿಸಿಕೊಳ್ಳದ ಒಬ್ಬ ಮುದುಕ ಕುಳಿತಿದ್ದ. ಅವನ ಉಡುಪುಗಳು ಅಷ್ಟು ಕೊಳಕಾಗದಿದ್ದರೂ ದುಬಾರಿಯದೂ ಅಥವಾ ಹೊಸದೂ ಸಹಾ ಆಗಿರಲಿಲ್ಲ. ಸ್ವಲ್ಪ ಹೊತ್ತಿನ ತರುವಾಯ ಅವನು ಮೇಲೆದ್ದು ಹೋಗುತ್ತಿದ್ದಂತೆ, ಗಾರ್ಟ್ಸ್‌ಬೈ ಮನದಲ್ಲಿಯೇ ತರ್ಕಿಸಿದ, ಆ ಮುದುಕನ ಬಗ್ಗೆ ಮನೆಯವರಾಗಲಿ ಅಥವಾ ಹೊರಗಿನವರಾಗಲೀ ಯಾರೂ ಆದರದಿಂದ ನೋಡಿಕೊಳ್ಳದಿರಬಹುದೆಂದು. ಅವನ ಆಕಾರ ಕತ್ತಲಲ್ಲಿ ಕರಗಿ ಹೋಗುತ್ತಿದ್ದಂತೆಯೇ, ತಕ್ಷಣ ಅವನ ಸ್ಥಳವನ್ನು ಒಬ್ಬ ಯುವಕ ಆಕ್ರಮಿಸಿದ. ಆ ಯುವಕ ಒಳ್ಳೆಯ ಉಡುಪು ಧರಿಸಿದ್ದರೂ ಮೊದಲು ಕುಳಿತಿದ್ದ ಮುದುಕನಷ್ಟು ಸಂತೋಷವಾಗಿರಲಿಲ್ಲ. ಮುಖವನ್ನು ಯಾವುದೋ ತೊಂದರೆಗೆ

ಇಂಗ್ಲೀಷ್ ಮೂಲ: ಸಾಕಿ; ಭಾಷಾಂತರ: ಲಕ್ಷ್ಮೀನಾರಾಯಣ.

ಸಿಕ್ಕಿದವನಂತೆ ಗಂಟಿಕ್ಕಿಕೊಂಡು ಕುಳಿತು ಕೊಳ್ಳುತ್ತಿದ್ದಂತೆಯೇ ಒಂದೆರಡು ಬಾರಿ ತನ್ನಷ್ಟಕ್ಕೆ ತಾನೇ ಶಪಿಸಿಕೊಂಡ.

'ನೀವು ಬಹಳ ಚಿಂತಿತರಾಗಿದ್ದೀರಿ, ನನ್ನ ಸಹಾಯವೇನಾದರೂ ಬೇಕಿತ್ತೆ' ಅವನು ಉತ್ತರಿಸಿದ 'ನನ್ನ ಇಡೀ ಜೀವನದಲ್ಲಿ ಮಾಡಿರದಿದ್ದ ದೊಡ್ಡ ತಪ್ಪು ಮಾಡಿಬಿಟ್ಟೆ' 'ಹೌದೇನು?' ಹೆಚ್ಚು ಕಾತುರ ತೋರದೆ ಗಾರ್ಟ್ಸ್‌ಬೈ ಕೇಳಿದ.

ಇಂದು ಮಧ್ಯಾಹ್ನ ನಾನು ಲಂಡನ್ ನಗರಕ್ಕೆ ಬಂದು ತಲುಪಿದೆ ಹಾಗೂ ಬರ್ಕ್‌ಷೈರ್ ವೃತ್ತದಲ್ಲಿರುವ ಪೆಟಾಗೋನಿಯನ್ ಹೋಟೆಲ್‌ನಲ್ಲಿ ತಂಗಲು ಬಯಸಿದೆ. ತನ್ನ ಮಾತನ್ನು ಆ ಯುವಕ ಮುಂದುವರಿಸಿದ. 'ಆದರೆ ನಾನು ಅಲ್ಲಿಗೆ ಹೋದಾಗ ಆ ಹೋಟೆಲನ್ನು ಕೆಡವಿ ಅದರ ಸ್ಥಳದಲ್ಲಿ ಸಿನಿಮಾ ಮಂದಿರವನ್ನು ಕಟ್ಟಲಾಗಿತ್ತು. ಆಗ ನನ್ನ ಟ್ಯಾಕ್ಸಿ ಡ್ರೈವರ್ ಸ್ವಲ್ಪ ದೂರದಲ್ಲಿದ್ದ ಬೇರೆ ಹೋಟಲಿನಲ್ಲಿ ತಂಗಲು ಸೂಚಿಸಿದ. ಸರಿ, ಹಾಗೇ ಮಾಡಿದೆ. ಸ್ವಲ್ಪ ಸಮಯದ ನಂತರ ನಾನು ಆ ಹೋಟೆಲಿನಿಂದ ನನ್ನ ಜನರಿಗೆ ಅಲ್ಲಿಯ ವಿಳಾಸ ಸಹಿತ ಒಂದು ಪತ್ರ ಬರೆದು, ಸಾಬೂನು ತರಲೆಂದು ಹೊರಗೆ ಹೊರಟೆ—ಕಾರಣ ನಾನು ಸಾಬೂನು ಪ್ಯಾಕ್ ಮಾಡಲು ಮರೆತಿದ್ದೆ. ಹೋಟೆಲಿನವರು ಕೊಡುವ ಸಾಬೂನು ಉಪಯೋಗಿಸಲು ನನಗೆ ಇಷ್ಟವಾಗದು. ಸ್ವಲ್ಪ ಆಯಾಸ ಬೇಸರವಾಗಿದ್ದುದರಿಂದ ಬಾರಿನಲ್ಲಿ ಸ್ವಲ್ಪ ಕುಡಿದು ಅಂಗಡಿಗೆ ಹೋದೆ. ನಂತರ ಹೋಟೆಲಿಗೆ ಹಿಂತಿರುಗಲು ಹೆಜ್ಜೆ ಇಡುವಷ್ಟರಲ್ಲಿ ತಕ್ಷಣ ನೆನಪಾಯಿತು ನನಗೆ. ಆ ಹೋಟೆಲಿನ ಹೆಸರು ಮತ್ತು ಬೀದಿಯನ್ನು ಮರೆತಿರುವುದು! ಯಾವ ಸ್ನೇಹಿತರೂ ಸಂಬಂಧಿಗಳೂ ಇಲ್ಲದೆ ಲಂಡನ್‌ನಲ್ಲಿರುವುದೆಂತಹ ಸಂದರ್ಭ! ನನ್ನ ಜನರಿಗೆ ಟೆಲಿಗ್ರಾಂ ಮಾಡಿ ವಿಳಾಸ ತರಿಸಬಹುದು. ಆದರೆ ನನ್ನ ಪತ್ರ ಅವರ ಕೈ ಸೇರುವುದೇ ನಾಳೆ! ಇದರ ಮಧ್ಯೆ ನನ್ನ ಹತ್ತಿರ ಹಣ ಬೇರೆ ಇಲ್ಲ—ಹೋಟೆಲಿನಿಂದ ಹೊರ ಬರುವಾಗ ಒಂದು ಷಿಲ್ಲಿಂಗ್ ತಂದಿದ್ದೆ. ಅದರಿಂದ ಸೋಡ ಬೆರೆಸಿದ ಪಾನೀಯ ಕುಡಿದೆ. ಈಗ ಜೇಬಿನಲ್ಲಿ ಕೇವಲ ಎರಡು ಪೆನ್ನಿಗಳನ್ನಿಟ್ಟುಕೊಂಡು ಅಲೆಯುತ್ತಿರುವುದಲ್ಲದೆ ಈ ರಾತ್ರಿಯನ್ನು ಕಳೆಯಬೇಕಾಗಿದೆ.

ಕಥೆ ವರ್ಣಿಸಿದ ನಂತರ ಇಬ್ಬರ ನಡುವೆ ಕೆಲಕಾಲ ಗಂಬೀರವಾದ ಮೌನ ನೇರ್ಪಟ್ಟಿತು. 'ಬಹುಶಃ ನಾನು ಸುಳ್ಳು ಹೇಳುತ್ತಿದ್ದೇನೆ ಎಂದು ಕೊಂಡಿದ್ದೀರಲ್ಲವೇ' ಮನಸ್ಸಿಗೆ ಚುಚ್ಚುವಂತೆ ಆ ಯುವಕ ಒತ್ತಿ ಹೇಳಿದ.

'ಇಲ್ಲ ಖಂಡಿತ ಇಲ್ಲ' ಗಾರ್ಟ್ಸ್‌ಬೈ ಸ್ಪಷ್ಟವಾಗಿ ಹೇಳಿದ 'ನಾನೂ ವಿದೇಶಕ್ಕೆ ಹೋಗಿದ್ದಾಗ ಇಂಥದೇ ಘಟನೆಯಾಗಿತ್ತು. ಆದರೆ ಆ ಸಂದರ್ಭದಲ್ಲಿ ನಾವು ಇಬ್ಬರಿದ್ದೆವು. ಅದನ್ನು ಈಗಲೂ ಮರೆಯಲಾಗುತ್ತಿಲ್ಲ. ಅದೃಷ್ಟವಶಾತ್ ನಾವು ತಂಗಿದ್ದ ಹೋಟೆಲ್ ಒಂದು ಕಾಲುವೆಯ ಪಕ್ಕದಲ್ಲಿತ್ತು. ಕಾಲುವೆಯ ಜಾಡು ಹಿಡಿದು ಹೊರಟು ನಾವು ನಮ್ಮ ಹೋಟೆಲ್ ತಲುಪಿದೆವು.'

ಈ ಮಾತು ಕೇಳಿ ಯುವಕನಿಗೆ ಖುಷಿಯಾಯಿತು. 'ವಿದೇಶವಾದರೆ ನನಗೆ ಭಯವೇ ಆಗುವುದಿಲ್ಲ' ಅವನು ಹೇಳಿದ 'ಯಾರು ಬೇಕಾದರೂ ತಮ್ಮ ದೇಶದ ರಾಯಭಾರಿಯ ಹತ್ತಿರ ಹೋಗಿ ತಮಗೆ ಬೇಕಾದ ಸಹಾಯ

ಪಡೆಯಬಹುದು. ಆದರೆ ಸ್ವಂತ ನೆಲದಲ್ಲಿ ಸಹಾಯ ಸಿಗುವುದೇ ಕಷ್ಟ. ನಿಮ್ಮಂತಹ ಒಳ್ಳೆಯ ವ್ಯಕ್ತಿ ಸಿಕ್ಕಿ ನನ್ನ ಕಥೆ ಕೇಳಿ ಹಣ ನೀಡದಿದ್ದರೆ ಇಡೀ ರಾತ್ರಿಯನ್ನು ನಾನು ಥೇಮ್ಸ್ ನದಿಯ ದಂಡೆಯ ಮೇಲೆ ಕಾಲ ಕಳೆಯಬೇಕಾಗುತ್ತಿತ್ತು. ನನಗೆ ಬಹಳ ಸಂತೋಷವಾದರೆ ನನ್ನ ಕಥೆಯನ್ನು ನೀವು ಸುಳ್ಳು ಎಂದು ತಳ್ಳಿಹಾಕಿಲ್ಲ !

'ಇರಬಹುದು' ಗಾರ್ಟ್ಸ್‌ಬೈ ನಿಧಾನವಾಗಿ ಹೇಳಿದ 'ನಿಮ್ಮ ಕಥೆಯಲ್ಲಿರುವ ತೊಡಕೆಂದರೆ ನೀವು ಸೋಪನ್ನು ತೋರಿಸಿಯೇ ಇಲ್ಲ.'

ಆ ಯುವಕ ತಕ್ಷಣ ಮುಂದಕ್ಕೆ ಬಾಗಿ ಕುಳಿತು ತನ್ನ ಮೇಲಂಗಿಯ ಜೇಬುಗಳನ್ನೆಲ್ಲಾ ತಡಕಾಡಿ ದಡಕ್ಕೆಂದು ಜಿಗಿದು ನಿಂತ.

'ಅದು ಎಲ್ಲೋ ಕಳೆದು ಹೋಗಿದೆ' ಬೇಸರದಿಂದ ಗೊಣಗಿದ.

'ಒಂದೇ ದಿನದ ಮಧ್ಯಾಹ್ನ ಹೋಟೆಲಿನ ವಿಳಾಸ ಮತ್ತು ಸೋಪಿನ ಬಿಲ್ಲೆ ಕಳೆದು ಹೋಗಿರುವುದು ನಿಮ್ಮ ಬೇಜವಾಬ್ದಾರಿತನವನ್ನು ತೋರಿಸುತ್ತದೆ' ಗಾರ್ಟ್ಸ್‌ಬೈ ಹೇಳಿದ. ಆದರೆ ಆ ಯುವಕ ಅವನ ಕೊನೆಯ ಮಾತುಗಳನ್ನು ಕೇಳಿಸಿಕೊಳ್ಳಲೇ ಇಲ್ಲ. ಕೋಪ ಬಿಗುಮಾನಗಳನ್ನು ಬಹಳ ಚೆನ್ನಾಗಿ ಪ್ರದರ್ಶಿಸುವಂತೆ ತಲೆಯೆತ್ತಿ, ವೇಗವಾಗಿ ಹಾದಿ ಹಿಡಿದು ಹೊರಟ.

'ಪಾಪ' ಗಾರ್ಟ್ಸ್‌ಬೈ ತನ್ನಷ್ಟಕ್ಕೆ ತಾನೇ ಹೇಳಿಕೊಂಡ. ತನ್ನ ಕಥೆಯಲ್ಲಿ ಸಾಬೂನಿನ ವಿಚಾರ ಸೃಷ್ಟಿಸಿಕೊಂಡು ತಾನೇ ಸಂಕಟಕ್ಕೆ ಸಿಲುಕಿ ಹಾಕಿಕೊಂಡ. ಒಂದು ವೇಳೆ ಅವನಿಗೆ ಒಳ್ಳೆಯ ಮುಂದಾಲೋಚನೆ ಇದ್ದು, ಒಂದು ಸಾಬೂನಿನ ಬಿಲ್ಲೆಯನ್ನು ತನ್ನೊಂದಿಗೆ ತಂದಿದ್ದರೆ ತನ್ನ ಕಸುಬಿನಲ್ಲಿ ಅವನೊಬ್ಬ ಪರಿಣಿತನೆನಿಸುತ್ತಿದ್ದ. ಆ ವೃತ್ತಿಯಲ್ಲಿ ಪರಿಣಿತನೆನಿಸಬೇಕಾದರೆ ಸಾಕಷ್ಟು ಮುನ್ನೆಚ್ಚರಿಕೆಯ ಸಾಮರ್ಥ್ಯ ಇರಬೇಕು.

ಹೀಗೆ ಯೋಚಿಸುತ್ತಾ ಗಾರ್ಟ್ಸ್‌ಬೈ ಹೊರಡಲನುವಾದ. ಹಾಗೇ ಎದ್ದ ಕೂಡಲೇ ಉದ್ವೇಗ ಹಾಗೂ ಆಶ್ಚರ್ಯದಿಂದ ಕಿರುಚಿದ. ಕಲ್ಲುಬೆಂಚಿನ ಒಂದು ಪಾರ್ಶ್ವದ ಕೆಳಗೆ ಸಾಬೂನು ಎಂದು ಬರೆದಿದ್ದ ಒಂದು ಪ್ಯಾಕೆಟ್ ಬಿದ್ದಿತ್ತು. ಅದು ಸೋಪಿನ ಬಿಲ್ಲೆಯೇ ಆಗಿತ್ತು. ಬಹುಶಃ ಆ ಯುವಕ ಕಲ್ಲುಬೆಂಚಿನ ಮೇಲೆ ಕುಳಿತಾಗ ಅವನ ಮೇಲಂಗಿಯ ಜೇಬಿನಿಂದ ಜಾರಿಬಿದ್ದಿರಬಹುದು. ಮರುಕ್ಷಣವೇ, ಆತುರವಾಗಿ ಮಬ್ಬುಗತ್ತಲೆಯ ಹಾದಿಯಲ್ಲಿ ಗಾರ್ಟ್ಸ್‌ಬೈ ರಭಸವಾಗಿ ತಿಳಿಬಿಳಿಬಣ್ಣದ ಕೋಟಿನ ಯುವಕನನ್ನು ಅರಸುತ್ತಾ ಹೊರಟ. ಆ ಯುವಕನಾಗಲೇ ರಸ್ತೆಯ ಮಗ್ಗುಲಲ್ಲಿ ನಿಂತು ಯಾವ ಕಡೆಗೆ ಹೋಗಬೇಕೆಂಬ ಅನುಮಾನದಿಂದ ಯೋಚಿಸುತ್ತಾ ನಿಂತಿದ್ದುದನ್ನು ಗಮನಿಸಿ ಗಾರ್ಟ್ಸ್‌ಬೈ ಅವನನ್ನು ಕೂಗಿ ಕರೆದ. ತಕ್ಷಣ ಆ ಯುವಕ ಜಾಗೃತನಾಗಿ ಅವನೊಡನೆ ಎಲ್ಲದಕ್ಕೂ ಸಿದ್ಧನಿರುವವನಂತೆ ತಿರುಗಿ ನೋಡಿದ 'ನಿನ್ನ ಕಥೆ ಸತ್ಯ ಎಂದು ನಂಬಲು ಅಗತ್ಯವಾಗಿ ಬೇಕಾಗಿದ್ದ ಸಾಕ್ಷಿ ಸಿಕ್ಕಿತು', ಜೇಬಿನಿಂದ ಸೋಪನ್ನು ತೆಗೆಯುತ್ತಾ ಗಾರ್ಟ್ಸ್‌ಬೈ ಹೇಳಿದ. ಬಹುಶಃ ಸೀಟಿನ ಮೇಲೆ ನೀವು ಕುಳಿತುಕೊಳ್ಳುವಾಗ ಅದು ಜೇಬಿನಿಂದ ಜಾರಿ ಬಿದ್ದಿರಬಹುದು. ನೀವು ಎದ್ದು

ಹೊರಟಕೂಡಲೇ, ಅದು ನೆಲದ ಮೇಲೆ ಬಿದ್ದಿದ್ದುದನ್ನು ನಾನು ನೋಡಿದೆ. ನಿಮ್ಮ ಮೇಲೆ ಸಂಶಯ ಪಟ್ಟದುದಕ್ಕಾಗಿ ದಯ ವಿಟ್ಟು ಕ್ಷಮಿಸಿ. ಆದರೆ ನಿಮ್ಮ ಮುಖ ಭಾವ ನಿಮಗೆ ವಿರುದ್ಧವಾಗಿತ್ತು. ಈಗ ನಿಮಗೇನಾದರೂ ಸಾಲ ಬೇಕಿದ್ದರೆ....

ತಕ್ಷಣವೇ ಹಣವನ್ನು ಜೇಬಿನೊಳಗಿಳಿ ಬಿಟ್ಟ ಯುವಕ 'ಇದು ನನ್ನ ವಿಳಾಸ ಇರುವ ಕಾರ್ಡ್.' ಮುಂದುವರೆಸಿದ ಗಾರ್ಟ್ಸ್‌ಬೈ 'ಈ ವಾರದಲ್ಲಿ ಯಾವ ದಿನ ಬೇಕಾದರೂ ನೀವು ನನ್ನ ಹಣ ಹಿಂತಿರು ಗಿಸಬಹುದು. ಈ ಸೋಪನ್ನು ಸಹಾ ತೆಗೆದುಕೊಳ್ಳಿ. ಮತ್ತೆ ಅದನ್ನು ಕಳೆಯ ಬೇಡಿ. ನಿಮಗೆ ಒಳ್ಳೆಯ ಮಿತ್ರನಿದ್ದಂತೆ ಅದು'.

'ನೀವು ಹುಡುಕಿಕೊಟ್ಟಿರುವುದು ಬಹಳ ಅದೃಷ್ಟದ ವಸ್ತು' ಯುವಕ ಹೇಳಿದ. ನಂತರ ಮಾತಾಡಲು ಶಬ್ದಗಳು ಸಾಲದವ ನಂತೆ ಒಂದೆರಡು ಪದಗಳಲ್ಲಿ ವಂದನೆಗಳನ್ನು ಸಲ್ಲಿಸಿ ನೈಟ್ಸ್‌ಬ್ರಿಡ್ಜ್ ಕಡೆಗೆ ವೇಗವಾಗಿ ಹೊರಟ.

'ಪಾಪ ಬಡಹುಡುಗ, ತುಂಬ ಸಂಕಟ ದಲ್ಲಿದ್ದ', ತನ್ನಷ್ಟಕ್ಕೆ ತಾನೇ ಗಾರ್ಟ್ಸ್‌ಬೈ ಹೇಳಿಕೊಂಡ; ನನಗೇನು ಆಶ್ಚರ್ಯವೆನಿಸ ಲಿಲ್ಲ. ಆದರೆ ಅವನಿಗೆ ಈಗ ಸ್ವಲ್ಪ ನೆಮ್ಮದಿ ಯೆನಿಸಿರಬೇಕು. ಇನ್ನು ಮುಂದೆ ಜನರ ಮುಖಭಾವಗಳ ಮೇಲೆ ತಕ್ಷಣ ಯಾವುದೇ ತೀರ್ಮಾನ ತೆಗೆದುಕೊಳ್ಳಬಾರದೆಂದು ಪಾಠ ಕಲಿತೆ.'

ಹೀಗೆ ಯೋಚಿಸುತ್ತಾ ಗಾರ್ಟ್ಸ್‌ಬೈ ಮತ್ತೆ ಪಾರ್ಕಿನಲ್ಲಿ ತಾನು ಕುಳಿತಿದ್ದ ಕಲ್ಲು ಬೆಂಚಿನ ಕಡೆಗೆ ನಡೆದ. ಕೂಡಲೇ ಒಬ್ಬ ವಯಸ್ಸಾದ ವ್ಯಕ್ತಿ ಬೆಂಚಿನ ಕೆಳಗೆ ಸುತ್ತ ಮುತ್ತ ಕೈಗಳಿಂದ ಏನನ್ನೋ ಹುಡುಕು ತ್ತಿದ್ದುದನ್ನು ಕಂಡ. ಗಾರ್ಟ್ಸ್‌ಬೈ ಆ ಮುದುಕ ಆ ಯುವಕನಿಗಿಂತಲೂ ಮೊದಲೇ ತನ್ನ ಪಕ್ಕದಲ್ಲಿ ಕುಳಿತಿದ್ದವನು ಎಂದು ಗುರುತು ಹಿಡಿದ.

'ಏನಾದರೂ ಕಳೆದು ಹೋಗಿದೆಯಾ ಸರ್ ?' ಅವನು ಕೇಳಿದ

'ಹೌದು, ಸರ್, ಒಂದು ಸಾಬೂನಿನ ಬಿಲ್ಲೆ.'

ಸ್ವಾತಂತ್ರ್ಯವೆಂಬುದು ಯಾರೂ ಕೊಡುವಂಥ ಸರಕಲ್ಲ! ಅದು ನಾವು ಪಡೆದು ಕೊಳ್ಳಬೇಕಾದದ್ದು.

—ನೇತಾಜಿ ಸುಭಾಷ್‌ಚಂದ್ರ ಬೋಸ್

ಹೀಗೋರ್ವ ಗೆಳೆಯ

ಅರುಣಆದೂರ್
ನಂ. ೧೬೬೨, ೬ನೇ ಕ್ರಾಸ್
ವಿಜಯನಗರ, ೨ನೇ ಹಂತ
ಬೆಂಗಳೂರು-೫೬೦ ೦೪೦

ಇಂದಿಗೆ ಸರಿಯಾಗಿ ಮೂವತ್ತು ದಿನಗಳು. ಹೌದು, ಕಳೆದ ಮೂರು ವರುಷಗಳಿಂದ ಬರುತ್ತಿದ್ದ ಆತನ ಪತ್ರಗಳು ನಿಂತು ಮೂವತ್ತು ದಿನಗಳು!! ಓಹ್....ಆತನ ಪತ್ರಗಳಲ್ಲಿಯ ಅಕ್ಷರ ಅಕ್ಷರಗಳೂ ನನ್ನ ಜೀವನದ ರೆಂಬೆ ಕೊಂಬೆಗಳಿಗೆ ಹೊಸ ಹುರುಪನ್ನು ತಂದೊಡ್ಡುತ್ತಿತ್ತು. ಆ ಪತ್ರಗಳಲ್ಲಿ ಲಕಲಕಿಸುತ್ತಿದ್ದ ಬೆಲೆಕಟ್ಟಲು ಅಸಾಧ್ಯವಾದ ವಾಕ್ಯಗಳು, ಪ್ರೀತಿಯ ಸಿಂಚನ, ಆತ್ಮೀಯತೆ, ನನ್ನೊಡಲ ನೋವುಗಳಿಗೆ ಕಡಿವಾಣಹಾಕುತ್ತಿತ್ತು. ಹೊಸ ಚೇತನಕ್ಕೆ ನಾಂದಿಯಾಗುತ್ತಿತ್ತು. ದೂರದ ದಿಗಂತದಲ್ಲಿರುವ ಭವಿಷ್ಯಕ್ಕೆ ಉಲ್ಲಾಸದ ದ್ಯೋತಕವಾಗುತ್ತಿತ್ತು. ನವುರಾದ ಹಾಸ್ಯ ನಿಖರತೆ....ಒಟ್ಟನಲ್ಲಿ ಆತನ ಪತ್ರಗಳು ನನ್ನನ್ನು ಆಳವಾಗಿ ಪ್ರೀತಿಸುತ್ತಾ ನನ್ನ ಜೀವನಕ್ಕೆ ಹೊಸ ಚೈತನ್ಯ ನೀಡುತ್ತಿದ್ದುವು.

ನನ್ನ ಬಾಲ್ಯವನ್ನು ನೆನಪಿಸಿದಾಗ ನನಗೇ ಆಶ್ಚರ್ಯವಾಗುತ್ತದೆ. ಅದೆಂತು ನಾನೋರ್ವ ಆಫೀಸರನಾದೆ? ಬಾಲ್ಯದಿಂದಲೇ ಅನಾಥನಾಗಿದ್ದೆ. ಅತ್ತಾಗ ಲಲ್ಲೆಗೆರೆದು ಕೈತುತ್ತು ನೀಡಲು ನನಗೆ ಅಮ್ಮ ಇರಲಿಲ್ಲ. ಬಯಸಿದ್ದನ್ನು ಕೊಡಿಸಿ ಮುದ್ದಿಸಲು ಅಪ್ಪನಿರಲಿಲ್ಲ. ಓರಗೆಯ ಒಡನಾಡಿಗಳು ಇರಲೇ ಇಲ್ಲ. ನಾನಾಗ ಮರುಳುಗಾಡಿನ ಒಂಟಿಮರವಾಗಿದ್ದೆ. ಯಾರೋ ಕೊಟ್ಟ ಅನ್ನವನ್ನುಂಡು ಬದುಕುತ್ತಿದೆ. ಅದಾವುದೋ ಛಲದಿಂದ ಜೀವನದ ಏಳುಬೀಳುಗಳ ಜೊತೆ ಹೋರಾಡಿ, ಇಂದು ಸಮಾಜ ಗುರುತಿಸುವ ಒಬ್ಬ ಮನುಷ್ಯನಾದೆ.

ಸುಮಾರು ಮೂರು ವರುಷಗಳ ಹಿಂದೆ 'ಪೆನ್‌ಫ್ರೆಂಡ್'ಬೇಕಾಗಿದ್ದಾರೆ ಶೀರ್ಷಿಕೆಯಡಿಯಲ್ಲಿ ಆತನ ಹೆಸರು, ಹವ್ಯಾಸಕಂಡು ಆಕರ್ಷಿತನಾಗಿದ್ದೆ. ಹಿಂದು ಮುಂದು ಯೋಚಿಸದೆ ಪತ್ರಿಸಿದೆ. ಆತನ ಮೊತ್ತ ಮೊದಲು ಪತ್ರ ಆ ಬುಧವಾರ ನನಗೆ ತಲುಪಿತು. ಅಂದಿನಿಂದ ಪ್ರತೀ ಬುಧವಾರ ನನ್ನ ಕೈಸೇರುತ್ತಿದ್ದ ಆತನ ಪತ್ರಗಳು ನಿಂತು ಇಂದಿಗೆ ಮೂವತ್ತು ದಿನಗಳು ಕಳೆದುವು.

ಪ್ರತಿಯೊಂದು ಪತ್ರದಲ್ಲಿಯೂ ಅವನನ್ನು ನೋಡಬೇಕೆಂಬ ನನ್ನೊಳಗಿನ ಬಯಕೆಯನ್ನು ತಿಳಿಸುತ್ತಿದ್ದೆ. ಆದರೆ ಅದಕ್ಕೆ ಅವನು ಅವಕಾಶವನ್ನೀಯಲೇ ಇಲ್ಲ. ಅವನ ಹೊರತಾಗಿ ನನಗೆ ಆತ್ಮೀಯರಾರೂ ಇರಲಿಲ್ಲ. ಒಂದೊಮ್ಮೆ ನಾನು ಮಡಿದರೆ ನನ್ನ ಪತ್ನಿ, ಮಕ್ಕಳು ಅನಾಥರಾಗುವ

ಕಲ್ಲವೆ ಎಂಬ ಮನದೊಳಗಿನ ಭಯದಿಂದ ಅವಿವಾಹಿತನಾಗಿರಲು ನಿರ್ಧರಿಸಿದೆ. ಅದನ್ನು ಆತನಿಗೆ ತಿಳಿಸಿದ್ದೆ. ನನ್ನ ಹುಚ್ಚು ನಿರ್ಧಾರ ಆತನಿಗೆ ಸಹ್ಯವಾಗಲೇ ಇಲ್ಲ.

ಇಂದು ಆತನನ್ನು ಭೇಟಿಯಾಗಿ, ಗೆಳೆಯಾ ಯಾಕೆ ಪತ್ರಿಸುವುದನ್ನು ನಿಲ್ಲಿಸಿದೆ ಎಂದು ಕೇಳಲು ನೈಲುಗಳಾಚೆಯಿರುವ ಆತನ ಊರಿಗೆ ಹೊರಟೆ. ಆತನ ಮನೆಯ ಬಾಗಿಲನ್ನು ಕೈಯಿಂದ ತಟ್ಟಿದೆ. ಓರ್ವ ಮಧ್ಯವಯಸ್ಕ ಮಹಿಳೆ ಬಾಗಿಲು ತೆರೆಯು ತ್ತಿದ್ದಂತೆಯೇ ಒಳಗಡಿಯಿಟ್ಟೆ. "ಅಮ್ಮಾ ನಾನು ಮಧು. ಸಾಗರನ ಸ್ನೇಹಿತ. ಸಾಗರ ಇಲ್ಲವೇನಮ್ಮಾ" ಎಂದೆ. ನಿಧಾನವಾಗಿ ಒಳಗಡಿಯಿಟ್ಟ ಆಕೆ ಮರಳುವಾಗ ಕೈಯಲ್ಲಿ ಒಂದು ಪತ್ರವಿತ್ತು. ಆತುರದಿಂದ ತೆರೆದು ಓದತೊಡಗಿದೆ.

ನನ್ನ ಮಧು,

ನಾನೋರ್ವ ಬ್ಲಡ್ ಕ್ಯಾನ್ಸರ್ ರೋಗಿ. ನಿನ್ನನ್ನು ನೋಡಲು ಇಷ್ಟ ಪಟ್ಟೆ. ಆದರೆ ನಿನ್ನ ಮೃದು ಮನಸ್ಸಿಗೆ ನೋವನ್ನುಂಟುಮಾಡಲು ಇಷ್ಟವಿಲ್ಲದೆ ನನ್ನ ಅಸೌಖ್ಯವನ್ನು ನಿನಗೆ ತಿಳಿಸಲಿಲ್ಲ. ಸಾವಿನೊಡನೆ ಹೋರಾಡುತ್ತಾ ನಿನಗೆ ಪತ್ರಿಸುತ್ತಿದ್ದೆ. ಇದೇ ನನ್ನ ಕೊನೆಯ ಪತ್ರ. ನೀನು ಎಂದಾದರೂ ನನ್ನನ್ನು ಹುಡುಕುತ್ತ ಮನೆಗೆ ಬರಬಹುದೆಂದು ಈ ಪತ್ರವನ್ನು ನನ್ನಮ್ಮನಲ್ಲಿ ನಿನಗಾಗಿ ಕೊಟ್ಟಿರುತ್ತೇನೆ. ನಿನಗೆ ಶುಭವಿದಾಯ.

ನರಜೀವನದ ರಣದಿ ವಿಧಿಯ
ಬಲವೊಂದುಕಡೆ ।
ಚಿರವಿವೇಕದಿ ಬೆಳೆದ ನಲುಮೆ
ಯೊಂದುಕಡೆ ॥
ಉರುಬುತಿರೆ ಪುರುಷಂಗೆ ನಲುಮೆ
ಯುಳಿತವೆ ಗೆಲವು ।
ಪುರುಷತನವೇ ವಿಜಯ—ಮಂಕುತಿಮ್ಮ ॥

ನಿನ್ನ ಅಂತರಂಗದ ಗೆಳೆಯ
ಸಾಗರ

ಮನಸ್ಸಿನ ಚಿಂತಾಭ್ರಾಂತಿಗಳಿಗೆಲ್ಲ ಅಹಂಕಾರವೇ ಕಾರಣವಾಗಿದೆ. ಅಹಂಕಾರದಿಂದ ದೂರರುವದರಿಂದಲೇ ಮನಸ್ಸಿಗೆ ಶಾಂತಿ ನೆಮ್ಮದಿಗಳು ಲಭಿಸುತ್ತವೆ.

—ಮಹಾವೀರ

ಸಮರಸವೇ ಜೀವನ

ಟಿ. ವಿ. ರಾಧ
'ಅನಂತ ನಿಲಯ', ೧೨೯, ೭ನೇ ಮುಖ್ಯ ರಸ್ತೆ
ಭೈರಸಂದ್ರ, ಅಫಿಷಿಯಲ್ ಕ್ವಾರ್ಟರ್ಸ್
ಜಯನಗರ ಪೂರ್ವ, ಬೆಂಗಳೂರು-೫೬೦೦೧೧

ವರ್ತಮಾನ ದಿನಗಳ ಆಧಾರ ಶ್ರುತಿ "ಅನುಭೋಗಾತಿರೇಕತ್ವ". ಆದರೆ ಸರಕು ಹಾಗೂ ಸೇವೆಗಳ ಅನುಭೋಗಿಯಾದ ವ್ಯಕ್ತಿ ಸ್ವಪ್ರಯತ್ನ, ಸ್ವಾವಲಂಬನೆ ಮುಂತಾದ ಸ್ವಸಹಾಯ ಕ್ರಮಗಳಿಂದ ದೂರವಾಗಿ ಎಲ್ಲವನ್ನೂ 'ಸರಕು ಸೇವೆ'ಗಳಿಗೇ—ಅಂದರೆ ಅಂಗಡಿಗಳಿಗೇ—ವರ್ಗಾಯಿಸಿರುವ ಕೃತಕ ಜೀವನ. ಇದನ್ನು ಅನುಸರಿಸುವಾತ ಎಷ್ಟು ದುಡಿದರೂ ಸಾಕಾಗುವುದಿಲ್ಲ; ಅನುಭೋಗ ವಸ್ತುವೇ ಈತನನ್ನು ನಿಯಂತ್ರಿಸುವ ಸನ್ನಿವೇಶ ಪರಿಹಾರ?

ವಿಜ್ಞಾನಯುಗ, ಸ್ಪೂಟ್ನಿಕ್ ಯುಗ ಇದ್ದಂತೆ ಈಗ 'ಉದ್ಯೋಗಯುಗ'. ಈಗ ಯಾರನ್ನು ನೋಡಿದರೂ ಕೆಲಸಕ್ಕೆ ಹೋಗುವವರೇ, ಈ ಮೊದಲು ಹೇಳುತ್ತಿದ್ದ 'ಉದ್ಯೋಗಂ ಪುರುಷ ಲಕ್ಷಣಂ' ಬದಲಾಗಿ ಈಗ "ಉದ್ಯೋಗಂ ಸರ್ವಜನ ಲಕ್ಷಣಂ" ಆಗಿದೆ. ಇಂದು ಬಾಲಕಾರ್ಮಿಕರ ವಿರುದ್ಧ ಹೋರಾಟ ನಡೆದಿದ್ದರೂ, ಆರು ವರ್ಷದ ಮಗುವಿನಿಂದ ಹಿಡಿದು ಎಂಬತ್ತು ವರ್ಷದ ವೃದ್ಧರವರೆಗೂ ಒಂದಲ್ಲ ಒಂದು ರೀತಿಯ ಉದ್ಯೋಗದ ಅಗತ್ಯವಿದೆ ಎನ್ನುವಂತಾಗಿದೆ. ಈ ಸಮಾಜದಲ್ಲಿ ಹಿಂದೆ ದುಡಿಯುವ ಕೈ ಒಂದಾದರೆ ತಿನ್ನುವ ಕೈಗಳು ಹತ್ತಾರಿದ್ದುವು. ಆದರೆ ಇಂದು ಹತ್ತಾರು ತಿನ್ನುವ ಕೈಗಳಿಗೆ ಹತ್ತಾರು ದುಡಿಯುವ ಕೈಗಳೇ ಬೇಕು.

ಒಂದು ಮನೆಯಲ್ಲಿ ಗಂಡ ಹೆಂಡತಿ ಮಗು ಇದ್ದಾಗ, ಇಬ್ಬರೂ ದುಡಿಯಲು ಹೋದರೆ ಮಗುವಿನ ಗತಿ ದೇವರೇ ಗತಿ. ಇಂದಿನ ಮಕ್ಕಳ ಬೇಕು ಬೇಡಗಳನ್ನು ಗಮನಿಸಬೇಕಾದರೆ, ಇಂದಿನ ದುಬಾರಿ ಯುಗದಲ್ಲಿ ಗಂಡ ಹೆಂಡತಿ ಇಬ್ಬರ ಗಳಿಕೆಯೂ ಅಗತ್ಯ. ಹೀಗಾಗಿ ಇಬ್ಬರೂ ದುಡಿಯಲು ಹೊರಗೆ ಹೋಗಬೇಕು. ಚಿಕ್ಕ ಮಗುವನ್ನು ಬೇಬಿಸಿಟ್ಟಿಂಗ್, ಕ್ರೇಚ್, ಇಲ್ಲಾ ತಾಯಿಯ ಮನೆ ಹೀಗೆ ಎಲ್ಲಾದರೂ ಒಂದು ಕಡೆ ಬಿಡಬೇಕು. ಹೀಗೆ ಬಿಟ್ಟೆವೆಂದು ನಿಶ್ಚಿಂತೆಯಿಂದ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲ. ಕೆಲಸಕ್ಕೆ ಹೋಗುವ ಮಗುವಿಗೆ ಸ್ನಾನಮಾಡಿಸಿ, ಹಾಲು ಕುಡಿಸಿ, ಅವಕ್ಕೆ ಅಗತ್ಯವಾದ ಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿ ಮಗುವನ್ನು ನೋಡಿಕೊಳ್ಳಬೇಕಾದುದರ ಬಗ್ಗೆ ಸಾಕಷ್ಟು ವಿವರಣೆ ನೀಡಿ ತಾಯಿಯನ್ನು ಬಿಟ್ಟಿರಲಾರದೆ ಅಳುತ್ತಿರುವ ಮಗುವನ್ನು ಗಟ್ಟಿ ಮನಸ್ಸಿನಿಂದ ಬಿಟ್ಟು ಕೆಲಸಕ್ಕೆ ಹೋಗಬೇಕು. ಅಲ್ಲಿ

ಮನಸ್ಸು ನಿಲ್ಲದೆ, ಕಾರ್ಯಗಳನ್ನು ಸರಿಹೋಗಿ ಮಾಡದೆ ದೂರವಾಣಿಯ ಮೂಲಕ ಮಗುವಿನ ಕ್ಷೇಮ ಸಮಾಚಾರವನ್ನು ತಿಳಿಯಬೇಕಾಗುತ್ತದೆ. ತಾಯಿಯ ಮನಸ್ಸು 'ಅತ್ತ ಮೇಲೆ ಕಣ್ಣು ಅಂಗಡಿ ಮೇಲೆ ಕೈ' ಎನ್ನುವಂತೆ ದೇಹ ಕೆಲಸ ಮಾಡುತ್ತಿದ್ದರೂ ಮನಸ್ಸು ಮಗುವಿನ ಮೇಲಿರುತ್ತದೆ. ಇವೆಲ್ಲಾ ಆದರೂ, ಸಾವಿರಾರು ರೂಪಾಯಿಗಳನ್ನು ಸುರಿದರು ಅವರು ಮಗುವನ್ನು ಚೆನ್ನಾಗಿ ನೋಡಿಕೊಂಡರೆ ಪರವಾಗಿಲ್ಲ. ಏಕೆಂದರೆ ಅವರಿಗಿರುವುದು, ಅವರು ನೋಡಿಕೊಳ್ಳಬೇಕಾಗಿರುವುದು ಇದೊಂದೇ ಮಗುವನ್ನಲ್ಲವಲ್ಲ. ಇನ್ನೂ ಅನೇಕ ಮಕ್ಕಳ ಜವಾಬ್ದಾರಿ ಇರುತ್ತದಲ್ಲ ಆದರೆ ಒಂದು ನಿಶ್ಚಿಂತೆಯೆಂದರೆ ಮಗು ಬೀದಿಯಲ್ಲಿ ವಾಹನಗಳಿಗೆ ಸಿಕ್ಕಿಕೊಳ್ಳದೆ ಒಳಗಡೆಯೇ ಇರುತ್ತದೆಂಬ ಧೈರ್ಯ.

ಇನ್ನು ಮಗು ಸ್ವಲ್ಪ ದೊಡ್ಡದಾಗಿ ಶಾಲೆಗೆ ಹೋಗುವಂತಾಯಿತು ಎನ್ನೋಣ. ಆಗ ಇನ್ನೊಂದು ರೀತಿಯ ಸಮಸ್ಯೆ. ಮಗುವಿನ ಶಾಲೆಯ ವೇಳೆ ತಂದೆ ತಾಯಿ ಕೆಲಸಕ್ಕೆ ಹೋಗುವ, ಬರುವ ವೇಳೆ ಒಂದೇ ಆಗಿರುವುದಿಲ್ಲ. ಆಗ ಮಗು ತಾಯಿ ತಂದೆ ಕೆಲಸಕ್ಕೆ ಹೋಗುವ ಮೊದಲೇ ಶಾಲೆಗೆ ಹೋಗಿ ಅವರು ಹಿಂತಿರುಗುವ ಮೊದಲೇ ಹಿಂತಿರುಗುತ್ತದೆ. ಶಾಲೆಗೆ ಹೋಗುವಾಗ ಅಮ್ಮ ಅವಸರ ಅವಸರವಾಗಿ ಕೊಟ್ಟ ಹಾಲು ಕುಡಿದು ಡಬ್ಬಿಗೆ ಬ್ರೆಡ್ಡೊ, ಬಿಸ್ಕತ್ತೋ, ಹೋಟಲಿನಿಂದ ತಂದ ಇಡ್ಲಿಯೋ ಏನೋ ಒಂದು ಒದಗಿಸಿಕೊಟ್ಟಾಗ ಮಧ್ಯಾಹ್ನ ಇಷ್ಟವಿದ್ದರೆ ತಿನ್ನುವುದೋ ಇಲ್ಲದಿದ್ದರೆ ಹಾಗೆಯೇ ತರುವುದೋ ಆಗುತ್ತದೆ. ಮಗು ತಿಂಡಿ ತಿಂದಿದೆಯೋ ಇಲ್ಲವೋ ಎಂದು ನೋಡಲು ತಾಯಿ ಬಂದಿಲ್ಲ. ಮನೆಯೂ ಬೀಗ. ಅಮ್ಮ ಬರುವವರೆಗೂ ಮಗು, ಬ್ಯಾಗೊಂದೆಡೆ, ಶೂ ಒಂದೆಡೆ ಎಸೆದು, ಆರಾಮವಾಗಿ ತನ್ನ ಶಾಲೆಯ ಸಮವಸ್ತ್ರದಲ್ಲೇ ಮಣ್ಣಿನಲ್ಲಿ ಆಡುತ್ತಿರುತ್ತದೆ. ಶಾಲೆಗೆ ಮರು ದಿನ ಅದೇ ಧೂಳಿನ ಸಮವಸ್ತ್ರ ಧರಿಸಿಕೊಂಡು ಹೋಗಲು ಸಾಧ್ಯವಿಲ್ಲ. ಆಗ ತಂದೆ ತಾಯಂದಿರು ಒಂದು ಜೊತೆಯ ಬದಲು ೨-೩ ಜೊತೆ ಬಟ್ಟೆಗಳನ್ನು ಒದಗಿಸಬೇಕಾಗುತ್ತದೆ. ಇದರಿಂದ ಆರ್ಥಿಕ ಪರಿಸ್ಥಿತಿ ಮುಗ್ಗರಿಸುತ್ತದೆ. ಈ ರೀತಿ ಹೇಳಿದೆನೆಂದು, ಗಂಡ ಹೆಂಡತಿಯರಿಬ್ಬರೂ ಕೆಲಸಕ್ಕೆ ಹೋಗುವುದರ ಬಗ್ಗೆ ವಿರೋಧವಿದೆ ಎಂದು ತಪ್ಪು ತಿಳಿಯಬೇಡಿ. ಆದರೆ ಎದುರಿಸಬೇಕಾದ ಪರಿಸ್ಥಿತಿಯನ್ನು ಮನದಟ್ಟು ಮಾಡಿ ಕೊಡುತ್ತಿದ್ದೇನೆ ಅಷ್ಟೆ.

ಈ ರೀತಿಯ ತೊಂದರೆಗಳನ್ನು ಎದುರಿಸಲು ಕೆಲವರು ಮಗುವನ್ನು ತಾವು ಕೆಲಸಕ್ಕೆ ಹೋಗುವಾಗ ತಾಯಿಯ ಮನೆಯಲ್ಲಿ ಬಿಟ್ಟು (ತಾಯಿ ಅದೇ ಊರಿನಲ್ಲಿದ್ದರೆ) ಶಾಲೆ ಮುಗಿದನಂತರ, ಕೆಲಸದಿಂದ ಬರುವಾಗ ಮನೆಗೆ ಕರೆದುಕೊಂಡು ಬಂದರೆ, ಇದಕ್ಕೆ ಹೆತ್ತ ತಾಯಿಯ ಆಕ್ಷೇಪವಿಲ್ಲದಿದ್ದರೂ, ಅಕ್ಕ, ತಂಗಿ, ತಮ್ಮ, ಅತ್ತಿಗೆಯರ ಚುಚ್ಚು ನುಡಿಗಳನ್ನು ಕೇಳಬೇಕಾದ ಸಂದರ್ಭ ಒದಗುತ್ತದೆ. ಆದರೆ ವಿಧಿಯಿಲ್ಲದೆ ಅವುಗಳನ್ನೆಲ್ಲಾ ಸಹಿಸಬೇಕಾಗುತ್ತದೆ. ಇದೇ ಸಹನೆ ಇರುವುದಾದರೆ ಅದು ತವರು ಮನೆಗೆ ಮಾತ್ರ ಯಾಕೆ? ಅತ್ತೆಯ ಮನೆಗೂ ಏಕೆ ಮೀಸಲಾಗಿರಬಾರದು? ಕೆಲವರು ಮನೆ

ಯಲ್ಲಿ ಅತ್ತೆ, ನಾದಿನಿ, ಮೈದುನರಿದ್ದರೂ ಅವರೊಡನೆ ಬಾಳಲು ಇಷ್ಟಪಡದೆ ತನ್ನ ಗಂಡನನ್ನು ಕರೆದುಕೊಂಡು ಬೇರೆ ಸಂಸಾರ ಮಾಡುತ್ತಾರೆ ಹಾಗೂ ಈ ರೀತಿ ಕಷ್ಟ ಪಡುತ್ತಾರೆ. ಬೇರೆ ಬೇರೆ ಕುಟುಂಬದಿಂದ ಬಂದ ಸೊಸೆ, ಅತ್ತೆ, ಅತ್ತಿಗೆ ನಾದಿನಿಯಲ್ಲಿ ಪರಸ್ಪರ ಹೊಂದಾಣಿಕೆ ಕಷ್ಟ. ಇದು, ಒಪ್ಪತಕ್ಕ ಮಾತೇನೋ ಹೌದು. ಆದರೆ 'ಕಾರ್ಯವಾಸಿ ಕತ್ತೆ ಕಾಲು ಕಟ್ಟು' ಎನ್ನುವ ಗಾದೆಯನ್ನಾದರೂ ಅನುಸರಿಸಿ ತನ್ನ ಮಗುವಿನ ಸುಖಕ್ಕಾಗಿ ತಮ್ಮ ಅಹಂಭಾವವನ್ನು ಹತೋಟಿಗೆ ತಂದುಕೊಂಡರೆ ಎಷ್ಟೋ ಮೇಲು. ಅವಿಭಕ್ತ ಕುಟುಂಬದಲ್ಲಿರುತ್ತಿದ್ದ ಅಜ್ಜ, ಅಜ್ಜಿ, ಅತ್ತೆ, ಮಾವ, ಚಿಕ್ಕಮ್ಮ, ಚಿಕ್ಕಪ್ಪ ಈ ರೀತಿಯ ಸಂಬಂಧಗಳೇ ಇಂದಿನ ಮಕ್ಕಳಿಗೆ ತಿಳಿದಿರುವುದಿಲ್ಲ. ಒಟ್ಟು ಕುಟುಂಬದಲ್ಲಿ ಬೆಳೆದ ಮಗು ಸಂಘಜೀವಿಯಾಗುತ್ತದೆ, ಸ್ವಾರ್ಥಿಯಾಗಲಾರದು. ಈ ಮಾತು ಕೇವಲ ಸೊಸೆಯಂದಿರಿಗೆ ಮಾತ್ರವಲ್ಲ. ಅತ್ತೆಯಂದಿರಿಗೂ ಅನ್ವಯಿಸುತ್ತದೆ. ಏಕೆಂದರೆ ಇವರಿಗೆ ಮಗಬೇಕು. ಸೊಸೆಬೇಡ. ತನ್ನ ಮಗಳು ಕೆಲಸಕ್ಕೆ ಹೋದರೆ ಕಷ್ಟಪಡುತ್ತಾಳೆಂಬ ಕನಿಕರ. ಅವಳ ಮಗುವನ್ನು ತಾನು ನೋಡಿಕೊಳ್ಳಬೇಕೆಂಬ ಅಕ್ಕರೆ. ಆದರೆ ಅದೇ ಸೊಸೆ ಮನೆಯಲ್ಲಿ ದುಡಿದು ಹೊರಗಡೆ ಕೆಲಸಕ್ಕೆ ಹೋಗಿ, ಮಗುವಿನ ಆರೈಕೆಯನ್ನೂ ನೋಡಿಕೊಳ್ಳಬೇಕು. ಇದೆಂತಹ ನ್ಯಾಯ? ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ! ಎನ್ನುವಂತಹ ನಡವಳಿಕೆಯಾದರೆ ಹೇಗೆ? ಆದ್ದರಿಂದ ಮಗಳನ್ನು ಮಗಳ ಮಗುವನ್ನು ಸಹಿಸಿಕೊಳ್ಳುವಂತೆ ಸೊಸೆಯನ್ನು ಸೊಸೆಯ ಮಗುವನ್ನೂ ಸಹಿಸಿಕೊಂಡರೆ ಸಂಸಾರದಲ್ಲಿ ಎಷ್ಟು ಸೊಗಸಿರುತ್ತದೆ. ಜೀವನದಲ್ಲಿ ಸಾಮರಸ್ಯವಿರುತ್ತದೆ. "ಸಮರಸವೇ ಜೀವನ."

ಈ ರೀತಿ ಎಲ್ಲರೂ ಪರಸ್ಪರ ಅರಿತು ನಡೆದುಕೊಂಡರೆ, ಇಂದು ನಾವು ಕಾಣುತ್ತಿರುವ ಪತಿ, ಪತ್ನಿ, ಮಗು, ಬೇಬಿ ಸಿಟ್ಟಿಂಗ್, ಸಮವಸ್ತ್ರ ಹಾಕಿಕೊಂಡು ಬಾಗಿಲಿನಲ್ಲಿ ಆಡುತ್ತಿರುವ ಮಗು, ಅಜ್ಜಿಯ ಕೈಯಿಂದ ರುಚಿರುಚಿಯಾದ ತಿಂಡಿಗಳನ್ನು ತಿನ್ನದೆ ಬ್ರೆಡ್, ಜಾಮ್, ಹೋಟೇಲಿನ ತಿಂಡಿ ತಿನ್ನುವ ಪರಿಸ್ಥಿತಿಗೆ ಸಿಕ್ಕಿರುವ ಮಗುವನ್ನು ಪ್ರೀತಿ ಪ್ರೇಮಗಳಿಂದ ಮುದ್ದಾಡಲು ಸಮಯವಿಲ್ಲದ ತಂದೆ ತಾಯಿಗಳ ಸಾಲು, ಈ ಎಲ್ಲಾ ಸಮಸ್ಯೆಗಳೂ ಪರಿಹಾರವಾಗಲು ಸಾಧ್ಯ.

ಇದನ್ನು ಅರಿತು ತಮ್ಮ ಮುಂದಿನ ಜೀವನವನ್ನು ಸ್ವರ್ಗವನ್ನಾಗಿಸಲು ಇಂದಿನ ಕನ್ಯೆಯರು ಮುಂದೆ ಬರುತ್ತಾರೆಂದು ಆಶಿಸಲೇ?

ಸರಸವೇ ಜನನ
ವಿರಸವೇ ಮರಣ
ಸಮರಸವೇ ಜೀವನ

(ದ. ರಾ. ಬೇಂದ್ರೆ)

ಮುದುಡದಿರಲಿ ಹೂಮನ

ಲೀಲಾ ಮಣ್ಣಾಲ
"ನಿಸರ್ಗ" ೮೬, ಗುರುರಾಜ ಲೇಔಟ್
ಸಿದ್ಧಾರ್ಥನಗರ ಅಂಚೆ
ಮೈಸೂರು–೫೭೦೦೧೧

ಕೇವಲ ಅಕ್ಷರಾಭ್ಯಾಸವಷ್ಟೇ ಶಾಲಾ ಶಿಕ್ಷಣದ ಗುರಿಯಲ್ಲ. ಮಕ್ಕಳಲ್ಲಿರುವ ಸುಪ್ತ ಪ್ರತಿಭೆ ಗುರುತಿಸಿ ಅವರ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗುವುದು ಕೂಡ ಶಿಕ್ಷಣದ ಉದ್ದೇಶವಾಗಬೇಕಾಗಿದೆ. ಹೀಗೆ ಚಿಂತಿಸಿದಾಗ ಪಠ್ಯವಿಷಯದಷ್ಟೇ ಪಠ್ಯೇತರ ವಿಷಯಗಳೂ ಪ್ರಮುಖವೆನಿಸುತ್ತವೆ. ಇತ್ತೀಚೆಗೆ ಹಲವು ವಿದ್ಯಾಸಂಸ್ಥೆಗಳು ಈ ಸಂಗತಿಯನ್ನು ಮನಗಂಡಿರುವುದು ಸ್ವಾಗತಾರ್ಹ. ಅದರಿಂದಾಗಿಯೇ ಇಂದು ಶಾಲಾಮಕ್ಕಳಿಗಾಗಿ ಗ್ರಾಮೀಣ ಹಾಗೂ ನಗರಮಟ್ಟದಲ್ಲಿ ಅನೇಕಾನೇಕ ಸ್ಪರ್ಧೆಗಳು ನಡೆಯುತ್ತವೆ. ವಿಜೇತರಿಗೆ ಬಹುಮಾನ ವಿತರಣೆಯೂ ಇರುತ್ತದೆ. ಆದರೆ ಇಲ್ಲಿ ಕೆಲವು ಮುಖ್ಯ ವಿಚಾರಗಳನ್ನು ನಿರ್ಲಕ್ಷಿಸುವುದು ಕಳವಳಕಾರಿ ಅಂಶವಾಗಿದೆ.

ಓರ್ವ ಪ್ರೌಢಶಾಲಾ ಶಿಕ್ಷಕಿಯಾಗಿ ನನ್ನ ವಿದ್ಯಾರ್ಥಿಗಳನ್ನು ಬೇರೆ ಶಾಲೆಗಳಿಗೆ ಕರೆದೊಯ್ದಾಗ ಕೆಲವೊಮ್ಮೆ ಕಹಿ ಅನುಭವ ನನಗಾದುದಿದೆ. ನಿಗದಿಮಾಡಿದ ಸಮಯ ಮೀರಿ ಎಷ್ಟು ಹೊತ್ತಾದರೂ ಕಾರ್ಯಕ್ರಮ ಆರಂಭವಾಗದಿರುವುದು, ಸ್ಪರ್ಧೆನಡೆಸುವ ಶಾಲಾ ಸಿಬ್ಬಂದಿಯೇ ಹಿಂದೆ ನಿಂತು ಹಗುರ ಟೀಕೆಗಳನ್ನು ಮಾಡುತ್ತಿರುವುದು, ಅರ್ಹತಾ ಪತ್ರ ನೀಡದೆ ಹಳೆಯ, ಬೇಡದ ವಸ್ತುವನ್ನು ಬಹುಮಾನವಾಗಿ ಕೊಡುವುದು ಇತ್ಯಾದಿ.

ಯಾವುದೇ ಸ್ಪರ್ಧೆ ಶಾಲಾಮಟ್ಟದಲ್ಲಿರಬಹುದು, ಅಂತರ ಶಾಲಾ ಮಟ್ಟದಲ್ಲಿರಬಹುದು. ಸ್ಪರ್ಧಿಗಳು ಹಾಗೂ ವ್ಯವಸ್ಥಾಪಕರು ಪೂರ್ವ ಸಿದ್ಧತೆಯಿಂದ ಕೂಡಿ, ಪರಿಪೂರ್ಣತೆಗೆ ಯತ್ನಿಸುವುದು ಅಗತ್ಯವಾದುದು. ಗಮನಿಸಬೇಕಾದ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧ ಶಾಲಾಮಟ್ಟದಲ್ಲಿ ಆಗಿಂದಾಗ್ಗೆ ವಿವಿಧ ಬಗೆಯ (ರಸಪ್ರಶ್ನೆ, ಪ್ರಬಂಧ, ಭಾಷಣ, ಗಾಯನ, ಚಿತ್ರಕಲೆ, ಕ್ರೀಡೆ ಇತ್ಯಾದಿ....ಇತ್ಯಾದಿ...) ತರಬೇತಿ ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಿ, ಪ್ರತಿಭೆಯನ್ನು ಆಯಾ ಕ್ಷೇತ್ರದಲ್ಲಿ ಗುರುತಿಸಿಟ್ಟುಕೊಳ್ಳಬೇಕು'. ಆಗ ಅಂತರ್ಶಾಲಾ ಸ್ಪರ್ಧೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಸುಲಭವಾಗುತ್ತದೆ. ಹಾಗೆ ಮಾಡದೆ ಕೊನೆಗಳಿಗೆಯಲ್ಲಿ, "ಯಾರಿಗೆ ಆಸಕ್ತಿಯಿದೆ? ಹೆಸರು ಕೊಡಿ" ಎಂದರೆ ಯಾರೂ ಮುಂದೆ ಬರುವುದಿಲ್ಲ ಬಂದರೂ ಸಿದ್ಧತೆ ಹಾಗೂ ಅನುಭವದ ಕೊರತೆಯಿಂದಾಗಿ ಸೋಲು ಉಂಟಾಗಬಹುದು.

೨. ಪಠ್ಯೇತರ ಚಟುವಟಿಕೆಗಳಲ್ಲಿ ಅಂತರ ಶಾಲಾಮಟ್ಟದ ಸ್ಪರ್ಧೆ ಎಂದರೆ ಹತ್ತು-ಹಲವು ಕೆಲಸ ಕಾರ್ಯಗಳಿರುತ್ತವೆ. ಸಭಾಂಗಣದ ಸಿದ್ಧತೆ, ಅತಿಥಿಗಳ ಕಡೆ ಗಮನ, ತೀರ್ಪುಗಾರರ ಸ್ವಾಗತ, ಉಪಾಹಾರದ ವ್ಯವಸ್ಥೆ ಇತ್ಯಾದಿ. ಸಂಸ್ಥೆಯ ಮುಖ್ಯಸ್ಥರು ಈ ಜವಾಬ್ದಾರಿಯನ್ನು ಸಹಶಿಕ್ಷಕರ ನಡುವೆ ಹಂಚಿಕೊಡುವುದರ ಮೂಲಕ ಕಾರ್ಯಕ್ರಮ ಸಮಯಕ್ಕೆ ಸರಿಯಾಗಿ, ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಸಭಾಂಗಣದ ಶಿಸ್ತನ್ನು ಸಂಪೂರ್ಣವಾಗಿ ಕಾಯ್ದುಕೊಳ್ಳ ಬೇಕಲ್ಲದೆ. ಹೊರಗಿನಿಂದ ಬಂದವರಿಗೆ ಇರಿಸುಮುರಿಸಾಗುವಂಥ ಸನ್ನಿವೇಶವನ್ನು ಉಂಟುಮಾಡಬಾರದು.

೩. ಸಂಬಂಧಿಸಿದ ವಿಷಯದಲ್ಲಿ ಸಾಕಷ್ಟು ಮಾಹಿತಿ ಸಂಗ್ರಹಿಸಿದ ಆತ್ಮವಿಶ್ವಾಸದೊಡನೆ ಸ್ಪರ್ಧಿ ನಿಗದಿಮಾಡಿದ ಸಮಯಕ್ಕೆ ಮುಂಚಿತವಾಗಿಯೇ ಸ್ಥಳದಲ್ಲಿರಬೇಕು. ಎದುರಾಳಿಗಳ ಸಾಮರ್ಥ್ಯದ ಬಗ್ಗೆ ಉಪೇಕ್ಷೆ ಸರ್ವಥಾ ಸಲ್ಲದು. ಹಾಗೆಯೇ ಸೋಲನ್ನು ಸವಾಲಾಗಿ ಸ್ವೀಕರಿಸುವ ಮನೋಭಾವನೆ ಯನ್ನು ಬೆಳೆಸಿಕೊಳ್ಳಬೇಕು.

೪. ವಿದ್ಯಾರ್ಥಿಗಳನ್ನು ಬೇರೆ ಶಾಲೆಗಳಿಗೆ ಕರೆದೊಯ್ಯುವ ಸಂದರ್ಭದಲ್ಲಿ ಭಾಗವಹಿ ಸುವ ಅಭ್ಯರ್ಥಿಗಳ ಜೊತೆಗೆ ಅವರನ್ನು ಕರೆದೊಯ್ಯುವ ಜವಾಬ್ದಾರಿ ಹೊತ್ತ ಶಿಕ್ಷಕರಿಗೂ ಆಯಾ ಶಾಲಾ ವತಿಯಿಂದ ಭತ್ಯೆ ನೀಡುವುದು ಅಗತ್ಯ. ಆ ಲೆಕ್ಕದಲ್ಲಿ ಪ್ರತಿ ಶಾಲೆಯೂ ಪ್ರತ್ಯೇಕ 'ನಿಧಿ' ಇರಿಸಿ ಕೊಳ್ಳಬೇಕು. ಹಾಗಲ್ಲದೆ ಕರೆದೊಯ್ಯು ವವನೇ ತನ್ನ ಜೇಬಿನಿಂದ ಹಣ ಖರ್ಚು ಮಾಡಬೇಕಾಗಿ ಬಂದರೆ, ಮುಂದಿನ ಸಲ ಯಾವ ಶಿಕ್ಷಕನೂ ಈ ಜವಾಬ್ದಾರಿಯನ್ನು ವಹಿಸಿಕೊಳ್ಳದಿರುವ ಸಂಭವವಿದೆ. (ಈ ವೆಚ್ಚವನ್ನು ಪಾಲಕರು ಭರಿಸುವುದೂ ಸಾಧುವಲ್ಲ) ಇದರಿಂದಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ.

೫. ಪ್ರಬಂಧ, ಭಾಷಣ, ಚಿತ್ರಕಲೆ, ಹೀಗೆ ಸ್ಪರ್ಧೆ ಯಾವುದೇ ಇರಬಹುದು. ಸೂಚಿಸುವ ವಿಷಯ ಮಕ್ಕಳಲ್ಲಿ ಆಸಕ್ತಿ ಉಂಟುಮಾಡುವಂತಿರಬೇಕು. ಅವರ ಬೌದ್ಧಿಕ ಮಟ್ಟಕ್ಕೆ ನಿಲುಕುವಂತಿರಬೇಕು. ಇಲ್ಲದಿದ್ದರೆ ಮಕ್ಕಳು ಗಿಣಿ ಪಾಠವನ್ನೊಪ್ಪಿ ಒಪ್ಪಿಸಬೇಕಾಗುತ್ತದೆ. (ವಿಪರ್ಯಾಸವೆಂದರೆ ಎಷ್ಟೋ ಬಾರಿ ಸೂಚಿತ ವಿಷಯ ತೀರ್ಪು ಗಾರರಾಗಿ ಬರುವ ಹಿರಿಯರ ಬೌದ್ಧಿಕ ಮಟ್ಟದಲ್ಲಿರುತ್ತದೆ!)

೬. ತೀರ್ಪುಗಾರರು ಇಬ್ಬರಿಗಿಂತ ಹೆಚ್ಚು ಮಂದಿ ಇರುವುದೊಳ್ಳೆಯದು ಅವರು ಸ್ಪರ್ಧೆ ನಡೆಸುವ ಸಂಸ್ಥೆಗೆ, ಸ್ಪರ್ಧಿಗಳಿಗೆ ನೇರವಾಗಿ ಸಂಬಂಧಿಸಿದವರಾಗಿರಬಾರದು ಎಂಬುದೊಂದೇ ಮುಖ್ಯವಲ್ಲ. ಸ್ಪರ್ಧಾ ವಿಷಯದಲ್ಲಿ ಅವರಿಗೆ ಸಂಪೂರ್ಣ ತಿಳುವಳಿಕೆ ಯಿರಬೇಕು ಎಂಬುದೂ ಅಷ್ಟೇ ಮುಖ್ಯ.

೭. ಬಹುಮಾನಿತರಿಗೆ ಪ್ರಶಸ್ತಿ ಪತ್ರ ನೀಡಲೇಬೇಕು. ಗೆದ್ದಿರುವುದಕ್ಕೆ ದಾಖಲೆ ಬೇಕಲ್ಲವೆ? ಬಹುಮಾನ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಇದ್ದರೆ ಉತ್ತಮ. ಚಿತ್ರಕಲಾ ಸ್ಪರ್ಧೆಯಾದರೆ-ಬಣ್ಣದ ಪೆಟ್ಟಿಗೆ ಪ್ರಬಂಧವಾದರೆ ಪುಸ್ತಕ, ಹೀಗೆ ಒಟ್ಟಿನಲ್ಲಿ ಮಕ್ಕಳಲ್ಲಿಯ ಸೃಜನಶೀಲತೆಗೆ ಪ್ರೋತ್ಸಾಹ

ಗಬೇಕು ಇಲ್ಲಿ ಬಹುಮಾನದ ಮುಖ ಲೆ ಮುಖ್ಯವಲ್ಲ.

ಮೇಲಿನ ಅಂಶಗಳನ್ನು ಗಮನಿಸದಿದ್ದರೆ ಗುವ ಪರಿಣಾಮಕ್ಕೆ ಒಂದೆರಡು ವಾಸ್ತವ ಉದಾಹರಣೆ ಕೊಡಬಹುದು.

ಅ) ಅನಂತ (ಹೆಸರು ಬದಲಿಸಿದೆ) ಎಂಬ ಹುಡುಗನಿಗೆ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿತ್ತು. ಮನೆಗೆ ಹಿಂದಿರುಗಿದ ಮಗನ ಮೊಗದಲ್ಲಿ ತಾಯಿ ಕಂಡುದು ಗೆಲುವಿನ ನಗುವಲ್ಲ, ಅವಮಾನದ ಅಳು ಮುಖ! ಕಾರಣ ಕೇಳಿದಾಗ ಅವ ಹೇಳಿದ್ದು ೀಗೆ, ಸರ್ಟಿಫಿಕೇಟ್ ಕೊಟ್ಟಿಲ್ಲ ಅಮ್ಮ. ಕೊಟ್ಟ ತಟ್ಟೆಯನ್ನು ಹಿಡಿದುಕೊಂಡು ಕ್ಷೆ ಬೇಡೋಕೆ ಲಾಯಖ್ಖು ಅಂತ ನ್ನ ಗೆಳೆಯರು ರೇಗಿಸಿದರು."

ಇಂಥ ವಸ್ತುಗಳಲ್ಲಿ ಮಕ್ಕಳಿಗೆ ಆಸಕ್ತಿ ರುವುದಿಲ್ಲವೆಂಬುದನ್ನು ಇಲ್ಲಿ ಗಮನಿಸ ಹುದು.

ಆ) ಆನಂದನೆಂಬ ಬಾಲಕನಿಗೆ ಭಾವಗೀತೆ ರ್ಧೆಯಲ್ಲಿ ಮೊದಲನೇ ಬಹುಮಾನ ೂರೆತ್ತಿತ್ತು. ಆದರೆ "ಇನ್ನು ಮುಂದೆ ರ್ಧೆಯಲ್ಲಿ ನಾನು ಭಾಗವಹಿಸುವುದೇ ಇಲ್ಲ" ಎಂದು ಅವನು ಶಪಥ ಮಾಡಿದ! ಕಾರಣವೇನೆಂದರೆ ಆನಂದನಿಗೆ ಪ್ರಶಸ್ತಿ ಪತ್ರ ಕೊಟ್ಟಿರಲಿಲ್ಲ. ಬದಲಾಗಿ ಜಿರಳೆ ತೂತು ಕೊರೆದ ಹಳೆಯ ಫೈಲಿಯೊಂದನ್ನು ಮಾತ್ರ ಬಹುಮಾನವಾಗಿ ನೀಡಲಾಗಿತ್ತು! (ರೋಟರಿಯೋ....ಇನ್ನಾವುದೋ ಸೇವಾ ಸಂಸ್ಥೆ ಶಾಲೆಗೆ ಯಾವತ್ತೋ....ನೀಡಿದ್ದ ಕೊಡುಗೆಯಿದ್ದಿರಬೇಕು!)

"ಇದನ್ನು ಹಾಗೆಯೇ ಇಟ್ಟುಕೊಂಡಿರು, ಮುಂದೆ ನಿನ್ನ ಮಗಳನ್ನು ಮದುವೆ ಮಾಡಿ ಕೊಡುವ ಕಾಲಕ್ಕೆ ವರದಕ್ಷಿಣೆಯಾಗಿ ಕೊಡಬಹುದು" ಎಂದು ಅವನ ಗೆಳೆಯರು ಚುಡಾಯಿಸಿದ್ದರು! ಇಂಥ ಸಣ್ಣ ವಿಷಯಕ್ಕೆಲ್ಲಾ ತಲೆಕೆಡಿಸಿಕೊಳ್ಳಬಾರದೆಂದು ಆ ಹುಡುಗನಿಗೆ ತಿಳಿಹೇಳಬೇಕಾದರೆ, ನನ್ನ ಕಲಿತ ಬುದ್ಧಿಯೆಲ್ಲಾ ಖರ್ಚಾಗಿ ಹೋಯಿತು!

ಇದು ಸ್ಪರ್ಧಾತ್ಮಕ ಯುಗ. ಭಾವೀ ಸತ್ಪ್ರಜೆಗಳನ್ನು ರೂಪಿಸಬೇಕಾದ ಶಿಕ್ಷಣ ಸಂಸ್ಥೆಗಳು, ಮಕ್ಕಳ ಹೂಮನಸ್ಸನ್ನು ಮುದುಡಿಸುವ ಬದಲು, ಅಲ್ಲಿ ಆತ್ಮ ವಿಶ್ವಾಸವನ್ನು ತುಂಬಿ ಸಹಜವಾಗಿ ಅರಳಲು ಅನುವು ಮಾಡಿಕೊಡಬೇಕಾಗಿದೆ.

ಅಧೈರ್ಯವು ಯಶಸ್ಸಿನ ವೈರಿ. ಧೈರ್ಯದಿಂದ ಮುನ್ನುಗ್ಗುವವರಿಗೇ ಯಶಸ್ಸು ದೊರೆಯುವುದು.

—ವಿವೇಕಾನಂದ

ಸ್ವಾತಂತ್ರ್ಯಪೂರ್ವ ಭಾರತದಲ್ಲಿನ ರಾಜಮಹಾರಾಜರ ತಿಕ್ಕಲುತನಗಳು :

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦ ೦೦೪

"ಕಣ್ಣು ಕೋರೈಸುವಂತಹ ಅದ್ಭುತ ಶಿಲೆಯ ಅರಮನೆಗಳು, ಆನೆಗಳು, ಆಭರಣಗಳು—ಇವನ್ನು ಸಾಧಾರಣ ಜನರಿಗೆ ತೋರಿಸುವುದಕ್ಕೇ ದೇವರು ರಾಜಮಹಾರಾಜರನ್ನು ಸೃಷ್ಟಿಸಿದ", ಎಂದು ಹೇಳಿದ ರುಡ್‌ಯಾರ್ಡ್ ಕಿಪ್ಲಿಂಗ್. ಅವರು ದರ್ಪಿಷ್ಠರಾಗಿರಬಹುದು ಅಥವಾ ಮೆದು ಸ್ವಭಾವದವರಾಗಿರಬಹುದು. ತುಂಬ ಧನಿಕರಿರಬಹುದು ಅಥವಾ ಹೆಚ್ಚು ಶ್ರೀಮಂತಿಕೆ ಇಲ್ಲದವರಾಗಿರಬಹುದು. ಆದರೆ, ಅವರೆಲ್ಲಾ ಅಸಾಮಾನ್ಯ ಜನ. ಅವರ ಸದ್ಗುಣ, ದುರ್ಗುಣ, ದುಂದುಗಾರಿಕೆ, ಐಲುತನ ಇವೆಲ್ಲಾ ಈಗ ಕಾಲಗಳಲ್ಲಿ ಸೇರಿಹೋಗಿದೆ. ರಾಜ, ಮಹಾರಾಜರುಗಳಿಲ್ಲದ ಭಾರತ ನಿಜಕ್ಕೂ ನಿಸ್ತೇಜ!

ಬೇಟೆ, ಕಾರು, ಕ್ರೀಡೆ, ಅರಮನೆ, ರಾಣಿವಾಸ—ಇವೆಲ್ಲಾ ಎಲ್ಲಾ ರಾಜರಿಗೂ ಸಂಬಂಧಪಟ್ಟ ಸಾಮಾನ್ಯ ವಿಷಯ. ಆದರೆ ಆಭರಣಗಳನ್ನು ಕಂಡರೆ ಕೆಲವರಿಗೆ ಅತಿ ಮೋಹ. ಬರೋಡ ಮಹಾರಾಜ ಚಿನ್ನ ಮತ್ತು ನವರತ್ನಗಳ ಆರಾಧಕ. ಅವನಲ್ಲಿ ವಿಶ್ವದಲ್ಲೇ ಗಾತ್ರದಲ್ಲಿ ಏಳನೆಯ ಸ್ಥಾನ ಪಡೆದಿದ್ದ 'ಸ್ಟಾರ್ ಆಫ್ ಸೌತ್' ವಜ್ರ ಹಾಗೂ ೩ನೆಯ ನೆಪೋಲಿಯನ್ ತನ್ನ ಪ್ರೇಯಸಿ ಯೂಜಿನ್‌ಗೆ ಕೊಟ್ಟ ವಜ್ರವಿತ್ತು. ಆತ ಆಸ್ಥಾನಕ್ಕೆ ಬರುವಾಗ ಹಾಕಿಕೊಳ್ಳುತ್ತಿದ್ದುದು ಜರಿ (ಚಿನ್ನದ ಎಳೆಗಳು) ತುಂಬಿದ ಬಟ್ಟೆಯಿಂದ ಮಾಡಿದ ಉಡುಗೆಗಳನ್ನು.

ಭರತಪುರದ ಮಹಾರಾಜನ ಬಳಿ ದಂತದಿಂದ ಮಾಡಿದ ಪೀಠೋಪಕರಣಗಳು, ವಿಗ್ರಹಗಳು, ಭರಣಿಗಳು ಹೇರಳವಾಗಿದ್ದವು. ಕೆಲಸಗಾರರು ವರ್ಷಗಟ್ಟಲೆ ದುಡಿದು ಮಾಡಿದ ಸಾಮಗ್ರಿಗಳು ಅವು.

ಕಪೂರ್‌ತಲ ಮಹಾರಾಜನ ಪೇಟದ ಮಧ್ಯದಲ್ಲಿ ಅಳವಡಿಸಿದ ಗೋಮೇಧಿಕ ಹರಳು ಮತ್ತು ಅದರ ಸುತ್ತಲೂ ಇದ್ದ ೩೦೦೦ ವಜ್ರ ಮತ್ತು ಮುತ್ತುಗಳು ಸೈಕ್ಲೊಪಸ್ ರಾಕ್ಷಸನ ಮೂರನೆಯ ಕಣ್ಣಿನಂತೆ ಕಾಣುತ್ತಿತ್ತು.

ಜಯಪುರದ ಮಹಾರಾಜನ ನಿಕ್ಷೇಪವೆಲ್ಲಾ ರಾಜಾಸ್ಥಾನದ ಒಂದು ಬೆಟ್ಟದ ಬಳಿ ಹೂಳಲ್ಪಟ್ಟಿತ್ತು. ಅದನ್ನು ಕಾಯಲು ರಜಪೂತ ಬುಡಕಟ್ಟಿನ ಜನರಿದ್ದರು. ಈ ಕಾಯುವ ಕೆಲಸ ವಂಶಪಾರಂಪರ್ಯವಾಗಿ ಬರುವಂತಹುದು. ರಾಜ ತನ್ನ ಆಳ್ವಿಕೆಯಲ್ಲಿ

ಒಂದೇ ಒಂದು ಬಾರಿ ಅಲ್ಲಿಗೆ ಹೋಗಿ, ತನ್ನ ಆಳ್ವಿಕೆಯನ್ನು ಹಸನುಗೊಳಿಸಬಹುದಾದ ಒಂದು ಒಡವೆಯನ್ನು ಆರಿಸಿ ತರಬಹುದಾಗಿತ್ತು. ಅಲ್ಲಿರುವ ಒಂದು ಕಂಠೀಹಾರದಲ್ಲಿ ಮೂರು ಸುತ್ತು ಕೆಂಪು. ಒಂದೊಂದು ಪಾರಿವಾಳದ ಮೊಟ್ಟೆ ಗಾತ್ರದ ಹರಳು. ಮೂರು ಗೋಮೇಧಿಕ. ಅದರಲ್ಲಿ ದೊಡ್ಡದು ೯೦ ಕ್ಯಾರೆಟ್ ತೂಗುತ್ತಿತ್ತು.

ಪಾಟಿಯಾಲ ಮಹಾರಾಜನ ಬಳಿ ಇದ್ದ ಒಂದು ಕಂಠೀಹಾರಕ್ಕೆ ಲಾಯಡ್ಸ್ ಕಂಪೆನಿಯಿಂದ ಒಂದು ದಶಲಕ್ಷ ಡಾಲರ್‌ಗೆ ಇನ್ಶ್ಯೂರೆನ್ಸ್ ಇತ್ತು. ಅವನಲ್ಲಿ ಕುತೂಹಲ ಕೆರಳಿಸುವ ಇನ್ನೊಂದು ಆಭರಣವೆಂದರೆ ವಜ್ರ ಖಚಿತವಾದ ಚಿನ್ನದ ಎದೆಪಟ್ಟಿ. ಅದರಲ್ಲಿ ೧೦೦೧ ಹೊಳೆಯುವ ನೀಲಿ–ಬಿಳಿ ವಜ್ರದ ಹರಳುಗಳಿದ್ದವು. ಕಳೆದ ಶತಮಾನದ ಕಡೆಯ ವರೆಗೂ ಮಹಾರಾಜ ವರ್ಷಕ್ಕೆ ಒಂದು ಬಾರಿ ಪೂರ್ಣ ನಗ್ನನಾಗಿ ಎದೆ ಪಟ್ಟೆ ಮಾತ್ರ ಹಾಕಿಕೊಂಡು, ಮೆರವಣಿಗೆ ಹೋಗುತ್ತಿದ್ದ. ಜನ ರಾಜನ ಉದ್ರೇಕಗೊಂಡ ಅಂಗ ನೋಡಿ ಚಪ್ಪಾಳೆ ತಟ್ಟುತ್ತ ಸಂತೋಷಪಡುತ್ತಿದ್ದರು. ಅದು 'ಶಿವಲಿಂಗದ' ಅಪರಾವತಾರ ಎಂದೂ ಅದರ ಯಾಂತ್ರಿಕಶಕ್ತಿ ದೇಶಕ್ಕೆ ಒದಗಬಹುದಾದ ಹಾನಿಯನ್ನು ನಾಶಮಾಡಬಲ್ಲದೆಂದೂ ನಂಬಿದ್ದರು,

ಮೈಸೂರು ಮಹಾರಾಜರಿಗೆ ಒಬ್ಬ ಚೀನಿ ಸಾಧು ಪುಡಿಮಾಡಿದ ವಜ್ರ ಕಾಮೋದ್ದೀಪಕ ಎಂದು ಹೇಳಿದನಂತೆ. ಸರಿ ಅರಮನೆಯಲ್ಲಿದ್ದ ವಜ್ರವೆಲ್ಲವೂ ನುಣ್ಣನೆ ಪುಡಿಯಾಯಿತು.

ಬರೋಡ ಮಹಾರಾಜನಿಗೆ ಪಟ್ಟದ ಆನೆಗೆ ನೂರುವರ್ಷ. ಅದರ ಮೇಲೆ ಹಾಕುವ ಹೌಡ ಚಿನ್ನದ್ದು. ಅದರ ಒಂದೊಂದು ಕಿವಿಗೂ ಹತ್ತು ಎಳೆಯ ಚಿನ್ನದ ಸರಪಳಿ. ಒಂದೊಂದು ಸರಪಳಿಯ ಬೆಲೆ ಇಪ್ಪತ್ತೈದು ಸಾವಿರ ಪೌಂಡುಗಳು.

ಒಬ್ಬ ರಾಜನ ಅಂತಸ್ತು ಅವನ ಬಳಿ ಎಷ್ಟು ಆನೆಗಳಿವೆ ಎಂಬುದರ ಮೇಲೆ ನಿಂತಿತ್ತು. ಹ್ಯಾನಿಬಾಲ್‌ನ ಆಕ್ರಮಣದ ಅನಂತರ ವಿಶ್ವ ಇಷ್ಟು ಅಗಾಧ ಸಂಖ್ಯೆಯಲ್ಲಿ ಆನೆಗಳ ಮೆರವಣಿಗೆ ನೋಡಿದ್ದು ಎಂದರೆ ಮೈಸೂರಿನ ದಸರಾ ಮೆರವಣಿಗೆಯಲ್ಲಿ, ನೂರಾರು ಸಿಂಗರಿಸಲ್ಪಟ್ಟ ಆನೆಗಳು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಿದ್ದವು. ಚಿನ್ನದ ಅಂಬಾರಿ ಹೊತ್ತ ಆನೆಯ ಮೇಲೆ ರಾಜ ಕುಳಿತು ಮೆರವಣಿಗೆಯಲ್ಲಿ ಹೋಗುತ್ತಿದ್ದ.

ಬರೋಡ ಮಹಾರಾಜನ ಖಯಾಲಿ ಗಜಗಳ ಕಾಳಗ. ಅದೊಂದು ಹೆದರಿಕೆ ಹುಟ್ಟಿಸುವ ದೃಶ್ಯ. ಎರಡು ಮದಗಜಗಳನ್ನು ಈಟಿಯಿಂದ ತಿವಿಯುತ್ತಾ ಅಖಾಡಕ್ಕೆ ಕಳುಹಿಸುತ್ತಿದ್ದರು. ಅವು ಘೀಳಿಡುತ್ತಾ ಹೋರಾಟಕ್ಕೆ ಇಳಿಯುತ್ತಿದ್ದವು. ಒಂದು ಆನೆ ಸಾಯುವವರೆಗೂ ಕಾಳಗ ಮುಂದುವರಿಯುತ್ತಿತ್ತು. ಧನ್‌ಕನಲ್ ಮಹಾರಾಜ ಪ್ರಜೆಗಳು ನೋಡಲೆಂದು ವರ್ಷಕ್ಕೆ ಒಂದು ಬಾರಿ ಆನೆಗಳ ರತಿಕ್ರೀಡೆ ಏರ್ಪಡಿಸುತ್ತಿದ್ದ.

ಗ್ವಾಲಿಯರ್ ಮಹಾರಾಜನಿಗೆ ತನ್ನ ಅರಮನೆಯಲ್ಲಿ ಬಕಿಂಗ್‌ಹ್ಯಾಂ ಅರಮನೆಯಲ್ಲಿರುವುದಕ್ಕೂ ದೊಡ್ಡದಾದ ಗಾಜಿನ ಹೂ ಗೊಂಚಲನ್ನು ಹಾಕಬೇಕೆನಿಸಿತು. ಅಂತಹ ಒಂದು ಷಾಂಡೆಲಿಯರ್‌ಅನ್ನು ವೆನೀಸ್‌ನಲ್ಲಿ ಮಾಡಿಸಿ ತರಿಸಿದ. ಆದರೆ ಅದು ವಿಪರೀತ ಭಾರ. ಅದನ್ನು ಮೇಲ್ಛಾವಣಿ

ತಡೆಯುಬಲ್ಲದೇ ಎಂಬ ಅನುಮಾನ. ರಾಜ ಕ್ರೇಸ್ ಮೂಲಕ ಒಂದು ದೊಡ್ಡ ಆನೆಯನ್ನು ಮೇಲ್ಛಾವಣಿಗೆ ಏರಿಸಿದ. ಚಾವಣಿ ಮುರಿದು ಬೀಳಲಿಲ್ಲ. ಷಾಂಡೆಲಿಯರ್ ತೂಕ ಚಾವಣಿ ತಡೆಯುಬಲ್ಲದು ಎಂದು ರಾಜ ಖಾತರಿ ಮಾಡಿಕೊಂಡ.

ಮೋಟಾರು ಕಾರುಗಳ ಆಗಮನದ ನಂತರ ಅರಮನೆಯಲ್ಲಿ ಆನೆಗಳ ಪಾತ್ರ ಕಡಿಮೆಯಾಯಿತು. ಪಾಟಿಯಾಲ ಮಹಾರಾಜ ೧೮೯೨ರಲ್ಲಿ ಫ್ರೆಂಚ್ ಕಾರು—ಡಿ ಡಿಯಾನ್ ಬೂಟನ್ ಅನ್ನು ತರಿಸಿಕೊಂಡ. ಹೈದರಾಬಾದ್ ನಿಜಾಮನ ಬಳಿ ಹೊಸ ಹೊಸ ಮಾದರಿಯ ನೂರಾರು ಕಾರುಗಳಿದ್ದವು. ಅವನು ರಸ್ತೆಯಲ್ಲಿ ಯಾವುದಾದರೂ ಆಕರ್ಷಕ ಕಾರು ಹೋಗುವುದು ಕಂಡರೆ ತಕ್ಷಣವೇ ಅದರ ಯಜಮಾನನಿಗೆ 'ನಿಜಾಮರು ನಿಮ್ಮ ಕಾರನ್ನು ಉಡುಗೊರೆಯಾಗಿ ಸ್ವೀಕರಿಸಲು ಸಂತೋಷಪಡುತ್ತಾರೆ' ಎಂದು ಹೇಳಿ ಕಳುಹಿಸುತ್ತಿದ್ದ. ಕಾರು ಅವನ ಗ್ಯಾರೇಜು ಸೇರುತ್ತಿತ್ತು.

ರೋಲ್ಸ್ ರಾಯ್ಸ್ ಎಲ್ಲಾ ಮಹಾರಾಜರ ಮೆಚ್ಚಿಗೆಯ ವಾಹನ. ಪಾಟಿಯಾಲ ಮಹಾರಾಜನ ಬಳಿ ೨೭ ರೋಲ್ಸ್-ರಾಯ್ಸ್ ಇತ್ತು. ಭರತಪುರದ ಮಹಾರಾಜ ತನ್ನ ರೋಲ್ಸ್‌ರಾಯ್ಸ್‌ನ ಒಳ ಮತ್ತು ಹೊರ ಮೈಗೆ ಬೆಳ್ಳಿಯ ತಗಡು ಹಾಕಿಸಿದ್ದ. ಬೆಳ್ಳಿಯ ತಗಡುಗಳಿಂದ ಅಚ್ಚರಿ ಎನಿಸುವ ಕಾಮೋದ್ದೀಪಕ ಅಲೆಗಳು ಬರುತ್ತಿದ್ದವಂತೆ. ರಾಜ ಅದನ್ನು ಹೊಸದಾಗಿ ಮದುವೆಯಾಗುವ ಮಿತ್ರ ರಾಜದಂಪತಿಗಳಿಗೆ ಎರವಲಾಗಿ ಕೊಡುತ್ತಿದ್ದ. ಆಳ್ವಾರ್ ಮಹಾರಾಜನ ಕಾರಿನ ಒಳ ಮತ್ತು ಹೊರ ಮೈಗೆ ಚಿನ್ನದ ತಗಡು ಆವರಿಸಿತ್ತು. ಕಾರಿನ ಆಕಾರವನ್ನು ಇಂಗ್ಲೆಂಡ್ ರಾಜನ ಕಾರೋನೇಷನ್ ಕೋಚಿನಂತೆ ಆತ ಮಾಡಿಸಿದ್ದ. ಭಾರವಾದ ಮೈ ಇದ್ದರೂ ಕಾರು ಗಂಟೆಗೆ ೭೦ ಮೈಲಿ ಹೋಗುತ್ತಿತ್ತು.

ರಾಜ್ಯದ ಕಂದಾಯ, ಸುಂಕ, ತೆರಿಗೆಗಳಿಂದ ರಾಜ್ಯದ ಖಜಾನೆಗೆ ಸೇರುತ್ತಿದ್ದ ಹಣವನ್ನು ರಾಜರು ತಮ್ಮ ವೈಭವ ಜೀವನಕ್ಕೆ ನೀರಿನಂತೆ ಖರ್ಚು ಮಾಡುತ್ತಿದ್ದರು.

ಗ್ವಾಲಿಯರ್ ಮಹಾರಾಜನ ಬಳಿ ಒಂದು ಸಣ್ಣ ವಿದ್ಯುತ್‌ಚಾಲಿತ ರೈಲು ಇತ್ತು. ಅರಮನೆಯ ವಿಶಾಲವಾದ ಭೋಜನ ಮಂದಿರದ ಮೇಜಿನಮೇಲೆ ರೈಲಿಗೆ ಬೇಕಾದ ಕಂಬಿ ಅಳವಡಿಸಿದ್ದರು. ೨೫೦ ಅಡಿ ಕಂಬಿ ಮತ್ತು ರೈಲು ಬೆಳ್ಳಿಯದು. ರೈಲು ಅಡುಗೆ ಮನೆಗೆ ಹೋಗಿ ತಿನಸುಗಳನ್ನು ತುಂಬಿಸಿಕೊಂಡು ಮೇಜಿನ ಸುತ್ತ ತಿರುಗುವ ಏರ್ಪಾಡು. ಅತಿಥಿಗಳು ಮತ್ತು ಮಹಾರಾಜ ಮೇಜಿನಸುತ್ತಲೂ ಆಸೀನರಾಗಿ ರೈಲಿನಲ್ಲಿ ಬಿಸಿ ಬಿಸಿಯಾಗಿ ಬರುವ ತಿನಸುಗಳನ್ನು ತೆಗೆದುಕೊಳ್ಳುತ್ತಿದ್ದರು. ರೈಲು ನಿಧಾನವಾಗಿ ಅಥವಾ ವೇಗವಾಗಿ ಚಲಿಸುವ ಏರ್ಪಾಡೂ ಇತ್ತು. ಇದೆಲ್ಲವನ್ನು ರಾಜ ಕುಳಿತ ಸ್ಥಳದಿಂದಲೇ ಗುಂಡಿ ಒತ್ತಿ ಮಾಡುತ್ತಿದ್ದ. ರಾಜ ಒಂದು ಸಂಜೆ ವೈಸ್‌ರಾಯ್ ದಂಪತಿಗಳಿಗೆ ಭೋಜನಕೂಟ ಏರ್ಪಡಿಸಿದ. ಔತಣಕ್ಕೆ ರಾಜ ಮಹಾರಾಜರುಗಳು ಬಂದಿದ್ದರು. ವೈಸ್‌ರಾಯ್ ರಾಜನ ವಿದ್ಯುತ್ ರೈಲು ವಿದ್ಯುತ್ ಪೇನಲ್‌ನಲ್ಲಿ ಷಾರ್ಟ ಸರ್‌ಕ್ಯೂಟ್ ಆಗಿ ರೈಲು ಹುಚ್ಚಾಪಟ್ಟೆ ತಿರುಗುತ್ತಾ, ಕಂಬಿಯಿಂದ ಬಿದ್ದು

ಹೋಯಿತು. ಅದರಲ್ಲಿದ್ದ ಹುರಿದಮಾಂಸ, ಕರಿದಪೂರಿ ಮತ್ತು ಇತರ ತಿನಸುಗಳು ಅತಿಥಿಯ ಬಟ್ಟೆಯ ಮೇಲೆ ಬಿದ್ದು ಕೊಳಕಾಯಿತು. ಇಂತಹ 'ರೈಲು ದುರಂತ' ಇನ್ನೆಲ್ಲೂ ಆಗಿರಲಾರದು!

ಜುನ್‌ಘಡ್ ನವಾಬ ಶ್ವಾನಪ್ರಿಯ. ಅವನಲ್ಲಿ ನೂರಾರು ನಾಯಿಗಳಿದ್ದವು. ಅವುಗಳಿಗೆ ಪ್ರತ್ಯೇಕ ಗೃಹಗಳು; ನೋಡಿಕೊಳ್ಳಲು ಸೇವಕರು. ರಾಜ ತನ್ನ ಮುದ್ದಿನ ನಾಯಿ 'ರೋಷನಾರ'ಗೆ ಮದುವೆ ಏರ್ಪಡಿಸಿದ. ಮದುವೆಗೆ ಪ್ರತಿಷ್ಠಿತರಿಗೆಲ್ಲಾ ಆಹ್ವಾನ ಹೋಗಿತ್ತು. ಗಂಡು ಒಂದು ಲೆಬ್ರೆಡಾರ್ ಜಾತಿ ನಾಯಿ—ಹೆಸರು 'ಬಾಬಿ'. ಅದು ಮಂಗ್ರೋಲ್ ನವಾಬನಿಗೆ ಸೇರಿತ್ತು. ಅದರ ಕತ್ತಿಗೆ ಚಿನ್ನದ ಕಾಲರ್. ಅದನ್ನು ರೈಲಿನಲ್ಲಿ ವಿಶೇಷ ಮರ್ಯಾದೆಯಿಂದ ತರಲಾಯಿತು. ಅದಕ್ಕೆ 'ರೆಡ್ ಕಾರ್ಪೆಟ್ ಸ್ವಾಗತ.' ನಾಯಿ ಮದುವೆಗೆಂದು ರಾಜ್ಯಕ್ಕೆ ಮೂರು ದಿನ ರಜ. ಸಮಾರಂಭಕ್ಕೆ ವಿಶೇಷ ಆಹ್ವಾನಿತರಾಗಿ ಬಂದಿದ್ದ ರಾಜ ಮಹಾರಾಜರುಗಳಿಗೆ ಅರಮನೆಯಲ್ಲಿ ಔತಣ. ವೈಸ್‌ರಾಯ್‌ಗೂ ಆಹ್ವಾನ ಹೋಗಿತ್ತು. ಆದರೆ ಆತ ಆಹ್ವಾನವನ್ನು ಸ್ವೀಕರಿಸಲಿಲ್ಲ; ಅದಕ್ಕೆ ನವಾಬನಿಗೆ ಕೋಪ. ಮದುವೆಗೆ ೬೦,೦೦೦ ಪೌಂಡು ಖರ್ಚಾಗಿತ್ತು. ರಾಜ್ಯದ ೬,೨೦,೦೦೦ ಜನರಲ್ಲಿ ೧೨,೦೦೦ ಜನರಿಗೆ ಮೂಲಭೂತ ಅಗತ್ಯಗಳನ್ನು ಆ ಹಣದಲ್ಲಿ ರಾಜ ಮಾಡಬಹುದಾಗಿತ್ತು!

ಕೆಲವು ಮಹಾರಾಜರ ಅರಮನೆಗಳು 'ತಾಜ್‌ಮಹಲ್'ಗೆ ಪ್ರತಿಸ್ಪರ್ಧಿ ಅನ್ನಿಸಿಕೊಳ್ಳುವಂತಹವು, ಮೈಸೂರು ಅರಮನೆಯಲ್ಲಿ ೬೦೦ ಕೊಠಡಿಗಳಿದ್ದು, ಅದು ವೈಸ್‌ರಾಯ್‌ನ ಅರಮನೆಗಿಂತಲೂ ದೊಡ್ಡದು. ಅರಮನೆಯ ಹೊರಕ್ಕೆ ಲಕ್ಷಾಂತರ ವಿದ್ಯುತ್ ದೀಪಗಳು ಅಳವಡಿಸಿದ್ದಾರೆ. ರಾತ್ರಿ ದೂರದಿಂದ ನೋಡಿದಾಗ ಸಮುದ್ರದಲ್ಲಿ ತೇಲುತ್ತಿರುವ ದೊಡ್ಡ ಹಡಗಿನಂತೆ ಅದು ಕಾಣಿಸುತ್ತದೆ.

ಜಯಪುರದ 'ಹವಾಮಹಲ್' ಅರಮನೆಗೆ ಕೈಯಲ್ಲಿ ಮಾಡಿದ ಅಮೃತ ಶಿಲೆಯ ಕಟ್ಟುಗಳಿರುವ ೯೫೦ ಕಿಟಕಿಗಳಿವೆ. ಉದಯಪುರದ ಅಮೃತ ಶಿಲೆಯ ಅರಮನೆ ಸರೋವರದ ಮಧ್ಯದಿಂದ ಎದ್ದಿದೆ. ಕಪೂರ್‌ತಲದ ಮಹಾರಾಜ ತನ್ನ ಅರಮನೆಯನ್ನು ಪ್ಯಾರಿಸ್‌ನಲ್ಲಿರುವ ವರ್ಸೆಲ್ ಅರಮನೆಯಂತೆ ಕಟ್ಟಿಸಿದ್ದಾನೆ. ಆತ ಫ್ರೆಂಚ್ ಅಭಿಮಾನಿಯಾಗಿದ್ದ. ಫ್ರೆಂಚ್ ಆಸ್ಥಾನದ ಭಾಷೆಯಾಗಿತ್ತು. ಅರಮನೆಯ ತುಂಬ ಫ್ರಾನ್ಸ್‌ನಿಂದ ತಂದ ಸಾಮಗ್ರಿಗಳಿದ್ದವು.

ರಾಜರ ಸಿಂಹಾಸನಗಳು ಶ್ರೀಮಂತಿಕೆಯನ್ನು ತೋರುವ ಪೀಠಗಳು. ಮೈಸೂರಿನ ಸಿಂಹಾಸನ ಒಂದು ಟನ್ ಚಿನ್ನದಿಂದ ಮಾಡಿದೆ. ಒರಿಸ್ಸಾ ಸಿಂಹಾಸನ ಒಂದು ದೊಡ್ಡ ಪಲ್ಲಂಗ. ವಿಕ್ಟೋರಿಯಾಳ ಮದುವೆಯ ಮಂಚದಂತೆ ಅದು ಇದೆ ಅನ್ನುತ್ತಾರೆ. ರಾಜ ಅದನ್ನು ಲಂಡನ್ನಿನಲ್ಲಿ ಕೊಂಡ.

ರಾಜರಿಗೆ ಕಾಲಕಳೆಯುವುದು ಕಷ್ಟ ಅನ್ನಿಸುತ್ತಿತ್ತು. ಕಾಲ ಹರಣಕ್ಕೆ ಅವರು ತೊಡಗಿಸಿಕೊಳ್ಳುತ್ತಿದ್ದುದು ಎರಡು ವಿಷಯಗಳಲ್ಲಿ—ಕ್ರೀಡೆ, ರತಿಕ್ರೀಡೆ.

(ಮುಂದುವರಿಯುವುದು)

ಪುಸ್ತಕ ಪರಿಚಯ

‘ಡೆನ್ಮಾರ್ಕ್: ಹಾಲು ಜೇನಿನ ನಾಡು’—(ಪ್ರವಾಸ ಕಥನ); ಲೇಖಕರು: ಎಸ್. ರಜತಾದ್ರಿ; ಡೆಮಿ ೧/೮; ಪುಟಗಳು: ೧೦೬; ಬೆಲೆ: ೨೫ ರೂ. ಅದ್ರಿ ಪ್ರಕಾಶನ, ೭೬/೩, ೫ನೆಯ ಅಡ್ಡ ರಸ್ತೆ, ಉದಯಗಿರಿ, ಮೈಸೂರು-೫೭೦ ೦೧೯.

೧೯೯೧ರ ಆಗಸ್ಟ್‌ನಲ್ಲಿ ಡೆನ್ಮಾರ್ಕ್‌ನಲ್ಲಿ ಏರ್ಪಡಿಸಿದ್ದ ಡೇನಿಷ್ ಫೋಕ್ ಹೈಸ್ಕೂಲ್‌ಗಳ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಲೇಖಕರು ಆಹ್ವಾನಿತರಾಗಿ, ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಂದ ತಮ್ಮ ಪ್ರವಾಸದ ಅನುಭವವನ್ನು ‘ಡೆನ್ಮಾರ್ಕ್ ಹಾಲು ಜೇನಿನ ನಾಡು’ ಕೃತಿಯಲ್ಲಿ ನಿರೂಪಿಸಿದ್ದಾರೆ—ಲೇಖಕರಾದ ಎಸ್. ರಜತಾದ್ರಿ ಅವರು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಮೂರು ದಶಕಗಳಿಗೂ ಮಿಗಿಲಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರೂ ವಯಸ್ಕರ ಶಿಕ್ಷಣದಲ್ಲಿ ಕೊನೆಯ ತನಕ ಪ್ರವೃತ್ತರಾಗಿದ್ದು, ತಮ್ಮ ೭೭ನೆಯ ವಯಸ್ಸಿನಲ್ಲಿ ಇತ್ತೀಚೆಗೆ ನಿಧನರಾದರು. ವಯಸ್ಕರ ಶಿಕ್ಷಣ ತಜ್ಞರಾಗಿದ್ದ ಶ್ರೀಯುತರು ಉತ್ತಮ ಬರಹಗಾರರಾಗಿದ್ದು, ಹಲವು ಕೃತಿಗಳ ಕರ್ತೃಗಳಾಗಿದ್ದಾರೆ. ಕೃತಿಯ ಪ್ರಾರಂಭದಲ್ಲಿಯೇ ಲೇಖಕರು ಹೀಗೆ ಹೇಳಿದ್ದಾರೆ: “ನನ್ನ ಮನಸ್ಸಿಗೆ ಹರ್ಷ ಮತ್ತು ಕಾತರ. ಏಕೆಂದರೆ ಡೆನ್ಮಾರ್ಕ್‌ನಂಥ ಸುಂದರ ನಾಡನ್ನು ಮತ್ತೆ ನೋಡುವ ಅವಕಾಶ ಸಿಕ್ಕಿತಲ್ಲಾ ಎಂದು. ಹಿಂದೆ ಎಂದರೆ ಮೂರು ದಶಕಗಳ ಹಿಂದೆ ಆ ದೇಶಕ್ಕೆ ಹೋಗಿ ದೇಶವನ್ನೆಲ್ಲಾ ಸುತ್ತಾಡಿ ಹೆಸರಾಂತ ವಿದ್ಯಾಸಂಸ್ಥೆಗಳಾದ ಫೋಕ್ ಹೈಸ್ಕೂಲುಗಳನ್ನೂ ಯುವ ಜನ ಸಂಘಗಳನ್ನೂ....ನೋಡಿ ಹಿಂದಿರುಗಿದೆ. ನನ್ನ ನಾಲ್ಕು ತಿಂಗಳ ಪ್ರವಾಸದ ವಿಶಿಷ್ಟ ಅನುಭವವನ್ನು ‘ಪಶ್ಚಿಮದ ಹೊಂಬೆಳಕು’ ಎಂಬ ಪುಸ್ತಕದಲ್ಲಿ ವಿವರಿಸಿದ್ದೇನೆ.

....ಇತ್ತೀಚೆಗೆ ಡೆನ್ಮಾರ್ಕ್ ಅಗಾಧ ಪ್ರಗತಿಯನ್ನು ಸಾಧಿಸಿದೆ ಎಂಬ ವಿಷಯ ನನ್ನಲ್ಲಿ ಕುತೂಹಲವನ್ನು ಕೆರಳಿಸಿತ್ತು. ಅದನ್ನು ಕಣ್ಣಾರೆ ಕಾಣುವ ಅವಕಾಶ ಅನಿರೀಕ್ಷಿತವಾಗಿಯೇ ಬಂದಿತು.” ಈ ಅಂಶ ಗಮನಿಸಿದಾಗ ಲೇಖಕರಿಗೆ ಡೆನ್ಮಾರ್ಕ್ ಪ್ರವಾಸವಾಗಲೀ ಕೃತಿ ರಚನೆಯಾಗಲಿ ಹೊಸತಲ್ಲ ಎಂಬುದು ಮನದಟ್ಟಾಗುತ್ತದೆ.

—ಈ ಕೃತಿಯಲ್ಲಿ ಅಲ್ಲಿನ ಪ್ರಕೃತಿ ಸೌಂದರ್ಯ, ದಣಿವರಿಯದೆ ದುಡಿದರೂ ಸದಾ ಉತ್ಸಾಹದಿಂದ ಪುಟಿಯುವ ಡೇನರ ಲವಲವಿಕೆ. ಅವರ ಪರಿಸರ ಪ್ರಜ್ಞೆ. ಸ್ವಚ್ಛತೆ, ಕರ್ತವ್ಯದ ಕಾಳಜಿ. ಮೊದಲಾದ

ಹಲವು ಹತ್ತು ಅಂಶಗಳನ್ನು ಭಾರತದೊಂದಿಗೆ ತೂಗಿ ನೋಡಿ, ನಾವೇಕೆ ಹೀಗೆ ಎಂದು ನಿರಂತರವಾಗಿ ಪ್ರಶ್ನಿಸಿಕೊಳ್ಳುತ್ತಾ ಅಲ್ಲಲ್ಲಿ ಸೂಚ್ಯವಾಗಿ ಕಾರಣಗಳನ್ನು ಗುರುತಿಸುತ್ತಲೂ ಹೋಗುತ್ತಾರೆ. ಒಮ್ಮೆ ಲೇಖಕರಿಗೆ ವೈದ್ಯಕೀಯ ತಪಾಸಣೆ ಅನಿವಾರ್ಯವಾಗಿ ವೈದ್ಯರಲ್ಲಿಗೆ ಹೋಗಿ ಸ್ವಲ್ಪ ದುಬಾರಿಯೇ ಎನ್ನುವಷ್ಟು ಶುಲ್ಕ ಕೊಟ್ಟು ಡ್ರಗ್ ಹೌಸ್‌ನಲ್ಲಿ ಆ ವೈದ್ಯರ ಸಲಹೆಯಂತೆ ಔಷಧಿ ಕೊಂಡದ್ದನ್ನು ಹೀಗೆ ಹೇಳುತ್ತಾರೆ. "ನಾನು ಕೊಂಡದ್ದು ೧೨ ಮಾತ್ರೆಗಳು ಕೊಟ್ಟ ಬೆಲೆ ಗಾಬರಿ ಹಿಡಿಸುವಂತಿತ್ತು. ೩೫೦ ರೂ.ಗಳು! ಮುಂದುವರಿದು ಹೀಗೆನ್ನುತ್ತಾರೆ: ಔಷಧಿ ಇಂದ್ರಜಾಲದಂತೆ ಕೆಲಸ ಮಾಡಿತು. ರಾತ್ರಿ ಸುಖವಾಗಿ ನಿದ್ರೆ ಮಾಡಿದೆ. ಅಲರ್ಜಿಯಿಂದ ಚೇತರಿಸಿಕೊಂಡು ಸಮ್ಮೇಳನದಲ್ಲಿ ಭಾಗವಹಿಸಿದೆ. ಚಿಕಿತ್ಸೆಗಾಗಿ ಕೊಟ್ಟ ಹಣ ಸಾರ್ಥಕವೆನಿಸಿತು."

ಈ ದೇಶದ ವ್ಯವಸ್ಥೆಯೊಂದಿಗೆ ಭಾರತ ಹೋಲಿಸಿ ಮರಗುತ್ತಾರೆ.

—ಅಲ್ಲಲ್ಲಿ ಲೇಖಕರು ತಮ್ಮನ್ನೇ ಲೇವಡಿ ಮಾಡಿಕೊಳ್ಳುವ ಸಂದರ್ಭಗಳೂ ಉಂಟು! ಸಾಂಸ್ಕೃತಿಕ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಿದ ಸಂದರ್ಭ ಹೀಗೆ ನಿರೂಪಿಸುತ್ತಾರೆ:

"ಅಂದು ನಾನೂ ಒಂದು ಕನ್ನಡ ಗೀತೆ ಹಾಡಿದೆ....ನನ್ನ ಕನ್ನಡ ಗೀತೆ ಕುವೆಂಪು ಅವರ 'ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ" ಆಗಿತ್ತು. ಹಾಡುವುದಕ್ಕೆ ಮೊದಲು ಕಾವ್ಯದಲ್ಲಿರುವ ಪ್ರಕೃತಿಯ ವರ್ಣನೆಯನ್ನೂ ಅಂತರ್ಗತವಾಗಿರುವ ಆಧ್ಯಾತ್ಮಿಕ ಭಾವನೆಯನ್ನೂ ಇಂಗ್ಲಿಷ್‌ನಲ್ಲಿ ವಿವರಣೆ ಕೊಟ್ಟೆ. ಕನ್ನಡ ಮಧುರವಾದ ಭಾಷೆ ಕೇಳಲು ಇಂಪು. ಕಿವಿಗೆ ಹೇಗೆ ಸೊಗಸುತ್ತದೆ ಎಂಬುದನ್ನು ತಿಳಿಸಿ ಎಂದು ಮನವಿ ಮಾಡಿಕೊಂಡೆ. ನಿಶ್ಶಬ್ದವಾಗಿ ಕುಳಿತು ಕೇಳಿದರು. ಚಪ್ಪಾಳೆ ಹೊಡೆದರು ....ಕೆಲವರು ಹಾಡಿದ ಗೀತೆಗಳಲ್ಲಿ ಧ್ವನಿ ಮಾಧುರ್ಯವಾಗಲಿ ತಾಳ ಲಯಬದ್ಧತೆಯಾಗಲಿ ಇರದಿದ್ದರೂ ನಾನು ಸಹಿಸಿಕೊಂಡಂತೆ ಅವರೂ ನನ್ನ ಹಾಡನ್ನು ಸಹಾನುಭೂತಿಯಿಂದ ಆಲಿಸಿರಬೇಕು."

—ಒಂದು ಜನಾಂಗದ ಒಂದು ದೇಶದ ಮೂರು ದಶಕಗಳ ಅವಧಿಯ ಬೆಳವಣಿಗೆಯು ಸಾಧಾರಣವಾದುದಲ್ಲ ಅದರಲ್ಲಿಯೂ ಡೆನ್ಮಾರ್ಕ್‌ನಂಥ ದೇಶದ ಪ್ರಗತಿಯು ಗಮನಾರ್ಹ ಅಂಶ. ಈ ಬೆಳವಣಿಗೆಯನ್ನು ದಾಖಲಿಸುವುದು ಲೇಖಕರ ಆಶಯ ಎಂಬ ಹೊಳಹು ಪ್ರಾರಂಭದಲ್ಲಿಯೇ ದೊರೆಯುತ್ತದೆ. ಆದರೆ ಕೃತಿಯಲ್ಲಿ ಈ ಕುತೂಹಲಕ್ಕೆ ಪರಿಹಾರ ದೊರೆಯದಿರುವುದು ಕೊರತೆಯಾಗಿ ಉಳಿದುಕೊಂಡಿದೆ.

ಹಿನ್ನುಡಿ ಮುನ್ನುಡಿಗಳ ಯಾವ ಭಾರವನ್ನೂ ಹೊರದ ಕೃತಿಯು ಈ ಹಿಂದೆ ಮೈಸೂರಿನ 'ಮಹಾ ನಂದಿ' ದೈನಿಕದ ಸಾಪ್ತಾಹಿಕದಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಓದುಗರ ಮೆಚ್ಚುಗೆಯನ್ನು ಪಡೆದಿದೆ. "ಡೆನ್ಮಾರ್ಕ್ ಹಾಲು ಜೇನಿನ ನಾಡು" ಕೃತಿಯು ಉತ್ತಮ ಲೇಖಕರೊಬ್ಬರ ಪ್ರವಾಸ ಕಥನ ಹೇಗಿರಬೇಕೋ ಹಾಗಿದೆ.

'ಶಿಲ್ಪಿ ಸಂಕುಲ'—ಲೇಖಕರು: ಟಿ.ಆರ್. ತಿಪ್ಪೇಸ್ವಾಮಿ; ಡೆಮ್ಮಿ ೧/೮ ಪುಟಗಳು: ೧೫೨+xii; ಪ್ರಕಾಶಕರು: ಕರ್ನಾಟಕ ಶಿಲ್ಪಕಲಾ ಅಕಾಡೆಮಿ ೭೧–೭೨ ಮೊದಲನೆಯ ಮಹಡಿ, ಬಿ.ಡಿ.ಎ. ಸಂಕೀರ್ಣ, ಇಂದಿರಾನಗರ, ಬೆಂಗಳೂರು–೫೬೦ ೦೩೮.

'ಶಿಲ್ಪಿ ಸಂಕುಲ'ವು ನಾಡಿನ ಪ್ರಸಿದ್ಧರಾದ ೩೮ ಜನ ಶಿಲ್ಪಿಗಳನ್ನು ಕುರಿತ ಪರಿಚಯಾತ್ಮಕ ಗ್ರಂಥವಾಗಿದೆ. ಈ ಶಿಲ್ಪಿಗಳೆಂದರೆ: ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು, ಕೆ. ವೆಂಕಟಪ್ಪ, ಸ್ವರ್ಣಕಲಾ ನಿಪುಣ ಸಿಂಗಣ್ಣಾಚಾರ್ಯ, ಆರ್. ಎಸ್. ನಾಯ್ಡು, ಪ್ರಬುದ್ಧ ಶಿಲ್ಪಿ ಎಸ್. ನಾಗೇಂದ್ರಸ್ಥಪತಿ, ಶಿಲ್ಪಿ ಸಿದ್ಧಾಂತಿ ಮಹಾದೇವಸ್ವಾಮಿಗಳು, ರಜತ ಕಲಾ ಪ್ರವೀಣ ಅಂಕಪ್ಪಾಚಾರ್ಯ, ಲೋಹ ಶಿಲ್ಪಿ ಎಸ್. ವಿ. ಚಿನ್ನಾಚಾರ್ಯ, ಬೆಳ್ಳಿ ರಥದ ಶಿಲ್ಪಿ ಡಿ. ವಿ. ಸುಬ್ಬಣ್ಣಾಚಾರ್ಯ, ಕಾಷ್ಠಶಿಲ್ಪಿ ಎಸ್. ನರಸಿಂಹಾಚಾರ್ಯ, ಮಾನಶಿಲ್ಪಿರತ್ನ ಎನ್.ಎಂ.ಕೆ. ಆಚಾರ್ಯ, ಲಿಂಗಾಚಾರ್ಯ, ಬಿ. ಎನ್. ರಾಮಚಂದ್ರಪ್ಪ, ಶಿಲ್ಪಾಚಾರ್ಯ ಬಿ. ಬಸವಣ್ಣ, ದಂತಶಿಲ್ಪಿ ಎಚ್. ವೆಂಕಪ್ಪ, ಸಿ. ಸಿದ್ಧಲಿಂಗಯ್ಯ, ಮೀರ್‌ಶೌಕತ್ತಾಲಿ, ಎಂ. ಶ್ರೀನಿವಾಸಾಚಾರ್ಯ, ದೇವಲಕುಂದ ವಾದಿರಾಜ್, ಸಿ. ಪರಮೇಶ್ವರಾಚಾರ್ಯ, ರಥಶಿಲ್ಪಿ ಪರಮೇಶ್ವರಾಚಾರ್ಯ, ಕೆ. ಶ್ಯಾಮರಾಯಾಚಾರ್ಯ, ರೂಪಶಿಲ್ಪಿ ಧನಂಜಯಶಿಲ್ಪಿ, ರಂಜಾಳಗೋಪಾಲ ಶೆಣೈ ರೂಪಶಿಲ್ಪಿ ಬಿ. ಬಸವಯ್ಯ ದೇವನಹಳ್ಳಿ ಎ. ಸಿ. ಎಚ್. ಆಚಾರ್ಯ, ಎಸ್. ಜಿ. ನೀಲಕಂಠಾಚಾರ್, ಶಿಲ್ಪಿ ನಾಗಲಿಂಗಾಚಾರ್ಯ

ಈ ೩೮ ಶಿಲ್ಪಿಗಳಲ್ಲಿ ಧಾರವಾಡ, ಗುಲ್ಬರ್ಗಾ ಮತ್ತು ಉತ್ತರ ಕರ್ನಾಟಕದ ಒಬ್ಬೊಬ್ಬರು. ನಾಲ್ಕು ಜನ ಕರಾವಳಿ ಪ್ರದೇಶದವರು. ಉಳಿದ ೩೧ ಜನರು ಹಳೆಯ ಮೈಸೂರು ಪ್ರಾಂತ್ಯಕ್ಕೆ ಸೇರಿದವರಾಗಿದ್ದಾರೆ.

ಶಿಲೆ, ಲೋಹ, ಮರ, ದಂತ, ಪ್ಲಾಸ್ಟರ್, ಪೇಪರ್‌ಪಲ್ಪ್ ಮುಂತಾದ ಮಾಧ್ಯಮಗಳಲ್ಲಿನ ಶಿಲ್ಪಿಗಳಿದ್ದಾರೆ. ಕೆಲವರು ಚಿತ್ರ ಮತ್ತು ಶಿಲ್ಪ ಎರಡರಲ್ಲೂ ಪರಿಣತಿಯನ್ನು ಪಡೆದವರಾಗಿದ್ದಾರೆ. ಕೆಲವರು ಮೂರ್ತಿ ಶಿಲ್ಪ, ರಥಶಿಲ್ಪ ಹಾಗೂ ರೂಪಶಿಲ್ಪದ ರಚನೆಯಲ್ಲಿ ಸಿದ್ಧಹಸ್ತರಾದವರು.

"ಈ ಲೇಖನಗಳು ಕೇವಲ ಪರಿಚಯಾತ್ಮಕ ಲೇಖನಗಳೇ ಹೊರತು, ಶಿಲ್ಪಿಗಳು ರಚಿಸಿದ ಕೃತಿಗಳ ವಿಮರ್ಶೆಗಾಗಲಿ, ಸಶಾಸ್ತ್ರೀಸೂಕ್ತ ವಿವರಣೆಗಾಗಲಿ ಇಲ್ಲಿ ಅವಕಾಶವಿಲ್ಲ. ತನ್ನದೇ ಆದ ಕೆಲವೊಂದು ಸೀಮಿತ ಉದ್ದೇಶ ಈ ಲೇಖನಗಳಿಗುಂಟು ಎನ್ನುವುದನ್ನು ಈ ಲೇಖನಗಳ ಸ್ವರೂಪವನ್ನು ಗಮನಿಸಿದ ಸಹೃದಯರಿಗೆ ಅರ್ಥವಾಗುತ್ತದೆ. ಶಿಲ್ಪಕಲೆಯಲ್ಲಿ ಆಸಕ್ತರಾದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಲ್ಲಿ ಆಸಕ್ತಿಯನ್ನು ಕೆರಳಿಸಿ ಈ ದಿಕ್ಕಿನಲ್ಲಿ ಹೆಚ್ಚಿನ ಕೆಲಸಕ್ಕೆ ಅವರನ್ನು ಪ್ರೇರೇಪಿಸುವುದು ನನ್ನ ಉದ್ದೇಶ, ಈ ಉದ್ದೇಶ ಸ್ವಲ್ಪಮಟ್ಟಿಗಾದರೂ ಈಡೇರಿದರೆ ನನ್ನ ಬಹುದಿನಗಳ ಶ್ರಮ ಸಾರ್ಥಕವೆಂದು

ಭಾವಿಸುತ್ತೇನೆ." ಎಂದು ಲೇಖಕರು ಮುನ್ನುಡಿಯಲ್ಲಿ ಕೃತಿ ರಚನೆಯ ಆಶಯ ವ್ಯಕ್ತಪಡಿಸಿದ್ದಾರೆ.

ಪ್ರತಿ ಶಿಲ್ಪಿಗಳಿಗೆ ಗೊತ್ತುಪಡಿಸಿಕೊಂಡಿರುವ ನಾಲ್ಕೈದು ಪುಟಗಳ ಮಿತಿಯಲ್ಲಿಯೇ ಅವರ ಪರಿಚಯ, ಸಾಧನೆ ಸಿದ್ಧಿಯನ್ನು ಲೇಖಕರು ತಮ್ಮ ದಟ್ಟ ಅನುಭವದ ಸತ್ವಯುತ ಬರವಣಿಗೆಯಲ್ಲಿ ಕಡೆದು ನಿಲ್ಲಿಸಿದ್ದು, ತಮ್ಮ ಆಶಯ ಈಡೇರಿಸಿಕೊಂಡಿದ್ದಾರೆ.

'ಶಿಲ್ಪಿ ಸಂಕುಲ'ದಲ್ಲಿ ಸೇರ್ಪಡೆಯಾಗಿರುವ ಕೆಲವರು ವನಸುಮಗಳಂತಿದ್ದರೂ ಸಾಹಿತಿ, ಕಲಾವಿದ, ಜಾನಪದ ತಜ್ಞ ಹಲವು ಹನ್ನೊಂದು ಹವ್ಯಾಸಗಳ ನಿತ್ಯ ಸಂಚಾರಿ ಪಿ. ಆರ್. ತಿಪ್ಪೇಸ್ವಾಮಿ ಅವರ ಕಣ್ಣಿಂದ ಯಾರೂ ಸುಲಭವಾಗಿ ತಪ್ಪಿಸಿಕೊಳ್ಳಲು ಸಾಧ್ಯ ಇಲ್ಲ.

ಖ್ಯಾತ ಶಿಲ್ಪಿ ಎಸ್. ನರಸಿಂಹಾಚಾರ್ಯ ಅವರ, ಆಕರ್ಷಕ ಶಿಲ್ಪಕೃತಿಯ ಮುಖಪುಟ, ಆರ್ಟ್ ಕಾಗದದಲ್ಲಿ ಮುದ್ರಣವಾಗಿರುವ ಶಿಲ್ಪ ಕಲಾಕೃತಿಗಳ ಚಿತ್ರಗಳು ಕೃತಿಗೆ ಮೆರಗು ನೀಡಿದ್ದು, 'ಶಿಲ್ಪಿ ಸಂಕುಲ'ವು ಸುಂದರವಾಗಿ ಮುದ್ರಣವಾಗಿದ್ದು, ಸಂಗ್ರಹಯೋಗ್ಯ ಕೃತಿಯಾಗಿದೆ.

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್
೩ನೆಯ ಹಂತ, ಕುವೆಂಪುನಗರ
ಮೈಸೂರು-೫೭೦೦೨೩

* * * * *

ಕೈತೋಟ ಮಂದಾರ—ಲೇಖಕ: ಹುಣಸೇಘಟ್ಟ ಸೋಮಶೇಖರ; ಪ್ರಕಾಶನ: ಇಂಚರ ಪ್ರಕಾಸನ, ನಂ. ೧೬೭, ೧೦ ನೇ ಮುಖ್ಯರಸ್ತೆ, ೩ನೇ ಘಟ್ಟ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-೫೬೦ ೦೫೮, ವಿತರಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್; ಎರಡನೇ ಮುದ್ರಣ ೧೯೯೭, ಪುಟಗಳು: ೪೮, ಬೆಲೆ: ೧೨ ರೂ.

ಪ್ರಾಥಮಿಕ, ಪ್ರೌಢಶಾಲೆ, ಟಿ.ಸಿ.ಎಚ್ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ರಚಿಸಿದ ಪುಸ್ತಕ. ಇದರಲ್ಲಿ ಪ್ರಮುಖ ಅಂಶವೇ ತಪ್ಪು ಮಾಹಿತಿಯಿಂದ ಕೂಡಿದೆ. ಈಗ (ಕೃಷಿಕ) ಜನರೆಲ್ಲ ಸ್ವಲ್ಪ ಸ್ವಲ್ಪವೇ ಸಾವಯುವ ಗೊಬ್ಬರ ಬಳಸಲು, ಎಚ್ಚೆತ್ತುಕೊಳ್ಳುತ್ತಿರುವಾಗ ಪ್ರಸಕ್ತ ಪುಸ್ತಕದಲ್ಲಿ ಲೇಖಕರು ಸಾವಯುವ ಗೊಬ್ಬರದೊಂದಿಗೆ ಯೂರಿಯಾ, ರಂಜಕ, ಪೊಟಾಷ್ ಮುಂತಾದ ರಾಸಾಯನಿಕ ಗೊಬ್ಬರವನ್ನೂ ಬಳಸಬೇಕೆಂದು ಧಾರಾಳವಾಗಿ ಸಲಹೆ ಮಾಡಿದ್ದಾರೆ ಮತ್ತು ಕ್ರಿಮಿ ಕೀಟಗಳ ನಿವಾರಣೆಗೆ ನುವಕ್ರಾನ್, ಕಾರ್ಬರಿಲ್, ಡೈಮಿಥಿಯಾನ್, ಆಕ್ಸಿಡೆಮಟಾನ್ ಇತ್ಯಾದಿ

ವಿಷಯುಕ್ತ ಔಷಧಿಗಳನ್ನು ಉಪಯೋಗಿಸ ಬೇಕೆಂದು ಸೂಚಿಸಿದ್ದಾರೆ. ಇಷ್ಟು ದಿನ ಭೂಮಿತಾಯಿಗೆ ವಿಷವುಣಿಸಿ ಒಂದಿಗೇ ನಾವು ತಿಂದದ್ದಾಯಿತು. ಈಗ ಪ್ರಕೃತಿ ಮಾತೆಗೆ ಸಾವಯುವ ಗೊಬ್ಬರಕೊಟ್ಟು ನಾವು ವಿಷವರ್ತುಲದಿಂದ ಸ್ವಲ್ಪ ಸ್ವಲ್ಪವೇ ಹೊರಬರಲು ಪ್ರಯತ್ನಿಸುತ್ತಿರುವಾಗ ಪುನಃ ವಿಷದ ಗೂಡಿಗೇ ನೂಕಿದಂತಾಗುತ್ತದೆ—ಈ ಪುಸ್ತಕವನ್ನೋದಿದರೆ.

ಇಡೀ ಹೊತ್ತಗೆಯಲ್ಲಿ ಪುಟ ೧೯ರಲ್ಲಿ, ಬೂದುಗುಂಬಳ, ಪುಟ ೨೯ರಲ್ಲಿ ದಾಳಿಂಬೆ ಮತ್ತು ಸಪೋಟ ಹಾಗೂ ಪುಟ ಸಂಖ್ಯೆ ೩೩ರಲ್ಲಿ ಸೀಬೆ. ಇವಕ್ಕೆ ಮಾತ್ರ ರಾಸಾಯನಿಕ ಗೊಬ್ಬರ ಬಳಸಲು ಸೂಚಿಸಿಲ್ಲ. ಕೈತೋಟದಲ್ಲಿ ಬೆಳೆಸುವ ಹುಲ್ಲಿ (ಲಾನ್)ಗೂ ರಾಸಾಯನಿಕ ಗೊಬ್ಬರದಿಂದ ವಿನಾಯ್ತಿ ನೀಡಿಲ್ಲ!

ಈ ಪುಸ್ತಕ ಓದಿದ ಟಿ.ಸಿ.ಎಚ್. ವಿದ್ಯಾರ್ಥಿಗಳು, ಜನಸಾಮಾನ್ಯರು ಕೃಷಿ ಕಲಿಯುವುದರೊಂದಿಗೇ ವಿಷವನ್ನೂ ಭೂಮಿಗೆ ಉಣಿಸಿ ತಾವೂ ತಿನ್ನುವುದಲ್ಲದೆ ಇತರರಿಗೂ (ಪಾಠ ಹೇಳಿ) ಉಣ್ಣಿಸಿ ಈ ಮಾದರಿಯನ್ನೇ ಅನುಸರಿಸಲು ಸಲಹೆ ಮಾಡಿದಂತಾಗುತ್ತದೆ.

ಪ್ರಾಥಮಿಕ, ಪ್ರೌಢಶಾಲೆ, ಟಿ.ಸಿ.ಎಚ್ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಬರೆದ ಈ ಪುಸ್ತಕದಿಂದ ಅವರು ಕಲಿಯಬೇಕಾದದ್ದು, ಕಲಿಸಬೇಕಾದದ್ದು ಪುಟ ಸಂಖ್ಯೆ ೪೫ರಲ್ಲಿ ಕೊಟ್ಟ ನಮ್ಮ ದೇಹಕ್ಕೆ ಸೊಪ್ಪು–ತರಕಾರಿ–ಹಣ್ಣುಗಳು ಆವಶ್ಯಕವೇ? ಏಕೆ? ಎಂಬ ವಿಷಯವನ್ನು ಮಾತ್ರ ಎಂದು ಹೇಳಬಹುದು.

ರುಕ್ಮಿಣಿಮಾಲಾ
ಮನೆ ಸಂಖ್ಯೆ ೮, 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ, ಮೈಸೂರು–೫೭೦೦೯

ದೇವರ ಪ್ರಪಂಚದಲ್ಲಿ ನಿಷ್ಪ್ರಯೋಜಕವಾದುದು ಯಾವುದೂ ಇಲ್ಲ. ತೃಣವಾದ ಹುಲ್ಲು ಕೂಡ ಒಂದಕ್ಕೊಂದು ಎಣೆದುಕೊಂಡು ಹಗ್ಗವಾಗಿ ಗಜವನ್ನು ಕೂಡಾ ಬಂಧಿಸಬಲ್ಲ ಶಕ್ತಿಯನ್ನು ಹೊಂದಿರುವುದು.

—ಸುಭಾಷಿತ

ಓದುಗರ ಅನಿಸಿಕೆ

ಮಾನ್ಯರೇ,

ನೀವು ವಿಶ್ವಾಸವಿಟ್ಟು ಕಳುಹಿಸಿದ ಪುಸ್ತಕ ಪ್ರಪಂಚದ ನವೆಂಬರ್-ಡಿಸೆಂಬರ್-೧೯೯೭ರ ಸಂಚಿಕೆ ಕೈಸೇರಿತು. ಕೃತಜ್ಞನು. ಸಂಚಿಕೆಯ ಮುಖ ಪುಟದಲ್ಲಿಯೇ ನನ್ನ ಭಾವ ಚಿತ್ರ ಹಾಗೂ ಮೊದಲನೆಯ ಲೇಖನ ಆಗಿ ನನ್ನ ಕುರಿತು ಡಾ|| ತಾಳ್ತಜೆಯವರು ಬರೆದ ಲೇಖನವನ್ನು ವಿಶ್ವಾಸವಿರಿಸಿ ಪ್ರಕಟಿಸಿದ ನಿಮ್ಮ ಹೃದಯೊಂತಿಕೆಗೆ ನಾನು ಋಣಿ.

ಎಲ್ಲ ಲೇಖನಗಳೂ ತುಂಬಾ ಉಪಯುಕ್ತವಾಗಿವೆ. ಪತ್ರಿಕೆಗೂ ನಿಮಗೂ ಶ್ರೇಯಸ್ಸು ಲಭಿಸಲಿ.

ಪೆರಡಾಲ
೨೦-೧೨-೯೭

ಇತಿ ನಿಮ್ಮ
ಕಯ್ಯಾರ ಕಿಞ್ಞಣ್ಣ ರೈ

*   *   *   *   *

ಮಾನ್ಯರೇ,

೯೭ನೇ ಸಾಲನ್ನು ಸುವರ್ಣಸ್ವಾತಂತ್ರ್ಯದ ವರ್ಷವೆಂದು ರಾಷ್ಟ್ರಾದ್ಯಂತ ಆಚರಿಸಲಾಗುತ್ತಿದೆ. ವರ್ಷಾರಂಭದಿಂದ-ಅಂತ್ಯದವರೆಗೆ ಅವಲೋಕಿಸಿದಾಗ ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ದುಡಿದ ಮಹನೀಯರು ಇಲ್ಲವಾಗಿ, ಕೀರ್ತಿಶೇಷರಾಗಿದ್ದಾರೆ. ಅನಾಥರ ನೊಂದವರ ಕಣ್ಣೀರು ಒರೆಸಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದ ಮಾತೆ ತೆರೆಸಾ, ರಾಜಕೀಯದಲ್ಲಿ ಶುದ್ಧ ಹಸ್ತರಾದ ಶ್ರೀ ವೀರೇಂದ್ರಪಾಟೀಲ, ಕಡಲ ತೀರದ ಭಾರ್ಗವ ಶಿವರಾಮಕಾರಂತ, ಹಿರಿಯ ವಿದ್ವಾಂಸರುಗಳಾದ ಕೆ. ಕೃಷ್ಣಮೂರ್ತಿ, ಶಂಕರನಾರಾಯಣರಾವ್, ಶ್ರೇಷ್ಠ ಸಂಗೀತ ವಿದ್ವಾಂಸರಾದ ಚಿಟ್ಟಿಕೃಷ್ಣಯ್ಯಂಗಾರ್, ವೀಣಾ ದೊರೆಸ್ವಾಮಯ್ಯಂಗಾರ್, ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ದುಡಿದ ಟಿ. ಆರ್. ನಾಗಪ್ಪ, ಎಸ್. ರಜತಾದ್ರಿ ಇವರ ಬಗ್ಗೆ ನಾಡಿನ ಜನತೆ ಕಂಬನಿ ಹರಿಸಿ ಸ್ಮರಿಸಿದೆ.

ಇಂಥವರ ಬಗ್ಗೆ ; ಅವರ ಸಾಧನೆಯನ್ನು ಕುರಿತು ಪುಸ್ತಕ ಪ್ರಪಂಚ, ತನ್ನ ಓದುಗರಿಗೆ ಮೌಲಿಕವಾದ ಲೇಖನಗಳನ್ನು, ಚಿತ್ರಗಳನ್ನು ಪ್ರಕಟಿಸಿ

ಸ್ಮರಿಸಿದೆ. ಈ ಚೇತನಗಳನ್ನು ಹತ್ತಿರದಿಂದ ಬಲ್ಲವರು. ಬರೆದಿರುವುದು ವಿಶೇಷ; ಅವರೆಲ್ಲ ಬಹುಶ್ರುತರು, ವಿಪುಲ ಜೀವನಾನುಭವವುಳ್ಳವರಾಗಿದ್ದು, ನಾಡಿನ ಏಳ್ಗೆಗೆ ದುಡಿದವರಾಗಿರುತ್ತಾರೆ.

ಮೇಲೆ ತಿಳಿಸಿದ ಹಿರಿಯರೊಡನೆ ಸಾಹಿತ್ಯಿಕ, ಸಾಂಸ್ಕೃತಿಕ ಸಂಬಂಧವಿರಿಸಿಕೊಂಡಿದ್ದ, ಮಂಗಳೂರಿನ ೬೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀ ಕಯ್ಯಾರ ಕಿಞ್ಞಣ್ಣರೈರವರು; ನಮ್ಮೊಡನೆ ಕ್ರಿಯಾಶೀಲರಾಗಿರುವುದು ಸಂತಸ ತರುವ ವಿಷಯ. ಅವರ ಬಗ್ಗೆ 'ಪುಸ್ತಕ ಪ್ರಪಂಚ' ಲೇಖನ ಪ್ರಕಟಿಸಿ ಉಪಕಾರ ಮಾಡಿದೆ.

ಪುಸ್ತಕ ಪ್ರಪಂಚ ೯೮ರ ಸಾಲಿನಲ್ಲಿಯೂ ಇದೇ ನಿಟ್ಟಿನಲ್ಲಿ ಮುಂದುವರಿಯಲಿ ಎಂದು ಆಶಿಸುತ್ತೇನೆ.

ಸುಕನ್ಯಾ

ವಿಜಯನಗರ
ಬೆಂಗಳೂರು—೪೦

* * * * *

ಸಂಪಾದಕರೇ,

ಪುಸ್ತಕ ಪ್ರಪಂಚ ನವೆಂಬರ್—ಡಿಸೆಂಬರ್ ಸಂಚಿಕೆಯು ಸಂದರ್ಭಕ್ಕೆ ಅನುಗುಣವಾಗಿ ೬೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಗಡಿನಾಡ ಕನ್ನಡ ಹೋರಾಟಗಾರ, ಸಾಹಿತಿ, ಸಮಾಜ ಕಾರ್ಯಕರ್ತ, ಸ್ವಾತಂತ್ರ್ಯ ಸೇನಾನಿ ಕಯ್ಯಾರ ಕಿಞ್ಞಣ್ಣರೈ ಅವರನ್ನು ಕುರಿತು ಡಾ॥ ತಾಳ್ತಜೆ ವಸಂತಕುಮಾರ ಅವರು ಬರೆದಿರುವ ಲೇಖನವು ಉಪಯುಕ್ತವಾಗಿದೆ.

ಇದೇ ರೀತಿಯಲ್ಲಿ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸಿ ಕಣ್ಮರೆಯಾಗಿರುವ ಕನ್ನಡ ಹೋರಾಟಗಾರ ರಹಮಾನ್ ಖಾನ್ ಮತ್ತು ಸಾಹಿತಿ, ಪ್ರಕಾಶಕ ಪ್ರೊ॥ ಎಚ್. ಎಂ. ಶಂಕರನಾರಾಯಣರಾವ್ ಅವರನ್ನು ಸ್ಮರಿಸಿಕೊಂಡಿರುವುದು ಸಂದರ್ಭೋಚಿತವಾಗಿದೆ. ಈ ಎರಡು ಚೇತನಗಳೂ ಎಲೆಮರೆಯ ಕಾಯಿಯಂತೆ ಕನ್ನಡ ಸೇವಾ ದೀಕ್ಷೆಯನ್ನು ಕೈಗೊಂಡವರು. ಈ ಇಬ್ಬರನ್ನೂ ತಮ್ಮ ಲೇಖನಗಳ ಮೂಲಕ ಪರಿಚಯಿಸಿ ಕೊಟ್ಟ ರಂಗಧಾಮಯ್ಯ ಮತ್ತು ಸಿ. ನಾಗಣ್ಣ ಅವರಿಗೆ ನನ್ನ ವಂದನೆಗಳು.

ಸಿ. ಗಿರಿರಾಜ್

ಕೊರಟಗೆರೆ

Reg. No. KRNN.29 / WPP 6

LICENCE No. 21
LICENCED TO POST WITH PAYMENT

ಸಮಿತಿಯ ವಿಶೇಷ ಪ್ರಕಟಣೆಗಳು

"ಜನಪ್ರಿಯ ವಾಲ್ಮೀಕಿ ರಾಮಾಯಣ"—ರಾಷ್ಟ್ರಕವಿ ಕುವೆಂಪು

—ಸರಳ ಗದ್ಯದ ಅಂದವಾದ ಮುದ್ರಣದ ೪೨೬ ಪುಟಗಳ ಸಮಗ್ರ
ರಾಮಾಯಣದ ಬೆಲೆ .... ೫೪-೦೦ ರೂ

"ಶರಣ ಚರಿತಾಮೃತ"—ಸಿದ್ದಯ್ಯ ಪುರಾಣಿಕ

—ಮಾದಾರ ಚೆನ್ನಯ್ಯನಿಂದ ಮೊದಲುಗೊಂಡು ೭೨ ಶಿವಶರಣರ
ಜೀವನ ಚಿತ್ರಣ ಒಳಗೊಂಡ ೮೦೦ ಪುಟಗಳ ಕೃತಿಯ ಬೆಲೆ .... ೭೫-೦೦ ರೂ.

"ಯುದ್ಧ ಮತ್ತು ಶಾಂತಿ" (ಅನುವಾದ)—ಡಾ|| ದೇ. ಜವರೇಗೌಡ

—ಮೂರು ಸಂಪುಟಗಳಲ್ಲಿ; ಪ್ರತಿ ಸಂಪುಟದ ಬೆಲೆ .... ೫೦-೦೦ ರೂ.

"ನಕ್ಷತ್ರ ವೀಕ್ಷಣೆ"—ಜಿ. ಟಿ. ನಾರಾಯಣರಾವ್

—ನಕ್ಷತ್ರಗಳನ್ನು ಕುರಿತು ಕುತೂಹಲ ತಣಿಸುವ ೧೨೦ ಪುಟಗಳ
ಕೃತಿಯ ಬೆಲೆ .... ೨೦-೦೦ ರೂ.

"ನನ್ನೂರು"—ಡಾ|| ಎಚ್. ಎಲ್. ನಾಗೇಗೌಡ

—೩೫೦ ಪುಟಗಳ ಈ ಕಾದಂಬರಿಯ ಬೆಲೆ .... ೮-೦೦ ರೂ.

* ಅಂಚೆ ಮೂಲಕ ಬೇಕಾದಲ್ಲಿ ಅಂಚೆ ವೆಚ್ಚ ಪ್ರತ್ಯೇಕ.

* ೫೦೦ ರೂ ಗಳಿಗೆ ಮೇಲ್ಪಟ್ಟು ಕೊಂಡಲ್ಲಿ ೩೩ ೧/೩ ಭಾಗ ರಿಯಾಯ್ತಿ.

* ಕೆಲವೇ ಪ್ರತಿಗಳು ಮಾತ್ರ ಲಭ್ಯ.

ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕ. ರಾ. ವ. ಶಿ. ಸಮಿತಿ
೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

Edited by Chandrashekhararadhya, Printed by Pápanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

✆ : 512485